– ಗೊಂದಲ –

ಅವರು ರಿಪ್ಲೈ ಕೊಟ್ಟಮೇಲೆ ತಾವುಗಳು ಮಾತನಾಡಿ. ಅವರುಗಳು ರೈತರ ಕಷ್ಟಗಳನ್ನು ಹೇಳಿಕೊಳ್ಳುವುದರಲ್ಲಿ ತಪ್ಪಿಲ್ಲ.

ಬಿ. ಸೋಮಶೇಖರ್ (ಮಳವಳ್ಳಿ) :– ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಬಹಳ ಪ್ರಮುಖವಾದ ವಿಚಾರವನ್ನು ಎತ್ತಿದ್ದಾರೆ. ಕೇಂದ್ರಸರಕಾರದವರು ಕಬ್ಬುಬೆಳೆಗಾರರ ವಿಚಾರದಲ್ಲಿ ಮಲತಾಯಿಧೋರಣೆಯನ್ನು ಮಾಡಿದೆ ಎಂಬುದು. ನಾವು ವಿರೋಧಪಕ್ಷದವರೂ ಕೂಡ ಕೇಂದ್ರ ಸರಕಾರದವರು ಕೊಟ್ಟ ಹಣವನ್ನು ರಾಜ್ಯ ಸರಕಾರದವರು ಬಳಸಿಕೊಂಡಿಲ್ಲವೆಂಬ ಆಪಾದನೆಯನ್ನೂ ಕೂಡ ಮಾಡಿದ್ದೇವೆ. ಈಗ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೇ. ಕೇಂದ್ರ ಸರಕಾರದವರು ಈ ರೀತಿಯಾಗಿ ನಡೆದುಕೊಂಡಿರುವ ವಿಚಾರದಲ್ಲಿ ರಾಜ್ಯ ಸರಕಾರವು ಯಾವರೀತಿಯಾಗಿ ನಡೆದುಕೊಂಡಿದೆ, ಇದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಬೇಕಾಗುತ್ತದೆ. ಈ ಎರಡೂ ವಿಚಾರಗಳಲ್ಲಿಯೂ ಒಂದು ನಿರ್ಣಯವನ್ನು ಮಂಡಿಸಿ. ಆ ನಿರ್ಣಯಕ್ಕೆ ನಾವು ಬೆಂಬಲವನ್ನು ಕೊಡುತ್ತೇವೆ.

ಅಧ್ಯಕ್ಷರು :– ಆಯಿತು, ಆಯಿತು, ಮಾನ್ಯ ಖರ್ಗೆಯವರು ತಮ್ಮ ಉತ್ತರವನ್ನು ಪ್ರಾರಂಭಿಸಿ.

2. ನಿಯಮ 159ರ ಪ್ರಸ್ತಾವನೆ ಮೇಲೆ ನಡೆದ ಚರ್ಚೆಗ ಸರ್ಕಾರದ ಉತ್ತರ

ವಿಷಯ :– ರಾಜ್ಯದಲ್ಲಿ ತಲೆ ದೋರಿರುವ ಬರಗಾಲ ಪರಿಸ್ಥಿತಿ ಬಗ್ಗೆ

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :– ಸನ್ಮಾನ್ಯ ಸಭಾಧ್ಯಕ್ಷರೇ ಬರಗಾಲದ ವಿಷಯದ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಬರಗಾಲದ ಬಗ್ಗೆ ಪ್ರಸ್ತಾಪ ಮಾಡಿದಂಥ ನಿರ್ಣಯದ ಮೇಲೆ, ಸಾಕಷ್ಟು ಚರ್ಚೆಯಾಗಿದೆ. ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಜಗದೀಶ ಶೆಟ್ಟರ್‌ರವರು, ಮತ್ತು ಎಸ್.ಎಸ್. ಪಾಟೀಲರವರು, ಕೆ.ಎಂ. ಕೃಷ್ಣಮೂರ್ತಿಯವರು, ಕೆ. ಶ್ರೀನಿವಾಸಗೌಡರು, ವೈ.ಕೆ. ರಾಮಯ್ಯನವರು, ಬಿ.ಆರ್. ಯಾವಗಲ್‌ರವರು, ಎ. ರಾಮದಾಸ್‌ರವರು, ಗುರುಸ್ವಾಮಿಯವರು, ಮುದ್ದಹನುಮೇಗೌಡರು, ಪಿ.ಜಿ. ಆರ್. ಸಿಂಧ್ಯರವರು, ಪ್ರಕಾಶ್ ಖಂಡ್ರಯವರು, ಕರಡಿ ಸಂಗಣ್ಣರವರು, ಎ.ಎಸ್. ಗುರುಸ್ವಾಮಿಯವರು, ಶಿವಾನಂದ ಎಸ್. ಪಾಟೀಲ್‌ರವರು, ಬಿ. ಸೋಮಶೇಖರ್‌ರವರು, ಕರಿಯಣ್ಣನವರು, ರೇವು ನಾಯಕ್ ಬೆಳಮಗಿಯವರು, ಹಾಗೂ ಕೊನೆಯದಾಗಿ ಚೆಲುವನಾರಾಯಣ ಸ್ವಾಮಿಯವರು ಸಾಕಷ್ಟು ಬರಪರಿಸ್ಥಿತಿ ಬಗ್ಗೆ ಮತ್ತು ಈ ವಿಚಾರದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಲೋಪದೋಷಗಳು ಎಲ್ಲಿವೆ ಎಂಬುದನ್ನು ಕೂಡ, ಅವರ ಪ್ರಕಾರ ಎಲ್ಲೆಲ್ಲಿ ನಮ್ಮ ವರದಿ ಲೋಪವಾಗಿದೆ ಎಂಬ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಸುಮಾರು 18 ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. 16 ಘಂಟೆಗಳ ಕಾಲ ಚರ್ಚೆಯು ಇಲ್ಲಿ ನಡೆದಿದೆ. ಅದರಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಕೆಲವು ವಿಷಯಗಳನ್ನು ಈ ಸದನದ ಮುಂದೆ ಪ್ರಸ್ತಾಪ ಮಡತಕ್ಕಂಥಾದ್ದು ಬಹಳ ಒಳ್ಳೆಯದು ಎಂದು ತಿಳಿದುಕೊಂಡು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಪ್ರಥಮವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಸೀಸನಲ್ ಕಂಡೀಶನ್ ಹೇಗೆ ಇದೆ ಮತ್ತು ಈ ಸೀಸನಲ್ ಕಂಡೀಶನ್‌ನಲ್ಲಿ ನಮಗೆ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಆದಂಥ ತೊಂದರೆ, ಮತ್ತು ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ನಾವು ಯಾವರೀತಿಯಾಗಿ ಸರ್ವ ಪ್ರಯತ್ನಗಳನ್ನು ಮಾಡಿದ್ದೇವೆ ಎನ್ನತಕ್ಕಂತಾದ್ದನ್ನು ನಾನು ಹೇಳಲೇ ಬೇಕಾಗುತ್ತದೆ ಇದು ಮೂರನೇ ವರ್ಷ ನಾವು ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಾ ಇದ್ದೇವೆ. ಹೋದ 2001–02ರಲ್ಲಿಯೂ ಕೂಡ ನಮಗೆ ತೊಂದರೆಯೇನಾಗಿತ್ತು. 2002–03ರಲ್ಲಿಯೂ ಕೂಡ ಅದೇ ತೊಂದರೆಯು ಮುಂದುವರಿಯಿತು. ಹಾಗೆಯೇ 2003–04ರಲ್ಲಿಯೂ ಕೂಡ ಆ ಪರಿಸ್ಥಿತಿಯು ಕೆಲವು ಭಾಗಗಳಲ್ಲಿ ಗಂಭೀರವಾಗಿ ಉಳಿದಿದೆ. ಕರ್ನಾಟಕ ರಾಜ್ಯದಲ್ಲಿ ಯಾವಾಗಲೂ ಕೂಡ ಈ ನಮ್ಮ ಹಿಂಗಾರು ಸುಮಾರು 69 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ನಾವು ಬಿತ್ತನೆಯನ್ನು ಮಾಡುತ್ತೇವೆ. ಇದು ಯಾವಾಗಲೂ ನಮ್ಮ ಗುರಿ. ಆದರೆ 2002ರಲ್ಲಿ ಆ ಗುರಿಯನ್ನು ನಾವು ಹೋಲಿಸಿ ನೋಡಿದಾಗ ಕೇವಲ 32ಲಕ್ಷ ಹೆಕ್ಟೇರ್‌ಗಳಲ್ಲಿ ಮಾತ್ರ ನಾವು ಬಿತ್ತನೆಯನ್ನು ಬಿತ್ತುವುದಕ್ಕೆ ಆಯಿತು. ಅದು ಮುಂಗಾರು ತದನಂತರ ಹಿಂಗಾರಿನಲ್ಲೂ ಕೂಡ 37 ರಲ್ಲಿ ನಮ್ಮದೇನು ಅಪೇಕ್ಷೆ ಇತ್ತು, ಅದರಲ್ಲಿ ಕೇವಲ 5 ಲಕ್ಷ ಹೆಕ್ಟೇರ್‌ಗಳಲ್ಲಿ ಮಾತ್ರ ನಾವು ಬಿತ್ತನೆಯನ್ನು ಮಾಡತಕ್ಕಂಥ ಸಾಧ್ಯವಾಯಿತು. ಅಂದರೆ ಹೆಚ್ಚು ಕಡಿಮೆ ನಾವು 24–25 ಪರ್‌ಸೆಂಟ್‌ಗಿಂತಲೂ ಹೆಚ್ಚು ಆಗುವುದಕ್ಕೆ ಆಗಲಿಲ್ಲ. 24–25ರಲ್ಲಿಯೂ ಕೂಡ ಸುಮಾರು 74 ತಾಲ್ಲೂಕುಗಳಲ್ಲಿ ಸಾಮಾನ್ಯ ಮಳೆಯಿದೆ. 102 ತಾಲ್ಲೂಕುಗಳಲ್ಲಿ ಸಾಮಾನ್ಯಕ್ಕಿಂತಲೂ ಕಡಿಮೆಯಿದೆ. ಇದು 14–07–03ರ ಅಂಕಿ ಅಂಶಗಳ ಪ್ರಕಾರ.

ಆಮೇಲೆ 27 ತಾಲ್ಲೂಕುಗಳಲ್ಲಿ ಅತ್ಯಂತ ಕಡಿಮೆ ಮಳೆ ಇದೆ. ಅದಕ್ಕೇ ಮುಂಗಾರು ಹಂಗಾಮಿನ ಬಿತ್ತನೆ ಸುಮಾರು 69 ಲಕ್ಷ ಹೆಕ್ಟೇರ್‌ನಲ್ಲಿ ಆಗಬೇಕಾದಂತದ್ದು ಇವತ್ತು ಕೇವಲ 16.84 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಆಗಿದೆ. ಇದು ಏನು ತೋರಿಸುತ್ತದೆ ಅಂದರೆ ಇನ್ನೂ ಪರಿಸ್ಥಿತಿ ಸಾಕಷ್ಟು ಗಂಭೀರವಾಗಿದೆ. ಈ ಪರಿಸ್ಥಿತಿಯನ್ನು ನಾವು ಇನ್ನೂ ಎದುರಿಸಬೇಕಾದ ಅವಶ್ಯಕತೆ ಇದೆ. ಈಗಾಗಲೇ ಕೆಲವು ಅಂಕೆಸಂಖ್ಯೆಗಳು ಈ ಸದನದಲ್ಲಿ ಪ್ರಸ್ತಾಪವಾಗಿವೆ. ನಮ್ಮ agricultural production ಕೂಡ ಕಡಿಮೆಯಾಗಿದೆ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದರು. Naturally continuous ಆಗಿ ಎರಡು ವರ್ಷ 4 ತಿಂಗಳಿಂದ ಸತತವಾಗಿ ಬರಗಾಲ ಎದುರಿಸುವಾಗ ನಮ್ಮ agricultural production ಖಂಡಿತ ಕಡಿಮೆಯಗುತ್ತದೆ. ಇಡೀ ರಾಷ್ಟ್ರದಲ್ಲಿ ಮಾನ್ಯ ಸೋಮಶೇಖರ್ ಹೇಳಿದಂತೆ 4% ಹೆಚ್ಚಿಗೆ ಆದರೆ ಕರ್ನಾಟಕ ರಾಜ್ಯದಲ್ಲಿ 8% ಕಡಿಮೆಯಾಗಿದೆ. ಬರಗಾಲದಲ್ಲಿ ಕಡಿಮೇನೇ ಆಗುತ್ತದೆ. ಹೆಚ್ಚಿಗೆ ಆಗುವ ಪ್ರಶ್ನೆನೇ ಬರುವುದಿಲ್ಲ ದೇಶದ ಸರಾಸರಿ ನೋಡಿದಾಗ 4% ಹೆಚ್ಚಿಗೆ ಆಗಿರಬಹುದು, ಆದರೆ ರಾಜ್ಯದಲ್ಲಿ 176 ತಾಲ್ಲೂಕುಗಳ ಪೈಕಿ 159 ತಾಲ್ಲೂಕುಗಳಲ್ಲಿ ಬರಗಾಲ ಇದ್ದಾಗ ಖಂಡಿತವಾಗಿ agricultural production ಕುಸಿಯುವ ಸಾಧ್ಯತೆ ಇದೆ. ಕುಸಿದು ಬಿದ್ದಿದೆ. ಅದಕ್ಕಾಗಿ ನಾವು ಅನೇಕ ಬರಗಾಲ ಕಾಮಗಾರಿಗಳನ್ನು ಕೈಯಲ್ಲಿ ಎತ್ತಿಕೊಂಡಿದ್ದು. ಇಂತಹ ಒಂದು ಪರಿಸ್ಥಿತಿ ಇವತ್ತು ನಮ್ಮ seasonal conditions ದ್ದು ಇದೆ. ಇಂತಹ ಹವಾಮಾನ ಪರಿಸ್ಥಿತಿ ಇದ್ದಾಗ ಬೆಳೆ ಪರಿಸ್ಥಿತಿ ಕೂಡ ಅದೇ ರೀತಿಯಾಗಿ ನಾವು ಕಾಣುತ್ತಿದ್ದೇವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ಕೇಂದ್ರ ಸರ್ಕಾರ ಯಾವ ರೀತಿಯಾಗಿ ಅನುದಾನಕ್ಕಾಗಿ ಮನವಿ ಮಾಡಿತ್ತು. ರಾಜ್ಯ ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಿದೆ ಎಂಬುದು ಗೊತ್ತಾಗಬೇಕು. ಯಾಕೆಂದರೆ ಸದನದಲ್ಲಿ ಅನೇಕ ಮಾನ್ಯ ಸದಸ್ಯರು ಇದನ್ನು ಪ್ರಸ್ತಾಪಿಸಿದರು. ಅವರು ಕೇಳಿದರು: ನೀವೇನು ಖರ್ಚು ಮಾಡಿದಿರಿ? ಕೇಂದ್ರ ಸರ್ಕಾರದ ಹಣ ಎಷ್ಟು ಬಂತು? ಇದೆಲ್ಲಾ ನಮಗೆ ಗೊತ್ತಾಗಬೇಕು. ಸದನದ ಮುಂದೆ

ತಾವು ಇಡಬೇಕು ಎಂಬ ಮಾತನ್ನು ಸಾಕಷ್ಟು ಮಾನ್ಯ ಸದಸ್ಯರು ಈ ಸದನದ ಮುಂದೆ ಪ್ರಸ್ತಾಪಿಸಿದ್ದಾರೆ. ಅಧ್ಯಕ್ಷರೇ, 2001-02 ರಲ್ಲಿ ನಾನು ಈಗಾಗಲೇ ಹೇಳಿದಂತೆ ಆಗಲೂ ಕೂಡ ಮುಂಗಾರು ಮತ್ತು ಹಿಂಗಾರು ಎರಡೂ ಬೆಳೆ ಕೂಡ fail ಆಗಿತ್ತು. ಆಗ ನಾವು ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿದೆವು. ಅದರಲ್ಲಿ 903 ಕೋಟಿ ರೂ ಕೇಳಿದ್ದೆವು. ಆದರೆ ನಮಗೆ ಯಾವ ಹಣವೂ ಆ ವರ್ಷದಲ್ಲಿ ಬಿಡುಗಡೆ ಆಗಲಿಲ್ಲ. ಯಥಾಪ್ರಕಾರ Natural Calamity Fund ಏನಿರುತ್ತದೆ ನಮ್ಮ ಷೇರು ಮತ್ತು ಕೆಂದ್ರ ಸರ್ಕಾರದ ಷೇರು ಅದು ಬಿಟ್ಟರೆ ಬೇರೆ ಹಣ ನಮಗೆ ಎಲ್ಲೂ ಬರಲಿಲ್ಲ ಕೇವಲ ಒಂದು ಲಕ್ಷ ಮೆಟ್ರಿಕ್‌ಟನ್ ಆಹಾರಧಾನ್ಯ ಮಾತ್ರ ಆ ವರ್ಷದಲ್ಲಿ ಬಂತು ಅದು ಸೆಪ್ಟೆಂಬರ್ 2002ರಲ್ಲಿ ಉಳಿದಂತೆ ನಮಗೆ ಯಾವ ಹಣಕಾಸಿನ ಸಹಾಯವೂ ಬರಲಿಲ್ಲ. ಅದಾದಮೇಲೆ 2002 ರಲ್ಲಿ ನಾವು ಇನ್ನೊಂದು Memorandum ಕೊಟ್ಟಿದ್ದೇವೆ. ಅದರಲ್ಲಿ ನಾವು interim memorandum ಕೊಟ್ಟಾಗ 256 ಕೋಟಿ ರೂ ನಾವು ಕೇಳಿದೆವು. ತದನಂತರ Central Team ಬಂದ ಮೇಲೆ revised memorandum ಕಳುಹಿಸಿ ಅದರಲ್ಲಿ ಸುಮಾರು 1562 ಕೋಟಿರೂಗಳ ಬೇಡಿಕೆಯನ್ನು ಕೇಂದ್ರ ಸರ್ಕಾರದ ಮುಂದೆ ನಾವು ಇಟ್ಟೆವು. 1562 ಕೋಟಿ ರೂ ಹಣ ಮತ್ತು 11.09 ಮೆಟ್ರಿಕ್‌ಟನ್ ಆಹಾರಧಾನ್ಯ ಕೇಳಿದೆವು. ಆದರೆ ನಮಗೆ ಸಿಕ್ಕಿದೆಷ್ಟು ಅಂದರೆ 2002-03, 2003-04 ಇಲ್ಲಿವರೆಗೆ ಸೇರಿ 301.68 ಕೋಟಿ ರೂ. ಎರಡು ವರ್ಷಗಳಿಂದ ನಮಗೆ ಸಿಕ್ಕಿದ್ದು ಇಷ್ಟು. ಇಷ್ಟು ಹಣ ಅವರ ಕಡೆಯಿಂದ ಬಿಡುಗಡೆಯಾದ ಮೇಲೆ ನಮ್ಮ ಸರ್ಕಾರದ ವತಿಯಿಂದ ನೀವೇನು ಖರ್ಚು ಮಾಡಿದಿರಿ ಎಂದು ಪದೇಪದೇ ಸದನದಲ್ಲಿ ಅವರು ಕೇಳಿದ್ದಾರೆ ನಮ್ಮ ಸರ್ಕಾರ ಅನೇಕ budget ಕಾಮಗಾರಿಗಳನ್ನು ನಿಲ್ಲಿಸಿ ಆ ಹಣವನ್ನು ಬರ ಕಾಮಗಾರಿಗಾಗಿ ಮತ್ತು labour oriented ಕೆಲಸಕ್ಕಾಗಿ ಕೊಟ್ಟು ಸುಮಾರು 450 ಕೋಟಿ ರೂವರೆಗೆ ನಮ್ಮ ಹಣವನ್ನು ಖರ್ಚು ಮಡಿದ್ದೇವೆ. ಮತ್ತು 2001-02 ರಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಹಣ ಬರದಿದ್ದರೂ ಕೂಡ ನಾವು 112 ಕೋಟಿ ರೂ ನಮ್ಮ ಹಣ ಖರ್ಚು ಮಾಡಿದ್ದೇವೆ. CRF ನಿಂದ ನಮಗೆ ಕೊಟ್ಟ 54 ಕೋಟಿ ರೂ ಮತ್ತು ಉಳಿದ 54 ಕೋಟಿ ರೂ ಸೇರಿಸಿ 112 ಕೋಟಿ ರೂ ಖರ್ಚು ಮಾಡಿದ್ದೇವೆ. ಅದು exclusive ಆಗಿ ನಮಗೆ ಸಿಗತಕ್ಕಂತಹ ಹಣ ಮತ್ತು ನಾವು ಸಂಗ್ರಹಿಸಿದ್ದ ಹಣ – ಈ ಎರಡು ವರ್ಷದಲ್ಲಿ ಕೂಡ 450 ಕೋಟಿ ರೂ ನಾವು ಖರ್ಚು ಮಾಡಿದ್ದೇವೆ. ಮೊದಲನೇ ಸಾಲಿನಲ್ಲೂ ನಮ್ಮ ರಾಜ್ಯಸರ್ಕಾರ ಖರ್ಚು ಮಾಡಿದ್ದನ್ನು ನಾನು ಆಗಲೇ ಪ್ರಸ್ತಾಪಿಸಿದ್ದೇನೆ. ಹೀಗೆ ಒಟ್ಟಾರೆ ಹೇಳಬೇಕಾಗಿದ್ದರೆ. ಇವತ್ತಿನ ಪರಿಸ್ಥಿತಿಯೊಳಗೆ 2 ವರ್ಷ 3 ತಿಂಗಳಲ್ಲಿ ಬರಗಾಲ ಕಾಮಗಾರಿಗಳಿಗಾಗಿ ಕೇಂದ್ರದಿಂದ ಒಟ್ಟು 358 ಕೋಟಿ ರೂ ಯನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಕೂಡ ರಾಜ್ಯ ಸರ್ಕಾರ 520 ಕೋಟಿ ರೂ ಖರ್ಚು ಮಾಡಿದೆ. ಇದು cash portion ಮಾತ್ರ ನಾನು ಹೇಳುತ್ತಿರುವುದು. ಇಷ್ಟೊಂದು ಹಣ ಬಹುಶಃ ಯಾವ ಸರ್ಕಾರವೂ ಯಾವ ಕಾಲದಲ್ಲೂ ಮಾಡಿಲ್ಲ ಎಂದು ನನಗನ್ನಿಸುತ್ತದೆ. ಇವೆರಡೂ ಲೆಕ್ಕ ತೆಗೆದುಕೊಂಡರೆ ಸುಮಾರು 870 ಕೋಟಿ ರೂಗಳನ್ನು ಈ ಬರಗಾಲ ಕಾಮಗಾರಿಗಳಿಗೆ ಖರ್ಚು ಮಾಡಿದ್ದೇವೆ. ಇನ್ನು ನಮ್ಮ ಮುಂದಿರುವುದು ಎಂದರೆ ಇದರಿಂದ ಎಷ್ಟು ಕೆಲಸ ತೆಗೆದುಕೊಂಡಿದ್ದೀರಿ ಏನೇನು ಮಾಡಿದ್ದೀರಿ ಅದು ನಮಗೆ ಗೊತ್ತಾಗುತ್ತಾ ಇಲ್ಲ. ಎಂಥೂ ನಮ್ಮನ್ನು ಕೇಳುತ್ತಿದ್ದಾರೆ. ಅದರ ಜೊತೆಯಲ್ಲಿ ಕೆಲವರು ಮಾತನಾಡುವಾಗ ಪ್ರಸ್ತಾಪವಾದದ್ದು HKDB ಯಲ್ಲಿ ಹೇಗೆ ಮಾಡಿದಿರಿ? ಮಲೆನಾಡಿನಲ್ಲಿ ಎಲ್ಲಿ ದುಡ್ಡಿದೆ? ಯಾಕೆಂದರೆ ಎಲ್ಲಿ ನಾವು ಕೂಲಿಗಾಗಿ ಕಾಳು ಯೋಜನೆಯಡಿ foodgrains ಕೊಟ್ಟಿದ್ದೇವೆ ಅಂತಹ ಹಣ ಮಾತ್ರ ನಾನು ಇಲ್ಲಿ ಹೇಳಿದ್ದು ಉದಾಹರಣೆಗೆ PWD

ಯಲ್ಲಿ ಕೋಟ್ಯಾಂತರ ರೂ ಖರ್ಚು ಮಾಡುತ್ತಾರೆ ಆದರೆ ಕೂಲಿಗಾಗಿ ಕಾಳುಗೆ ತೋರಿಸಿಕೊಟ್ಟ ಹಣ ಅಲ್ಲಿ ಕೇವಲ 3.97 ಕೋಟಿ ರೂ ಅದೇ ರೀತಿ irrigation ನಲ್ಲಿ 7 ಕೋಟಿ ರೂ HKDB ಯಲ್ಲಿ 10 ಕೋಟಿ ರೂ MADB ಯಲ್ಲಿ 5 ಕೋಟಿ ರೂ ಅಲ್ಲದೆ ಉಳಿದಂತೆ ನಾವು crop insurance ಗೆ ಕೊಡುವ ದುಡ್ಡಾಗಲಿ ಅಥವಾ cooperation ಇಲಾಖೆಯಲ್ಲಿ ಈಗಾಗಲೇ interest subsidy ಕೊಡುತ್ತೇವೆ ಎಂದು ಹೇಳಿದ್ದೇವೆ. ಈಗಾಗಲೇ 33 ಕೋಟಿ ಬಿಡುಬಡೆ ಮಾಡಿದ್ದೇವೆ, ಉಳಿದ ಹಣವನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಒಂದು ಸಲವಲ್ಲ ಅನೇಕ ಸಾರಿ ಪ್ರಸ್ತಾಪ ಮಾಡಿದ್ದಾರೆ. ಉಳಿದ ಹಣವನ್ನೂ ನಾನು ತಕ್ಷಣ ಬಿಡುಗಡೆ ಮಾಡುತ್ತೇನೆ ಎಂದು ಹೇಳಿದ್ದಾರೆ ಈಗಾಗಲೇ ಈ ಮಾತನ್ನು ಮೇಲ್ಮನೆಯಲ್ಲಿ ನಾವು ಸ್ಪಷ್ಟಪಡಿಸಿದ್ದೇವೆ. ಯಾವುದೇ ರೀತಿಯಿಂದಾದರೂ ನಾವು ಆ ಹಣ ತುಂಬಿಸುತ್ತೇವೆ ಆದರೆ ನಮ್ಮ ನಂಬಿಕೆ ಏನಿತ್ತು ಅಂದರೆ ಕೇಂದ್ರ ಸರ್ಕಾರ ಮೊದಲು 50% ಹಣ ಕೊಡುತ್ತದೆ ಎಂಬ ಆಶಯ ಇತ್ತು ಆದರೆ ಅವರ 50% ಹೋಗಿ ಕೊನೆಗೆ ಅವರು ಎಲ್ಲಿಗೆ ಬಂದರು ಅಂದರೆ 20% ಗೆ ಬಂದರು. ಆ 20% ಕೂಡ ಯಾವ ರೀತಿಯಿಂದ ಕೊಡುತ್ತಾರೆ ಎಂಬುದು ವಿಶೇಷವಾಗಿ ನಮ್ಮ ಸಹಕಾರ ಮಿತ್ರರಿಗೆ ಗೊತ್ತಿದೆ. ಆ ಹಣ ಕೂಡ ಇವತ್ತು ನಮಗೆ ನೇರವಾಗಿ ಸಿಕ್ಕುವುದಿಲ್ಲ ಅದಕ್ಕೇ ultimately ನಾವು ಇವತ್ತಿನ ದಿವಸ ಎಲ್ಲಾ ಹಣವನ್ನು ಭರಿಸತಕ್ಕಂತಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಈ ಹಣ ನೇರವಾಗಿ ರೈತರಿಗೆ ಹೋಗುತ್ತದೆ Drought affected ಅಂತ ಹೇಳಿಯೇ ಈ ಸೌಲಭ್ಯವನ್ನು ನಾವು ಕೊಟ್ಟಿದ್ದೇವೆ.

11.40 ಎ.ಎಂ

ಇದಲ್ಲದೆ ನಾವು ಕೆಪಿಟಿಸಿಎಲ್‌ಗೆ ಕುಡಿಯುವ ನೀರಿಗಾಗಿ ವಿಶೇಷವಾಗಿ ನಾವು ಸಬ್ಸಿಡಿಯನ್ನು ಸುಮಾರು ಇಪ್ಪತ್ತೇಳು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಂದರೆ ಅವರಿಗೆ ಪೋಲ್ಸ್, ಕಂಡಕ್ಟರ್ ವೈರ್ ಇದನ್ನು ಎಮರ್ಜೆನ್ಸಿಯಲ್ಲಿ ಡ್ರಿಂಕಿಂಗ್ ವಾಟರ್‌ಗೆ ಎನರ್ಜೈಸ್ ಮಾಡುವುದಕ್ಕೆ ಅದರಲ್ಲಿ ಸುಮಾರು 27 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಆಮೇಲೆ ಆರ್‌ಡಿಪಿಆರ್ ನಲ್ಲಿ ನಾವು ಜನರಿಗೆ ಕೆಲಸವನ್ನು ಕೊಡಬೇಕೆನ್ನುವ ದೃಷ್ಟಿಯಿಂದ ಮತ್ತು ಸಾಕಷ್ಟು ಲೇಬರ್ ಓರಿಯೆಂಟೆಡ್ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಹೆಚ್ಚು ಕಡಿಮೆ ಈ ಗ್ರಾಮ ಪಂಚಾಯಿತಿಗಳಿಗೆ ತಮಗೆ ಗೊತ್ತಿರುವ ಹಾಗೆ ಸುಮಾರು ಎರಡು-ಲಕ್ಷ ಮೂರು ಲಕ್ಷ ರೂ ಅವರ ಹತ್ತಿರ ಏನು ಗ್ರಾಂಟ್ ಇತ್ತು, ಅಥವಾ ಅವರು ಕಲೆಕ್ಟ್ ಮಾಡಿದಂಥ ಹಣ ಮನೆ ಕಂದಾಯ ಈ ರೀತಿಯಾಗಿ ಏನು ತೆರಿಗೆಯನ್ನು ವಸೂಲು ಮಾಡಿದ್ದರು. ಅದೆಲ್ಲಾ ಸೇರಿದರೆ ಸುಮಾರು ನೂರು ಕೋಟಿ ರೂಪಾಯಿ ಕ್ಯಾಷ್. ಅದಕ್ಕೆ ನಾವು ಫುಡ್‌ಗ್ರೈನ್ಸ್‌ನ್ನು ಸೇರಿಸಿ ಆ ಕೆಲಸವನ್ನೂ ಕೂಡ ತೆಗೆದುಕೊಂಡಿದ್ದೇವೆ. ಇದರಿಂದಾಗಿ ಅನೇಕ ಗ್ರಾಮ ಪಂಚಾಯಿತಿಗಳಲ್ಲೂ ಕೂಡ ಜನರಿಗೆ ಕೆಲಸ ಕೊಡುವ ವ್ಯವಸ್ಥೆಯಾಗಿದೆ. ನಾವೇನು ಮಾಡುತ್ತೇವೆಂದರೆ ಇಂಥ ಡೆವಲಪ್‌ಮೆಂಟ್ ಕೆಲಸವನ್ನು ನೋಡುವಾಗ ಅಥವಾ ಈ ಎಸ್‌ಜಿಆರ್‌ವೈ ಕೆಲಸಗಳನ್ನು ತೆಗೆದುಕೊಂಡಾಗ ಅಥವಾ ಪಂಚಾಯತಿಯವರೂ ಕೂಡ ಈ ಕೆಲಸಕ್ಕೆ ಒತ್ತು ಕೊಟ್ಟಾಗ ನಮ್ಮ ಗಮನ ಆ ಕಡೆಗೆ ಹೋಗುವುದಿಲ್ಲ. ನಾವು ಯಾವಾಗಲೂ ಕೂಡ ತಿಳಿದುಕೊಳ್ಳುವುದೇನೆಂದರೆ ಬರಗಾಲಕ್ಕೆ ನೀವೆಷ್ಟು ಕೊಟ್ಟಿದ್ದೀರಿ ಹೇಳಿ ಎಂದು ತಾವು ಕೇಳುತ್ತೀರಿ. ಬರಗಾಲವನ್ನು ಎದುರಿಸುವುದಕ್ಕೋಸ್ಕರವೇ ಎಲ್ಲಾ ಇಲಾಖೆಗಳ ಸಹಾಯವನ್ನು ಪಡೆದುಕೊಂಡೇ ನಾವು ಎದುರಿಸುತ್ತೇವೆ. ಅದು ಕೆಪಿಟಿಸಿಎಲ್ ಇರಬಹುದು,

ಅದು ಕುಡಿಯುವ ನೀರಿನ ಸಮಸ್ಯೆಯೇ ಇರಬಹುದು. ಆರ್‌ಡಿಪಿಆರ್ ಇಲಾಖೆಯೇ ಇರಬಹುದು, ಎಂಎಲ್‌ಎ ಗ್ರಾಂಟ್ಸ್ ಇರಬಹುದು, ಈ ಒಂದು ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೋಸ್ಕರವೇ ಈ ಹಣವನ್ನು ಕ್ರೋಢೀಕರಿಸಿ ನಾವು ಇದಕ್ಕಾಗಿಯೇ ಉಪಯೋಗ ಮಾಡಿದ್ದೇವೆ. ಇದನ್ನು ಅಪ್ರೀಸಿಯೇಟ್ ಮಾಡಬೇಕು. ಅದನ್ನು ಬಿಟ್ಟು ನೀವು ಹಣವನ್ನು ಎಲ್ಲಿ ಕೊಟ್ಟಿರಿ? ಬರೀ ನಮ್ಮ ಹಣದಿಂದಲೇ ನಡೆದಿದೆ. ಕೇಂದ್ರಸರ್ಕಾರದ ಹಣ ಬಂದಿದೆ. ಬಾಕಿಯದು ಎಲ್ಲಿ ಹೋಯಿತು? ಇರತಕ್ಕ ಬಜೆಟ್‌ನಲ್ಲಿ ಏನೇನು ಪ್ರಾವಿಷನ್ ಇದೆ, ಮತ್ತು ಆ ಹಣದಲ್ಲೇ ಆ ರಿಸೋರ್ಸ್‌ನಲ್ಲೇ ನಾವೂ ನೀವೂ ಕೆಲಸ ಮಾಡಬೇಕಾಗುತ್ತದೆ. ತಾವು ಬಂದರೇನೂ ಹೊಸ ಬಜೆಟ್ ಏನೂ ಬರುವುದಿಲ್ಲ. ಇರತಕ್ಕ ಬಜೆಟ್‌ನಲ್ಲೇ ಇದೇ ಸೇಲ್ಸ್ ಟ್ಯಾಕ್ಸ್ ಇದೇ ಸೈಜ್, ಅಥವಾ ಇದೇ ಮೋಟಾರ್ ವೆಹಿಕಲ್ ಟ್ಯಾಕ್ಸ್, ಕಲೆಕ್ಟ್ ಮಾಡಿ ಆ ಮೊತ್ತದಿಂದಲೇ ಈ ಒಂದು ಬಜೆಟ್‌ನ್ನು ತಯಾರಿಸತಕ್ಕದ್ದು. ಮತ್ತು ಯಾವ ಯಾವ ಕಾಮಗಾರಿಗಳಿಗೆ ಆದ್ಯತೆ ಕೊಡಬೇಕೆಂದು ಹೇಳಿ ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೇವೆ. ಇಂಥ ಪರಿಸ್ಥಿತಿ ಬಂದಾಗ ಅಂಥ ಆದ್ಯತೆಗಳನ್ನು ಸ್ವಲ್ಪ ಬದಿಗಿಟ್ಟು ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೋಸ್ಕರ ಈ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಅದಕ್ಕೆ ಇವತ್ತು ಹೆಚ್ಚು ಕಡಿಮೆ ಮೈನರ್ ಇರಿಗೇಷನ್‌ನಲ್ಲಿ ರೈತ ಕಾಯಕ ಕೆರೆ ಇದೆ. ಈ ರೈತ ಕಾಯಕ ಕೆರೆಯಲ್ಲೂ ಕೂಡ ನೀವು ಹಣವನ್ನು ಎಲ್ಲಿಂದ ತಂದಿದ್ದೀರಿ ಎಂದು ಕೇಳುತ್ತಾರೆ. ಅದಕ್ಕೆ ಈ ಬರಗಾಲಕ ಹಣವಲ್ಲ ಅದಕ್ಕೆ ನೀರಾವರಿ ನಿಗಮದಿಂದ ನಾವು ಐದು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ರೈತ ಕಾಯಕ ಕೆರೆಗೆ ಕೇಂದ್ರ ಸರ್ಕಾರದಿಂದ ಬಂದಂಥ ಫುಡ್‌ಗ್ರೈನ್ಸ್‌ನ್ನು ಅದಕ್ಕೆ ಜೋಡಿಸಿ ನಾವು ಆ ಕೆಲಸವನ್ನು ತೆಗದುಕೊಳ್ಳುವುದಕ್ಕೆ ಮಾಡಿದ್ದೇವೆ. ಅಲ್ಲಿ ಹಣದ ಮೊತ್ತ ಹೆಚ್ಚು ಬಿದ್ದಿದ್ದಕ್ಕಾಗಿ ಅಲ್ಲಿನ ಕ್ಯಾಷ್ ಮೋರ್ಷನ್ ಹೆಚ್ಚಿಗೆ ಇದ್ದ ಕಾರಣ ಅನೇಕ ಕಡೆ ಟ್ರಾಕ್ಟರ್ ಬುಲ್ಡೋಜರ್ ಇದನ್ನೂ ಕೂಡ ಉಪಯೋಗ ಮಾಡಿದ್ದಾರೆ. ಇವರು ಏನು ಪ್ರಚಾರ ಮಾಡಿದ್ದಾರೆಂದರೆ ಆ ಅಕ್ಕಿಯನ್ನು ಮಾರಿ ಈ ಬುಲ್ಡೋಜರ್ ರೇಟ್ ಕೊಟ್ಟಿದ್ದಾರೆ ಎನ್ನತಕ್ಕದ್ದು ಅಥವಾ ಈ ಜೆಸಿಬಿ ಇದನ್ನು ಉಪಯೋಗ ಮಾಡಿದ್ದಾರೆಂದು ಹೇಳಿದ್ದಾರೆ. ರೈತ ಕಾಯಕ ಕರೆಗಳಲ್ಲಿ ಕ್ಯಾಷ್ ಪೋರ್ಷನನ್ನು ಸಂಪೂರ್ಣವಾಗಿ ಸರ್ಕಾರ ನೀರಾವರಿ ನಿಗಮದಿಂದ ಸಾಲವನ್ನು ಪಡೆದುಕೊಂಡು ಅಥವಾ ಗ್ರಾಂಟನ್ನು ತೆಗೆದುಕೊಂಡು ಆ ಹಣ ಕ್ಯಾಷ್ ಪೋರ್ಷನ್ ಇಟ್ಟುಕೊಂಡು ಕೂಲಿಗಾಗಿ ಏನು ಜನರು ಅಲ್ಲಿಗೆ ಬರುತ್ತಾರೆ, ಅವರಿಗೆ ಮಾತ್ರ ಕಾಳು ಕೊಡತಕ್ಕ ವ್ಯವಸ್ಥೆ ಮತ್ತು ಕ್ಯಾಷ್ ಪೋರ್ಷನ್ ಅವರಿಗೆಷ್ಟು ನಾವು 15 ರೂಪಾಯಿಗಳನ್ನು ಕೊಡಬೇಕು, ಅದನ್ನು ಕೊಡತಕ್ಕ ವ್ಯವಸ್ಥೆಯಾಗಿದೆ. ಹೀಗೆ ಎಲ್ಲಾ ಬಾಬುಗಳಲ್ಲಿ ಅಂದರೆ ನಾವು ಕಾಳನ್ನು ಯಾವ ರೀತಿಯಾಗಿ ಉಪಯೋಗ ಮಾಡಿಕೊಳ್ಳಬೆಕು ಮತ್ತು ಅದು ದುರುಪಯೋಗವೂ ಆಗಬಾರದು ಎಂಬ ಬಗ್ಗೆ ಬಹಳ ಎಚ್ಚರಿಕೆ ವಹಿಸಿದ್ದೇವೆ. ಇನ್ನೊಂದು ಕಡೆ ಒಂದು ಅಸೆಟ್‌ನ್ನು ಕ್ರಿಯೇಟ್ ಮಾಡತಕ್ಕ ಕೆಲಸಗಳಾಗಬೇಕೆಂದು ಹೇಳಿ ಇಂಥ ಯೋಜನೆಗಳನ್ನು ನಾವು ಮಾಡಿದ್ದೇವೆ. ಅದರಿಂದ ಇವತ್ತು ಏನಾಗಿದೆ ಎಂದರೆ ಸಾಕಷ್ಟು ಕಡೆ ಈ ರೈತ ಕಾಯಕ ಕೆರೆಗಳಲ್ಲಿ ಕೆಲಸವಾಗಿದೆ ಉದಾ:ಗಾಗಿ ಸುಮಾರು ಅದರಲ್ಲಿ 50 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಕಾಳು ಯುಟಿಲೈಜ್ ಆಗಿದ್ದು ಅದರಲ್ಲಿ 10,775 ಮೆಟ್ರಿಕ್ ಟನ್. ಅದರಲ್ಲಿ ರಿಲೀಸ್ ಆಗಿದ್ದು 15,955. ಹೀಗೆ ಕಾಳು ಮತ್ತು ಹಣ, ಹಣ 5 ಕೋಟಿ ರೂ ಅಂದರೆ ಕೆಲವು ಕಡೆ ಏನಾಗುತ್ತದೆಂದರೆ ಈ ಕಾಂಟ್ರಿಬ್ಯೂಷನ್ ಮೋರ್‌ದ್ಯಾನ್ 50 ಪರ್‌ಸೆಂಟ್‌ಗೂ ಮೇಲೆ ಇದೆ. ಆದರೆ ನಾವು ಜನರಿಗೆ ಕಾಳೂ ಕೂಡ

ಕೊಡಬೇಕೆನ್ನುವ ದೃಷ್ಟಿಯಿಂದ ಲೇಬರ್ ಓರಿಯೆಂಟೆಡ್ ಕೆಲಸಗಳಿಗೆ ಅದನ್ನು ಉಪಯೋಗ ಮಾಡಿದ್ದೇವೆ. ಮೆಷಿನ್ಸ್‌ಗೆ ಅಲ್ಲ. ಆದರೆ ಇದು ಕೆಲವು ಕಡೆ ತಪ್ಪು ಮಾಹಿತಿ ಹೋಗಿ ಕೆಲವು ಕಡೆ ಅದನ್ನೇ ಪ್ರಚಾರ ಮಾಡುವುದನ್ನು ಮಾಡಿದ್ದಾರೆ. ಒಂದೆರಡು ಕಡೆ ಎಲ್ಲಿ ಆಗಿದೆ ಎಂದು ಪ್ರಸ್ತಾಪ ಮಡಿದರಿ. ಅದಕ್ಕೆ ನಾನು ಆಮೇಲೆ ಬರುತ್ತೇನೆ. ಆದರೆ ಕೆಲವು ಕಡೆ ಈ ಮಿಸ್ ಕನ್‌ಸೆಪ್ಸ್‌ನ್ ಆಗಲಿ ಅಥವಾ ಮಿಸ್ ಇನ್‌ಫರ್ಮೇಷನ್ ಕೂಡ ಕೆಲವು ಕಡೆ ಹೋಗಿದೆ. ಅದಕ್ಕಾಗಿ ಈ ಒಂದು ಕೆಲಸದಲ್ಲಿ ಸುಮಾರು 189 ರೈತ ಕಾಯಕ ಕೆರೆಗಳನ್ನು ಇದರಲ್ಲಿ ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ಪ್ರಾರಂಭವಾಗಿದ್ದು 187 ಅದರಲ್ಲಿ ಈಗಾಗಲೇ ಕಂಪ್ಲೀಟ್ ಆಗಿದ್ದು 33. ಮತ್ತು ಕ್ಯಾಷ್ ಪೋಪರೆಸ್ ನಾವು ಈಗಾಗಲೇ ಉಪಯೋಗ ಮಾಡಿದ್ದು ಸುಮಾರು 4 ಕೋಟಿ 8 ಲಕ್ಷ ರೂ ಮತ್ತು ಫುಡ್‌ಗ್ರೈನ್ಸ್ ಯುಟಿಲೈಜ್ ಮಾಡಿದ್ದು 10,775 ಮೆಟ್ರಿಕ್ ಟನ್ ಈ ರೀತಿಯಾಗಿ ಇದರಲ್ಲಿ ನಾವು ಉಪಯೋಗ ಮಾಡಿದ್ದೇವೆ. ಅದಲ್ಲದೇ ಇನ್ನು ಸಿಆರ್‌ಎಫ್ ಫಂಡ್‌ನಲ್ಲಿ 20 ಲಕ್ಷ ರೂಪಾಯಿಗಳನ್ನು ನಾವು ಈ ಕೆರೆ ದುರಸ್ತಿಗಾಗಿ ಕೊಟ್ಟಿದ್ದೇವೆ. ಅದರಲ್ಲಿ ತೆಗೆದುಕೊಂಡ ಕೆಲಸಗಳೆಷ್ಟು ಎಂದರೆ 2562 ಸ್ಯಾಂಕ್ಷನ್ ಆಗಿದೆ. ಪ್ರಾರಂಭವಾಗಿದ್ದು 2391. ಕಂಪ್ಲೀಟ್ ಆಗಿದ್ದು 1871 ಮತ್ತು ಅದಕ್ಕೆ ಹಣ ಯುಟಿಲೈಜ್ ಆಗಿದ್ದು 11 ಕೋಟಿ 97 ಲಕ್ಷ ರೂ.ಗಳು ಮತ್ತು ಫುಡ್‌ಗ್ರೈನ್ಸ್ ಯುಟಿಲೈಜ್ ಆಗಿದ್ದು 53912 ಮೆಟ್ರಿಕ್ ಟನ್. ಅಂದರೆ ನಾವೇನು ಹಣ ಕೊಟ್ಟಿದ್ದೇವೆ, ಅದರ ತಕ್ಕಂತೆ ಕೆಲಸಗಳು ನಡೆದಿವೆ. ಅದರ ತಕ್ಕಂತೆ ಕೆಲಸ ಎಷ್ಟು ಕಂಪ್ಲೀಟ್ ಆಗಿವೆ, ಎಷ್ಟು ಕೆರೆಗಳು ದುರಸ್ತಿಯಾಗಿದೆ, ಮತ್ತು ಎಷ್ಟು ಆಗತಕ್ಕ ಹಂತದಲ್ಲಿವೆ ಎನ್ನತಕ್ಕ ಅಂಕಿಅಂಶಗಳನ್ನು ನಾನು ಕೊಡುತ್ತಿದ್ದೇನೆ. ಏಕೆಂದರೆ ಸಾಕಷ್ಟು ಕೆಲಸಗಳ ಬಗ್ಗೆ ಅವರು ವಿವರವಾಗಿ ಕೇಳಿದ್ದಾರೆ. ಇದಾದಮೇಲೆ ಬೇಕಾದರೆ ಸೌತ್, ನಾರ್ತ್ ಎಲ್ಲ ಕೊಡಬೇಕೆಂದರೂ ನಾನು ಕೊಡುತ್ತೇನೆ. ಈಗ ಅಷ್ಟೊಂದು ಡೀಟೈಲ್ ಬೇಕಾಗಿಲ್ಲ ಎಂಬುದು ನನ್ನ ಭಾವನೆ. ಆದರೂ ಕೂಡ ನಿಮ್ಮ ಮಾಹಿತಿಗಾಗಿ ಇದೂ ಅಲ್ಲದೆ ಇವತ್ತು ಟೋಟಲ್ ಡ್ರಾಟ್ ರಿಲೀಫ್ ವರ್ಕ್‌ನಲ್ಲಿ ಎಲ್ಲಾ ಕೆಲಸಗಳು ಸೇರೆ ಕೆರೆ ಕೆಲಸಗಳು 3413 ಅದರಲ್ಲಿ ಪ್ರಾರಂಭವಾದದ್ದು 3237, ಕಂಪ್ಲೀಟ್ ಆಗಿರುವುದು 2408, ಅದರ ಎಷ್ಟಿಮೇಟ್ 92 ಕೋಟಿ 98 ಲಕ್ಷ ರೂ ಅದರ ಕ್ಯಾಷ್ ಮೋರ್ಷನ್ ನಮಗೆ ಇರುವುದು 36 ಕೋಟಿ 67 ಲಕ್ಷ ರೂ.ಗಳು ಅದಕ್ಕೆ ನಾವು ಫುಡ್‌ಗ್ರೈನ್ಸ್‌ನ್ನು ಒದಗಿಸಬೇಕಾದುದು 87,205 ಮೆಟ್ರಿಕ್ ಟನ್ ಆ ಮೇಲೆ ಈಗ ನಮಗೆ ಕ್ಯಾಷ್ ಪೋರ್ಜನ್ ರಿಲೀಸ್ ಆಗಿದ್ದು ಈ ಡ್ರಾಟ್ ನಲ್ಲಿ ಎಲ್ಲಾ ಕೂಡ ಸೇರಿ 27 ಕೋಟಿ 81 ಲಕ್ಷ ರೂ ಮತ್ತು ಯುಟಿಲೈಜ್ ಆಗಿದ್ದು 17 ಕೋಟಿ 17 ಲಕ್ಷ ರೂ.ಗಳು. ಮತ್ತು ಫುಡ್‌ಗ್ರೈನ್ಸ್ ಟೋಟಲ್ ಯುಟಿಲೈಜ್ ಆಗಿದ್ದು 72,770 ಮೆಟ್ರಿಕ್‌ಟನ್, ಆದರೆ ಇಷ್ಟೊಂದು ಈ ಒಂದು ರೈತ ಕಾಯಕ ಕೆರೆ ಮತ್ತು ಉಳಿದ ಕೆರೆಗಳ ಕೆಲಸದಲ್ಲಿ ಇವತ್ತಿನ ದಿವಸ ಸರ್ಕರ ತೆಗದುಕೊಂಡು ಕೆಲಸ ಮತ್ತು ಅದೇ ರೀತಿಯಾಗಿ ಅವರಿಗೆ ಕೆಲಸವನ್ನೂ ಕೂಡ ಇವತ್ತು ಒದಗಿಸಿಕೊಟ್ಟಿದ್ದಾರೆ. ಇದರ ಜೊತೆಯಲ್ಲೇ ಇನ್ನು ಉಳಿದಂಥದ್ದು ಕೂಡ ಫುಡ್‌ಗ್ರೈನ್ಸ್ ಬಗ್ಗೆ. ಈ ಫುಡ್‌ಗ್ರೈನ್ಸ್ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಯಿತು. ನಮಗ್ಯಾಕೆ ಕಡಿಮೆ ಬಂದಿದೆ ಎಂದು ನಾವು ಸದನದ ಮುಂದೆ ಇಟ್ಟಿದ್ದೇವೆ. ಆದರೂ ಕೂಡ ಸಾಕಷ್ಟು ಜನರು ಅದರ ಬಗ್ಗೆ ಅಪ್ರೀಷಿಯೇಟ್ ಮಾಡಲಿಲ್ಲ. ಪದೇ ಪದೇ ನೀವು ಯುಟಿಲೈಜ್ ಮಾಡುವುದಿಲ್ಲ. ಅದಕ್ಕೆ ಕೇಂದ್ರ ಸರ್ಕಾರ ಕೊಟ್ಟಿಲ್ಲ. ಇಷ್ಟೊಂದು ಅವರು ಅನೇಕ ಸಾರಿ ಹೇಳುತ್ತಾರೆ, ನೀವು ಕೊಟ್ಟಿದ್ದನ್ನು ಯೂಸೇ ಮಾಡಲಿಲ್ಲವೆಂದರೆ ಕೊಡುವುದು ಹೇಗೆ ಎಂದು ಅವರು ಹೇಳಿದ್ದಾರೆ. ಐದು ಕಂತುಗಳಲ್ಲಿ ನಮಗೆ ಫುಡ್‌ಗ್ರೈನ್ಸ್

ಬಂತು. ಒಟ್ಟು ನಮಗೆ ಇಲ್ಲಿಯವರೆಗೆ ಬಂದಂತಹ ಆಹಾರಧಾನ್ಯ? 7 ಲಕ್ಷ 20 ಸಾವಿರ ಮೆಟ್ರಿಕ್ ಟನ್ ಅಂದರೆ 55 ಸಾವಿರ ಮೊನ್ನೆಯದೂ ಸೇರಿ, ಈಗೇನು ತಲುಪುತ್ತಿದೆ. ಮೊದಲು ನಮಗೆ ಎಲ್ಲಾ ಸೇರಿ ಅಂದರೆ 2001-02 ರಲ್ಲಿ 1 ಲಕ್ಷ, ಅದಾದ ನಂತರ ಮೊನ್ನೆಯವರೆಗೆ 6 ಲಕ್ಷ 65 ಸಾವಿರ, ಈಗ ಮೊನ್ನೆ ಜುಲೈನಲ್ಲಿ ನಮಗೆ ಬಂದಿದ್ದು 55 ಸಾವಿರ. ಇದು ಎಲ್ಲಾ ಸೇರಿದರೆ 7 ಲಕ್ಷ 20 ಸಾವಿರ ಮೆಟ್ರಿಕ್ ಟನ್ ಆಗುತ್ತದೆ. ಇಷ್ಟೊಂದು ಫುಡ್‌ಗ್ರೈನ್ಸ್ ನಮಗೆ ಬಂದಿದೆ. ಇದರಲ್ಲಿ ಎಷ್ಟು ಖರ್ಚಾಗಿದೆ ಎನ್ನತಕ್ಕದ್ದನ್ನು ಮಾನ್ಯ ಸದಸ್ಯರುಗಳು ಕೇಳಿದರು. 95-96 ಪರ್ಸೆಂಟ್ ನಷ್ಟು ಖರ್ಚಾಗಿದೆ, ಈಗಿನ್ನೂ ನಾನು ಎಂಟು ದಿವಸದ ಹಿಂದಿನದು ಹೇಳುತ್ತಿದ್ದೇನೆ. ಈಗಾಗಲೇ 95 ಪರ್ಸೆಂಟ್ ಮುಗಿದಿದೆ. ಮತ್ತು ಎಲ್ಲರೂ ಇದೇ ರೀತಿಯಾಗಿ ಕೊಡತಕ್ಕಂಥ ಲೆಕ್ಕ ಈಗ ಕೇಂದ್ರ ಸರ್ಕಾರಕ್ಕೆ ಬಂದದ್ದರ ಬಗ್ಗೆ ಒಂದು ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಆ ಮಾಹಿತಿಯ ಪ್ರಕಾರ, ಅಧ್ಯಕ್ಷರೆ, ತಾವು ಗಮನಕೊಡಬೇಕು, ಆ ಮಾಹಿತಿಯ ಪ್ರಕಾರ ಆಂಧ್ರ ಪ್ರದೇಶ ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಟ್ಟಿದ್ದು 97 ಪರ್ಸೆಂಟ್ ಛತ್ತೀಸ್‌ಗಡೆ, 96 ಪರ್ಸೆಂಟ್ ಗುಜರಾತ್ ಇನ್ನೂ ಕೊಟ್ಟೇಇಲ್ಲ, ಲೆಕ್ಕಕ್ಕೇ ಬಂದಿಲ್ಲ. ಹರ್ಯಾಣ 69 ಪರ್ಸೆಂಟ್, ಹಿಮಾಚಲ ಪ್ರದೇಶ 100 ಪರ್ಸೆಂಟ್, ಜಾರ್ಖಂಡೆ ಇನ್ನೂ ಲೆಕ್ಕ್ಕ ಗೊತ್ತೇ ಇಲ್ಲ. ಕರ್ನಾಟಕ 94 ಪರ್ಸೆಂಟ್. ಆಮೇಲೆ ಕೇರಳ ಇನ್ನೂ ಲೆಕ್ಕ ಕೊಟ್ಟಿಲ್ಲ. ಮಧ್ಯಪ್ರದೇಶ 89 ಪರ್ಸೆಂಟ್ ಮಹಾರಾಷ್ಟ 100 ಪರ್ಸೆಂಟ್ ಒರಿಸ್ಸಾ 86 ಪರ್ಸೆಂಟ್, ರಾಜಾಸ್ಥಾನ್ 90 ಪರ್ಸೆಂಟ್ ತಮಿಳುನಾಡು 90 ಪರ್ಸೆಂಟ್ ಉತ್ತರ ಪ್ರದೇಶ 33 ಪರ್ಸೆಂಟ್ ಉತ್ತರಾಂಚಲ್ 52 ಪರ್ಸೆಂಟ್. ಟೋಟಲ್ ಆಗಿ 95 ಪರ್ಸೆಂಟ್ ಆವರೇಜ್, ಇಡೀ ಭಾರತ ದೇಶದ ವಿವರಣೆ. ಆದರೆ ನಮ್ಮ ಮೇಲೆ ಏಕೆ ಪದೇ ಪದೇ ಹೇಳುವುದು? ಇದು ಕೇಂದ್ರ ಸರ್ಕಾರದಲ್ಲಿರತಕ್ಕ ಲೆಕ್ಕ. ಕೇಂದ್ರ ಸರ್ಕಾರದವರು ಹೊರಡಿಸಿದಂತಹ ಒಂದು ನೋಟ್ ನಮಗೆ ಏಕೆ ಆಶ್ಚರ್ಯ ಅನಿಸುತ್ತಿದೆ ಎಂದರೆ ಈ ಫಿಗರ್ಸ್ ಬಗ್ಗೆ ಸುಮ್ಮನೇ ಯುಟಿಲೈಸ್ ಆಗಿಲ್ಲ, ಕೊಟ್ಟಂತಹದನ್ನು ನಾವು ಬಳಕೆ ಮಾಡಲಿಲ್ಲ. ಅದಕ್ಕಾಗಿ ಇವರಿಗೆ ಪೂರ್ತಿಸಿಗುತ್ತಿಲ್ಲ. ಎಂದು ಇವರೆಲ್ಲ ಹೇಳುತ್ತಿದ್ದಾರೆ. ಎಲ್ಲ ರಾಜ್ಯಗಳಿವರಿಗೂ ಎಷ್ಟೆಷ್ಟು ಆಲೋಕೇಶನ್ ಆಯಿತು ಎಂಬುದು ವಿವರ ಸಿಗುತ್ತದೆ. ಫಸ್ಟ್ ಫೇಸ್, ಸೆಕೆಂಟ್ ಫೇಸ್, ಥರ್ಡ್ ಪೇಸ್ ಎಲ್ಲಾ ಫೇಸ್‌ನಲ್ಲಿ ಸ್ಟೇಟ್‌ವೈಸ್ ಡೀಟೇಲ್ಸ್ ಆಫ್ ಫುಡ್‌ಗ್ರೈನ್ಸ್ ರಿಲೀಸ್ಟ್, ಲಿಫ್ಟಿಡ್, ಯುಟಲೈಸ್ಡ್ ಅಂಡರ್ ದಿ ಸ್ಪೆಷಲ್ ಕಾಂಪೋಸೆಂಟ್ ಆಫ್ ಎನ್‌ಜಿಆರ್‌ವೈ ಡ್ಯೂರಿಂಗ್ ದಿ ಇಯರ್ 2002-03 ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇದರಲ್ಲಿ ನಾವು ಸುಮ್ಮನೇ ಯುಟಲೈಸ್ ಆಗಿಲ್ಲ ಎಂದು ಹೇಳುವುದು ಅವರು ಇಲ್ಲ ಎಂದು ಹೇಳುವುದು. ಇದು ಕೇವಲ ನನಗೆ ಅನಿಸಿದ ಮಟ್ಟಿಗೆ ಒಂದು ಪಬ್ಲಿಕ್ ಕನ್ಸಂಪೆಷನ್ ಕೇಳುತ್ತಿರಬಹುದು ಎನ್ನುವುದು ಅಷ್ಟೇ, ಅಲ್ಲದೇ ಹೋದರೆ ಎಲ್ಲಾ ರಾಜ್ಯಗಳವರೂ ಪೂರ್ಣವಾಗಿ ಯುಟಿಲೈಸ್ ಮಾಡಿಲ್ಲ. 89 ಪರ್ಸೆಂಟ್, 33 ಪರ್ಸೆಂಟ್ ಆದರೂ ಅವರಿಗೆ ಕರೆದು ಕೊಡುತ್ತಿರುತ್ತಾರೆ. ಈಗ ಬರಗಾಲದಲ್ಲಿ ಅವರಿಗೆ ಕೊಟ್ಟಿದ್ದಂತಹದ್ದನ್ನೇ ಯುಟಿಲೈಸ್ ಮಾಡಿಲ್ಲ. ಈಗ ಯುಪಿ ಅವರಿಗೆ ಕಬ್ಬಿಗಾಗಿ ದುಡ್ಡು ಕೊಡಲಿಲ್ಲವೇ? ರೈತರಿಗೆ ತೊಂದರೆ ಆಗಿದೆ. ಅಲ್ಲಿ ಪ್ರೈಸ್ ಬಹಳ ಬಿದ್ದು ಹೋಗಿದೆ ಎಂದು ಹೇಳಿ ಉತ್ತರಾಂಚಲ್ ಮತ್ತು ಹರ್ಯಾಣಾಗೆ ಮಾತ್ರ ಕೊಟ್ಟರು. ಹಾಗಾದರೆ ಯುಟಿಲೈಸೇಷನ್ ಎಲ್ಲ ಆಗಿದೆಯೇನು? ನಾನು ದುಡ್ಡಿನದು ಏಕೆ ಹೇಳುತ್ತಿದ್ದೇನೆಂದರೆ ಅಲ್ಲಿನ ಪರಿಸ್ಥಿತಿ ಮತ್ತು ವಾತಾವರಣದ ಗಂಭೀರತೆ ಬಗ್ಗೆ, ಸಿಚ್ಯುಯೇಷನ್ ಹೇಗಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನನಗೆ ಒಂದೇ ಒಂದು ವಿಚಾರ ಏನೆಂದರೆ ನಮಗೆ ಎಷ್ಟು

ಫುಡ್‌ಗ್ರೈನ್ಸ್ ಬರಬೇಕಾಗಿತ್ತು? ಕೇಳಿಕೊಂಡಿದ್ದೇವೆ. ಅದನ್ನು ಅವರು ಲೆಕ್ಕಹಾಕಿ ಕೊಡಬೇಕಾಗಿತ್ತು. ಏಕೆಂದರೆ ನಾವು 100 ಕೇಳಿದರೆ 50 ಕೊಡುತ್ತಾರೆ, ನೀವು 100 ಕೇಳಬೇಕಾಗಿತ್ತು ಎನ್ನುವುದು ಲೆಕ್ಕ ಇರಬಾರದು. ಏನು ಗೈಡ್‌ಲೈನ್ಸ್, ನಾರ್ಮ್ಸ್ ನೀವು ಹಾಕುತ್ತೀರೋ ಆ ನಾರ್ಮ್ಸ್ ಪ್ರಕಾರವೇ ಕೇಳತಕ್ಕದ್ದು ಮತ್ತು ಯಾವಾಗಲೂ ಕೂಡ ರಿಯಲ್ ಪಿಕ್ಚರ್ ಪ್ರೊಜೆಕ್ಟ್ ಮಾಡಬೇಕು ಎನ್ನತಕ್ಕ ದರಷ್ಟಿಯಿಂದ ನಾವು 11 ಲಕ್ಷ 9 ಸಾವಿರ ಟನ್ ಅನ್ನು ಕೇಳಿದ್ದೇವೆ. ಅದರಲ್ಲಿ ನಮಗೆ ಬಂದಿದ್ದು ಎಷ್ಟು? ನಾವು 1 ಲಕ್ಷ ಬಿಟ್ಟು ಆಮೇಲೆ ನಾವು 11 ಲಕ್ಷ ಕೇಳಿದ್ದೇವೆ. ಆದರೆ ನಮಗೆ ಇಲ್ಲಿಯವರೆಗೆ ಸಿಕ್ಕಿರುವುದು 6 ಲಕ್ಷ. ಅಂದರೆ ಇನ್ನೂ ನಮಗೆ ಲೆಕ್ಕದ ಪ್ರಕಾರ 5 ಲಕ್ಷ ಸಿಗಬೇಕು. ಆದರೆ ನಾವು ಮೂರು ಲಕ್ಷವಾದರೂ ಕೊಡಿ ಎಂದರೆ ನಮಗೆ 50 ಸಾವಿರ ಕೊಟ್ಟರು ಇದು ಯುಟಿಲೈಸೇಷನ್ ಮಾಡಿದರೂ ಕೂಡ ಈ ಪರಿಸ್ಥಿತಿ ನಮಗೆ ಇದೆ. ಮತ್ತು ನಾನು ಈಗಾಗಲೇ ಹೇಳಿದೆ. ಕ್ಯಾಷ್ ಪೋರ್ಷನ್‌ದ್ದೂ ಕೂಡ ನಾನು ಮೂರು ವರ್ಷದ್ದು ಲೆಕ್ಕ ಹಾಕಿ ಹೇಳಿದ್ದೇನೆ. ಸುಮಾರು ಇಲ್ಲಿಯವರೆಗೆ ನಮ್ಮ ನ್ಯಾಚುರಲ್ ಕಲಾಮಿಟಿ ಫಂಡ್ ಹಿಡಿದುಕೊಂಡು ಅಥವಾ ಎನ್‌ಸಿಸಿಎಫ್ ಫಂಡ್ ಹಿಡಿದುಕೊಂಡು ಎಲ್ಲವನ್ನೂ ಸೇರಿ 350 ಕೋಟಿ ರೂ ಅಲ್ಲಿಂದ ಬಂದರೆ ಸುಮಾರು 520 ಕೋಟಿ ರೂ ವಿವಿಧ ಬಾಬ್ತಿನಲ್ಲಿ ಮತ್ತು ಸರ್ಕಾರದ ಖಜಾನೆಯಿಂದ ನಾವು ಖರ್ಚು ಮಾಡಿದ್ದೇವೆ. ಅದರ ಜೊತೆಯಲ್ಲಿ ಇನ್ನೂ ನಮ್ಮ ಕಮಿಟ್‌ಮೆಂಟ್ ಇದೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಇನ್ನೂ ಇಂಟರೆಸ್ಟ್ ಕೊಡತಕ್ಕದ್ದು ಇನ್‌ಶ್ಯೂರೆನ್ಸ್ ದುಡ್ಡು ತುಂಬತಕ್ಕದ್ದು ಅದನ್ನೂ ಕೂಡ ನಾವು ಮಾಡುತ್ತೇವೆಂದು ಹೇಳಿದ್ದೇವೆ. ಕಮಿಟ್‌ಮೆಂಟ್ ಮೇಲೆ ನಾವು ಬದ್ಧವಾಗಿದ್ದೇವೆ. ಅದು ರೈತರಿಗೆ ಸಹಾಯ ಮಾಡುವುದಕ್ಕೋಸ್ಕರ, ಯಾವ ತ್ಯಾಗ ಮಾಡಬೇಕು, ಅದೆಲ್ಲವನ್ನೂ ಈ ಸರ್ಕಾರ ಮಾಡುತ್ತದೆ. ಈ ಸರ್ಕಾರ ತನ್ನ ಸಮಸ್ಯೆಯನ್ನು ಬದಿಗಿಟ್ಟು ಅವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಈ ಹಣ ಕೊಡುತ್ತದೆ. ಎನ್ನತಕ್ಕದ್ದನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಯಲ್ಲಿ ಈಗ ಸಿಆರ್‌ಎಫ್ 2003–04 ರಲ್ಲಿ ನಮಗೆ ಬಂದಂತಹ ಹಣದ ಡೀಟೇಲ್ ಅನ್ನೂ ಕೊಡಬೇಕೆಂದರೆ ನಾನು ಕೊಡುತ್ತೇನೆ. ಆದರೆ ಈಗಾಗಲೇ ನಾನು ಹೇಳಿದ್ದೇನೆ. ನಮಗೆ ಬಂದಂತಹ ಹಣ 2003–04 ನಲ್ಲಿ ಒಟ್ಟಿಗೆ ಏಪ್ರಿಲ್–ಮೇ ಇದೆಲ್ಲವನ್ನೂ ನಾವು ಲೆಕ್ಕ ತೆಗೆದುಕೊಂಡರೆ ಇಲ್ಲಿಯವರೆಗೆ ಕುಡಿಯುವ ನೀರಿನದ್ದು ಬಂತು, ಎಂಪ್ಲಾಯ್‌ಮೆಂಟ್ ಜನರೇಷನ್ ಎಲ್ಲಾ ಕೂಡ ಬಂತು ಸುಮಾರು 106 ಕೋಟಿ ರೂ ಮತ್ತು ನಾವು ಖರ್ಚು ಮಾಡಿರತಕ್ಕದ್ದು ಕೂಡ ಹೆಚ್ಚು ಕಡಿಮೆ ಅಂದರೆ ನಾನೇನು ಈಗ ಟೋಟಲ್ 158 ಹೇಳಿದೆ, ಅದರೊಳಗೇ ಇದೂ ಕೂಡ ಬರತಕ್ಕಂಥದ್ದು. ಅಂದರೆ 108 ಕೋಟಿ ರೂಪಾಯಿ ಅದರಲ್ಲಿ ಕೂಡ ಈಗಾಗಲೇ ಖರ್ಚಾಗಿದೆ. ಹೀಗೆ ಒಟ್ಟಾರೆ ನಾವು ತೆಗೆದುಕೊಂಡಂತಹ ಕಾಮಗಾರಿಗಳು, ಈಗ ಒಂದು ಕಡೆ ಫುಡ್‌ಗ್ರೈನ್ಸ್ ಎಷ್ಟು ಬಂತು ನಮಗೆ, ನಾವೆಷ್ಟು ಖರ್ಚು ಮಾಡಿದ್ದೇವೆ ಮತ್ತು ಇಲ್ಲಿಯವರೆಗೆ ನಾನು ಇನ್ನೊಂದು ವಿಚಾರ ತಮ್ಮ ಗಮನಕ್ಕೆ ತರುತ್ತೇನೆ. ಫುಡ್‌ಗ್ರೈನ್ಸ್ ವಿಚಾರದಲ್ಲಿ ತರುತ್ತೇನೆ. ನಾನು ಬೇಕಾದರೆ ಡಿಸ್ಟ್ರಿಕ್ಟ್‌ವೈಸ್ ಮಾಹಿತಿ ಕೊಡುತ್ತೇನೆ. ಒಂದೆರಡು ನಿಮಿಷ ಕಾಲಾವಧಿ ತೆಗೆದುಕೊಳ್ಳುತ್ತೇನೆ. ಏಕೆಂದರೆ ಎಲ್ಲರಿಗೂ ಗೊತ್ತಾಗಲಿ. ಎಲ್ಲೆಲ್ಲಿ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ಪರ್ಸೆಂಟೇಜ್ ಖರ್ಚಾಗಿದೆ ಅಥವಾ ಉಳಿದಿತ್ತು ಎಂಬುದು ಅವರ ಗಮನಕ್ಕೆ ಬಂದರೆ ಬಹುಶ: ಹೆಚ್ಚು ಕಡಿಮೆ ಅವರು ಇದರ ಬಗ್ಗೆ ಗಮನ ಹರಿಸುತ್ತಾರೆ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಬೆಂಗಳೂರು ಅರ್ಬನ್‌ನಲ್ಲಿ 84 ಪರ್ಸೆಂಟ್ ಖರ್ಚಾಗಿದೆ. ಇನ್ನೂ ಅಲ್ಲಿ ಫುಡ್ ಗ್ರೇನ್ಸ್ ಉಳಿದಿದೆ. ಬೆಂಗಳೂರು ರೂರಲ್‌ನಲ್ಲಿ 91 ಪರ್ಸೆಂಟ್

ಬೆಳಗಾಂನಲ್ಲಿ 99 ಪರ್ಸೆಂಟ್ ಖರ್ಚಾಗಿದೆ. ಬಳ್ಳಾರಿಯಲ್ಲಿ 94 ಪರ್ಸೆಂಟ್. ಬೀದರ್‌ನಲ್ಲಿ 86 ಪರ್ಸೆಂಟ್ ಆಮೇಲೆ ಬಿಜಾಪುರದಲ್ಲಿ 91 ಪರ್ಸೆಂಟ್, ಬಾಗಲಕೋಟೆಯಲ್ಲಿ 86 ಪರ್ಸೆಂಟ್. ಚಾಮರಾಜನಗರದಲ್ಲಿ 96 ಪರ್ಸೆಂಟ್. ಚಿತ್ರದುರ್ಗದಲ್ಲಿ 100 ಪರ್ಸೆಂಟ್. ಚಿಕ್ಕಮಗಳೂರಿನಲ್ಲಿ 100 ಪರ್ಸೆಂಟ್, ಧಾರವಾಡದಲ್ಲಿ 100 ಪರ್ಸೆಂಟ್ ದಾವಣಗೆರೆಯಲ್ಲಿ 97 ಪರ್ಸೆಂಟ್, ಗುಲ್ಬರ್ಗಾದಲ್ಲಿ 100 ಪರ್ಸೆಂಟ್, ಗದಗ್‌ನಲ್ಲಿ 100 ಪರ್ಸೆಂಟ್; ಹಾಸನದಲ್ಲಿ 98 ಪರ್ಸೆಂಟ್ ಹಾವೇರಿಯಲ್ಲಿ 98 ಪರ್ಸೆಂಟ್, ಕೋಲಾರದಲ್ಲಿ 92 ಪರ್ಸೆಂಟ್, ಕೊಪ್ಪಳದಲ್ಲಿ 100 ಪರ್ಸೆಂಟ್, ಮಂಡ್ಯಾದಲ್ಲಿ 100 ಪರ್ಸೆಂಟ್, ಮೈಸೂರಿನಲ್ಲಿ 73 ಪರ್ಸೆಂಟ್, ಆಮೇಲೆ ರಾಯಚೂರಿನಲ್ಲಿ 96 ಪರ್ಸೆಂಟ್, ಶೀವಮೊಗ್ಗದಲ್ಲಿ 100 ಪರ್ಸೆಂಟ್, ತುಮಕೂರಿನಲ್ಲಿ 100 ಪರ್ಸೆಂಟ್–ಖರ್ಚಾಗಿದೆ. ಉತ್ತರ ಕರ್ನಾಟಕದ ಕೆಲವು ತಾಲ್ಲೂಕುಗಳಲ್ಲಿ 75 ಪರ್ಸೆಂಟ್ ಕೂರ್ಗ್‌ನಲ್ಲಿ ಕೂಡ ಕೆಲವು ಕಡೆ ಕೊಟ್ಟಿದ್ದು ಅಲ್ಲಿ ಕೇವಲ 62 ಪರ್ಸೆಂಟ್ ಖರ್ಚಾಗಿದೆ. ಅಂದರೆ ಆವರೇಜ್ 95 ಪರ್ಸೆಂಟ್ ಇದ್ದರೂ ಕೂಡ ಕೆಲವು ಜಿಲ್ಲೆಗಳಲ್ಲಿ ಇನ್ನೂ 3 ಪರ್ಸೆಂಟ್, 4 ಪರ್ಸೆಂಟ್, 5 ಪರ್ಸೆಂಟ್ ಉಳಿದಿದ್ದಕ್ಕಾಗಿ ಇದು 98 ಪರ್ಸೆಂಟ್ ಆಗಿದೆ. ಆ ಜಿಲ್ಲೆಗಳಲ್ಲಿ ಕೂಡ ಕಂಪ್ಲೀಟ್ ಮಾಡಿದರೆ ಇದು 100 ಪರ್ಸೆಂಟ್ ಆಗುತ್ತದೆ. ಮತ್ತು ಆಲ್ ಇಂಡಿಯಾ ಆವರೇಜ್ ಕೂಡ 94 ಪರ್ಸೆಂಟ್ ಇದೆ. ಅದಕ್ಕೆ ನಾನು ಹೇಳತಕ್ಕದ್ದು ಇಷ್ಟೇ. ಇವತ್ತಿನ ದಿವಸ ನಾವು ಪದೇ ಪದೇ ಫುಡ್‌ಗ್ರೈನ್ಸ್ ಯುಟಿಲೈಸೇಷನ್ ಬಗ್ಗೆ, ಕ್ಯಾಶ್ ಮೋರ್ಷನ್ ಮುಟಿಲೈಸೇಷನ್ ಮಾಡುವ ಬಗ್ಗೆ, ಜನರಿಗೆ ಕೆಲಸ ಕೊಡುವುದರ ಬಗ್ಗೆ, ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಯಾವಾಗಲೂ ಕೂಡ ಪ್ರತಿ 15 ದಿವಸಗಳಿಗೊಮ್ಮೆ ಕ್ಯಾಬಿನೆಟ್ ಸಬ್ ಕಮಿಟಿ ಸೇರಿ ಸಂಬಂಧಪಟ್ಟಂತಹ ಇಲಾಖೆಯವರನ್ನು ಕರೆಸಿ ಇದನ್ನು ರಿವ್ಯೂ ಮಾಡಿದ್ದೇವೆ. ಅದು ಅಲ್ಲದೇ ನಿಮಗೆ ಹೇಳಬೇಕಾದರೆ ಇದರಲ್ಲಿ ಕೆಲಸ ಎಷ್ಟು ಆಗಿದೆ? ಎಷ್ಟು ಕೆಲಸ ತೆಗೆದುಕೊಂಡಿದ್ದೀರಿ ಎನ್ನತಕ್ಕದ್ದನ್ನು ನಮಗೆ ಕೇಳಿದ್ದೀರಿ ಒಟ್ಟಾರೆ ಕೆಲಸ ಸ್ಪೆಷಲ್ ಕಾಂಪೊನೆಂಟ್ ಎಸ್‌ಜಿಆರ್‌ವೈನಲ್ಲಿ ಅಂದರೆ ಈ ಬರಗಾಲ ಕಾಮಗಾರಿಗಳಲ್ಲಿ 35,003, ಡಿಪಾರ್ಟ್‌ಮೆಂಟಲ್ ವಕ 96,105. ಒಟ್ಟು 1 ಲಕ್ಷ 31 ಸಾವಿರ 108. ಅದಕ್ಕೆ 12 ಕೋಟಿ 63 ಲಕ್ಷ 71 ಸಾವಿರ 218 man days ಜನರೇಟ್ ಆಗಿದೆ. ಫುಡ್‌ಗ್ರೇನ್ಸ್ 95 ಪರ್ಸೆಂಟ್. ಹೀಗೆ ನಾವು ಇವೊತ್ತು ಇಷ್ಟೊಂದು ಕೆಲಸ ತೆಗದುಕೊಂಡಿದ್ದೇವೆ. ಇದರಲ್ಲಿ ಎಷ್ಟು ಕಂಪ್ಲೀಟ್ ಆಗಿದೆಯೆಂದು ಕೇಳಿರುವುದಕ್ಕೆ ಹೇಳುವುದಾದರೆ. 1 ಲಕ್ಷ 31 ಸಾವಿರದಲ್ಲಿ number of works completed 99,484, number of ongoing works 31,624. ಆದರೆ, ಇಷ್ಟು ಕೆಲಸ ಕಂಪ್ಲೀಟ್ ಮಾಡುವುದಕ್ಕೆ ಸುಮಾರು 1 ಲಕ್ಷ 89 ಸಾವಿರ 744 ಮೆಟ್ರಿಕ್ ಟನ್‌ಗಳಷ್ಟು ಫುಡ್‌ಗ್ರೇನ್ಸ್ ಬೇಕಾಗುತ್ತದೆ ಅದಕ್ಕೋಸ್ಕರ ಸಧ್ಯಕ್ಕೆ 3 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಕೊಟ್ಟರೆ ಉಳಿದಂಥ ಕೆಲಸಗಳೂ ಕೂಡ ಮುಗಿಯುತ್ತದೆ. ಮತ್ತು ಈ ಕೆಲಸವನ್ನು ಕಂಪ್ಲೀಟ್ ಮಾಡುವ ಮೂಲಕ ಒಂದು ಅಸೆಟ್ ಕ್ರಿಯೇಟ್ ಆಗುತ್ತದೆ. ಇಲ್ಲದಿದ್ದರೆ ಕೆಲವು ಸಲ ಸಣ್ಣಪುಟ್ಟ ಕೆರೆಗಳಿರಬಹುದು, ರಸ್ತೆಗಳಿರಬಹುದು, ಸಾಯಿಲ್ ಕನ್ಸ್‌ರ್ವೇಶನ್ ವರ್ಕ್ ಇರಬಹುದು, ವಾಟರ್‌ಶೆಡ್ ಪ್ರೋಗ್ರಾಂ ಇರಬಹುದು. ಇಂತಹ ಕೆಲಸಗಳಿಗೆ ತೊಂದರೆಯಾಗುತ್ತದೆ. ಅದಕ್ಕೋಸ್ಕರ ದಯವಿಟ್ಟು ನಾವು ಕೇಳಿರುವಷ್ಟನ್ನು ತಾವು ಕೊಡಬೇಕು. ಇದರಿಂದ ಜನರಿಗೆ ಸಹಾಯವಾಗುತ್ತದೆ. ಈಗಾಗಲೇ ರಾಜ್ಯದ ಅನೇಕ ತಾಲ್ಲೂಕುಗಳಲ್ಲಿ below normal rainfall ಆಗಿದೆ. 27 ತಾಲ್ಲೂಕುಗಳಲ್ಲಿ ಮಳೆ ಇನ್ನೂ ಸರಿಯಾಗಿ ಬಂದಿಲ್ಲ. ಉಳಿದಂತೆ ಕೆಲವು ತಾಲ್ಲೂಕುಗಳಲ್ಲಿ normal rainfall ಆಗಿದೆ. Coastal Area ಮತ್ತು ಮಲೆನಾಡಿನ ಕೆಲವು ಭಾಗಗಳಲ್ಲಿ

ಮಳೆಯಾಗಿದ್ದರೂ ಕೂಡ ನಮ್ಮ dry area ದಲ್ಲಿ ಪರಿಸ್ಥಿತಿ ಹಾಗೇ ಇದೆ ದಯವಿಟ್ಟು ಅದನ್ನು ಗಮನಿಸಬೇಕು. ಈ ದೃಷ್ಟಿಯಿಂದ ನಾವು ಈಗಲೂ ಕೂಡ ಕೇಳತಕ್ಕಂಥಾದ್ದು 3 ಲಕ್ಷ ಮೆಮೊರ್ಯಾಂಡಮ್ ಕೂಡ ಅದೇ ರೀತಿಯಗಿ ತಯಾರಿಸುತ್ತಿದ್ದು. ಅದನ್ನು ಕಳುಹಿಸುತ್ತೇವೆ. ಕೊನೆಗೆ ತಾವು ಸದನದಲ್ಲಿ ಕೊಟ್ಟಿರುವಂತಹ ಸಲಹೆಗಳೆಲ್ಲವನ್ನೂ ಕೂಡ ಕ್ರೋಢೀಕರಿಸಿ ಕಳುಹಿಸಿಕೊಡುವ ಕೆಲಸವನ್ನೂ ಸಹ ಮಾಡುತ್ತೇವೆ. ಅಂದರೆ, ಈ ಕೆಲಸಗಳು ಎಷ್ಟು ಉಪಯುಕ್ತವಾಗಿವೆ ಎನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಇಷ್ಟೊಂದು ಬೃಹದಾಕಾರದಲ್ಲಿ ಕೆಲಸಗಳು ನಡೆದಾಗ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಾವು ಕೆಲಸಗಳನ್ನು ಪ್ರಾರಂಭ ಮಾಡಿದಾಗ, ಸುಮಾರು 159 ತಾಲ್ಲೂಕುಗಳಲ್ಲಿ 1 ಲಕ್ಷ 31 ಸಾವಿರ ಕೆಲಸದಲ್ಲಿ ಎಲ್ಲಿಯೋ ಸಣ್ಣಪುಟ್ಟ ದೋಷಗಳಿದ್ದರೆ ಅದನ್ನೇ ಹೆಚ್ಚಾಗಿ ಹೈಲೈಟ್ ಮಾಡುವ ಮೂಲಕ, ಅದರ ಮೇಲೆಯೇ ಟೀಕೆ-ಟಿಪ್ಪಣಿಗಳನ್ನು ಮಾಡಿ ಏನೇನೂ ನಡೆದಿಲ್ಲವೇನೋ ಎಂಬಂತೆ ತೋರಿಸುತ್ತಿದ್ದೇವೆ. Allright, 50% ಕೆಟ್ಟ ಕೆಲಸವಾಗಿದ್ದರೆ ನಾವು ಒಪ್ಪಿಕೊಳ್ಳುತ್ತೇವೆ. ಅದರಲ್ಲಿ 20 ಪರ್ಸೆಂಟ್ ಆದರೂ, 1 ಲಕ್ಷ 31 ಸಾವಿರದಲ್ಲಿ ಇವೊತ್ತು ನಮ್ಮಲ್ಲಿ ಅಪಿಯರ್ ಆದ, ಅದು ಪತ್ರಿಕೆಗಳಲ್ಲಾಗಬಹುದು, ಎಲೆಕ್ಟ್ರಾನಿಕ್ ಮೀಡಿಯಾದಲ್ಲಾಗಿರಬಹುದು, ಪೊಲೀಸ್ ಠಾಣೆಯಲ್ಲಿ ರಿಜಿಸ್ಟರ್ ಆದಂಥ ಕೇಸ್‌ಗಳಾಗಿರಬಹುದು ಅಥವಾ ಪೊಲಿಟಿಕಲ್ ಪಾರ್ಟಿಗಳವರೂ ಕೂಡ ಈ ಲೋಪ-ದೋಷಗಳನ್ನು ಎತ್ತಿಹಿಡಿಯಬೇಕು ಎನ್ನುವಂಥಾದ್ದು ಕೂಡ ಇರಬಹುದು. ಅದೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ 30 ಕೇಸುಗಳಾಗುತ್ತದೆ ಅದಕ್ಕೋಸ್ಕರ ಇವೊತ್ತಿನ ದಿವಸ ಎಲ್ಲರೂ ಲೂಟಿ ಹೊಡೆದರು, ಕೆಲಸಗಳಿಲ್ಲ, ಪುಢಾರಿಗಳೆಲ್ಲರೂ ತಿಂದು ಹಾಕಿದರು. ಮತ್ತು ಅವರಿಗೆ ಬೇಕಾದಂತಹವರಿಗೆ ಕೊಟ್ಟರು ಎಂದು ಸಾರಾಸಗಟಾಗಿ ಮಾಡಿರುವ ಆಪಾದನೆ ಸತ್ಯಕ್ಕೆ ದೂರವಾದುದು. ನಾನು ಸ್ಪಷ್ಟವಾಗಿ ಹೇಳಬೇಕಾಗಿರುವುದೇನೆಂದರೆ, it is a politically motivated statement. ಏಕೆಂದರೆ, ಇಷ್ಟೊಂದು ಬೃಹದಾಕಾರದಲ್ಲಿ ಕೆಲಸಗಳು ನಡೆದಾಗ, ಇಷ್ಟೊಂದು ಫುಡ್‌ಗ್ರೇನ್ಸ್ ಅನದನು ನಾವು ಯುಟಿಲೈಸ್ ಮಾಡಿದಾಗ, ಇಷ್ಟೊಂದು ಕ್ಯಾಷ್ ಪೋರ್ಶನ್ ಅನ್ನು ಖರ್ಚು ಮಾಡಿದಾಗ, ಇಷ್ಟೊಂದು ಜನರಿಗೆ ಕೆಲಸಗಳನ್ನು ಕೊಟ್ಟಾಗ ಸುಮಾರು 12 ಕೋಟಿ ಮ್ಯಾನ್ ಡೇಸ್ ಅನ್ನು ಜನರೇಟ್ ಮಾಡಿದಾಗ ಹಾಗೂ ಈ ಸರ್ಕಾರ ಏನು ಒಳ್ಳೆಯ ಕೆಲಸ ಮಾಡುತ್ತಿರುವಾಗ, ನಿಮಗೆ ಬೇರೆ ಬಂಡವಾಳ ಏನೂ ಇಲ್ಲ, ಬೇರೇನಾದರೂ ಮಾಡಬೇಕೆಂದು, ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ಈ ರೀತಿಯಾಗಿ ಟೀಕೆಗಳನ್ನು ಮಾಡುತ್ತಿದ್ದಾರೆಯೇ ಹೊರತು ಟೀಕೆ ಮಾಡಲು ಬೇರೆ ಯವ ಕಾರಣವೂ ಇಲ್ಲ. ಇದು ಮೊದಲನೆಯದು. ಏಕೆಂದರೆ, ನೀವು ಕೇಳಿದ್ದೆಲ್ಲಾ ಮಾಡಿದ್ದೇವೆ. ಎರಡನೆಯದಾಗಿ, ತಮ್ಮ ಗಮನಕ್ಕೆ ತರುವುದೇನೆಂದರೆ, ತಾಲ್ಲೂಕು ಮಟ್ಟದಲ್ಲಿ ಈಗ ಎಂಎಲ್‌ಎಗಳು ಉಸ್ತುವಾರಿ ನೋಡುತ್ತಾರೆ. ಉಸ್ತುವಾರಿ ಎಂದರೆ ನಾವೇನು ಮೇಸ್ತ್ರಿಗಳೇ ಇಂಜಿನಿಯರ್‌ಗಳೇ ಎನ್ನುವಂಥಾದ್ದಲ್ಲ, ಅಲ್ಲಿ ನಾವು ಟಾಸ್, ಫೋರ್ಸ್ ಕಮಿಟಿ ರಚನೆ ಮಾಡಿದ್ದು ರಿಲೀಫ್ ಕಮಿಟಿಯ ಚೇರ್ಮನ್ ಶಾಸಕರಾಗಿದ್ದು, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಸದಸ್ಯರಾಗಿದ್ದು, ಎಂಎಲ್‌ಸಿ ಮೆಂಬರ್ ಆಗಿರುತ್ತಾರೆ. ತಹಶೀಲ್ದಾರ್ ಅದಕ್ಕೆ ಮೆಂಬರ್ ಸೆಕ್ರೆಟರಿಯಾಗಿರುತ್ತಾರೆ. ಅವರು ರೆಕಮೆಂಡ್ ಮಾಡಿದಂಥ ಕೆಲಸಗಳನ್ನು ನೂರಕ್ಕೆ ನೂರರಷ್ಟು ಹೆಚ್ಚು-ಕಡಿಮೆ. ಕೆಲವು ಕಡೆ ಒಂದೆರಡು ವ್ಯತ್ಯಾಸಗಳಾಗಿರಬಹುದು. ನೂರಕ್ಕೆ ನೂರರಷ್ಟು ಡೆಪ್ಯೂಟಿ ಕಮೀಷನರ್ ಅವರು ಅಪ್ರೂವ್ ಮಾಡಿದ ಕೆಲಸಗಳನ್ನು ಪ್ರಾರಂಭಿಸುವುದಕ್ಕೆ ಅನುಮತಿ ಕೊಟ್ಟಿದ್ದೇವೆ. ಆ ಕೆಲಸವೂ ಆಗಿಲ್ಲವೆಂದರೆ ದೋಷವೆಲ್ಲಿದೆ?

ಮೂರನೆಯದಾಗಿ, ಹಾಗಾದರೆ, ಅದು ನಮ್ಮ ಕೆಲಸವೇ? ನಿಮ್ಮ ಆಫೀಸರ್ ಏನು ಮಾಡುತ್ತಾರೆ? ಎಂದು ಕೆಲವು ಜನರು ನನಗೆ ಪ್ರಶ್ನೆ ಕೇಳಿದರು. ಬರಗಾಲದಂಥ ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ನವು ಜನರಿಗೆ ಸಹಾಯ ಮಾಡಬೇಕೆನ್ನುವ ಮನಸ್ಸು ಅಥವಾ ಅನುಕಂಪವಿದ್ದಾಗ ಕೆಲವು ಸಲ ಈ ಸೂಪರ್‌ವಿಶನ್ ಕೆಲಸವನ್ನೂ ನೀವೇ ಮಾಡಬೇಕಾಗುತ್ತದೆ. ನೀವು ಮಾಡಿದಂತಹ, ನೀವು ಕೊಟ್ಟಂಥ ಕೆಲಸ ಸರಿಯಾಗಿ ನಡೆದಿದೆಯೋ ಇಲ್ಲವೇ ಎನ್ನುವ ಜವಾಬ್ದಾರಿಯನ್ನು ಕೂಡ ಹೊತ್ತುಕೊಳ್ಳಬೇಕಾಗುತ್ತದೆ ಬರೀ ನನ್ನ ಕೆಲಸ ರೆಕಮೆಂಡ್ ಮಾಡುವುದು, ಜನರು ತೊಂದರೆಯಲ್ಲಿದ್ದಾಗ, ಕಷ್ಟದಲ್ಲಿದ್ದಾಗ ಅವರ ಸಮೀಪ ನಾನು ಹೋಗುವುದಿಲ್ಲವೆಂದರೆ, ಅದಕ್ಕೆ ಯಾರು ಜವಾಬ್ದಾರಿ? ನಾವು-ನೀವೂ ಜವಾಬ್ದಾರರು. ಇದನ್ನು ಕೇವಲ ಅಧಿಕಾರಿಗಳ ಮೇಲೆ ಹಾಕುವ ಮೂಲಕ ಇದನ್ನು ಬಿಟ್ಟುಬಿಡುವುದಕ್ಕಾಗುವುದಿಲ್ಲ. ಇಂತಹ ಕಷ್ಟ ಕಾಲದಲ್ಲಿ ಬರಗಾಲದ ಪರಿಸ್ಥಿತಿಯಲ್ಲಿ ನವು ಕೊಟ್ಟಂಥ ಕೆಲಸ ಸರಿಯಾಗಿ ನಡೆದಿದೆಯೇ ಇಲ್ಲವೇ ಅಥವಾ ಅಲ್ಲಿ ಸರಿಯಾಗಿ ಜನರು ಬರುತ್ತಾರೋ ಇಲ್ಲವೋ ಕಾಳನ್ನು ಸರಿಯಾಗಿ ಹಂಚುತ್ತಾರೋ ಇಲ್ಲವೋ ಇಂತಹ ಕೆಲಸಗಳನ್ನೂ ಕೂಡ ಮಾಡುವ ಅವಶ್ಯಕತೆ ಇದೆ. ಆದರೆ, ಎಲ್ಲಾ ಜವಾಬ್ದಾರಿಗಳನ್ನು ಸರ್ಕಾರದ ಮೇಲೆ ಅಧಿಕಾರಿಗಳ ಮೇಲೆ ಹಾಕಿ, ನಮಗೇನೂ ಗೊತ್ತಿಲ್ಲ. ಎನ್ನುವುದಲ್ಲ, ತಾವು ಸೂಪರ್‌ವೈಸ್ ಮಾಡಿ ಅಲ್ಲಿ ಏನಾದರೂ ಲೋಪ-ದೋಷ ಕಂಡುಬಂದರೆ ದೂರುಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗಾಗಲಿ, ರೆವಿನ್ಯೂ ಮಿನಿಸ್ಟರ್ ಗಾಗಲೀ ಇಲ್ಲವೇ ಮಲ್ಲಿಕಾರ್ಜುನ ನಾಗಪ್ಪ ಅವರಿಗಾಗಲಿ ಇಲ್ಲವೇ ಡಿಸ್ಟ್ರಿಕ್ಟ್ ಇನ್‌ಚಾರ್ಜ್ ಮಿನಿಸ್ಟರ್ ಅವರ ಗಮನಕ್ಕೆ ತಂದು, ಈ ರೀತಿಯ ಅವ್ಯವಹಾರಗಳಾಗಿದೆ. ಲೂಟಿ ನಡೆದಿದೆಯೆಂದು ಹೇಳಿದ್ದರೆ ನಾವು ಒಪ್ಪಬಹುದಾಗಿತ್ತು. ಏಕೆಂದರೆ, ಈ ಮೂರು ತಿಂಗಳುಗಳಲ್ಲಿ ಏನು ಹೇಳಬೇಕಾಗಿತ್ತೋ ಅದನ್ನು ಮಾರ್ಚಿ ತಿಂಗಳ ಬಜೆಟ್ ಸೆಶನ್‌ನಲ್ಲಿ ಹೇಳಿದ್ದೇವೆ. ಏಪ್ರಿಲ್, ಮೇ ಮತ್ತು ಜೂನ್ ಈ ಮೂರು ತಿಂಗಳುಗಳಲ್ಲಿ ನಡೆದಂಥ ಅವ್ಯವಹಾರಗಳ ಬಗ್ಗೆ ಬಹುಶಃ ನೀವು ಗಮನಕ್ಕೆ ತಂದಿದ್ದರೆ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಸರಿಪಡಿಸಬಹುದಿತ್ತು ಸರಿಪಡಿಸುವುದಕ್ಕೆ ನೀವು ಅವಕಾಶ ಮಾಡಿಕೊಡಲಿಲ್ಲ. ಕೇವಲ ಇಲ್ಲಿ ಮಾತ್ರ ಬಂದಾಗ ಅನೇಕ ಬಾರಿ ಕಂಪ್ಲೆಂಟ್ ನೋಡಿದ್ದೇವೆ. ಅಥವಾ ಒಂದು ಪೊಲಿಟಿಕಲ್ ಸ್ಟೇಟ್‌ಮೆಂಟ್ ಕೊಡುವುದು. ಎಲ್ಲಿಗೇ ಹೋದರೂ ಅಲ್ಲೊಂದು ಸ್ಟೇಟ್‌ಮೆಂಟ್ ಕೊಡುವುದು ಗುಲ್ಬರ್ಗಾಕ್ಕೆ ಹೋದರೂ ಅಲ್ಲಿಯೂ ಒಂದು ಸ್ಟೇಟ್‌ಮೆಂಟ್ ಕೊಡುವುದು ಅಥವಾ ಹುಬ್ಬಳ್ಳಿ-ಧಾರವಾಡಕ್ಕೆ ಹೋದರೂ ಅಲ್ಲಿಯೂ ಸ್ಟೇಟ್‌ಮೆಂಟ್ ಕೊಡುವುದು. ಈ ರೀತಿ ಎಲ್ಲಾ ಕಡೆಗಳಲ್ಲೂ ಕೇವಲ ಸ್ಟೇಟ್‌ಮೆಂಟ್ ಕೊಡುತ್ತಾ ಬಂದರೇ ಹೊರತು ಇಲ್ಲಿ ತಪ್ಪಾಗಿದೆ. ಇದನ್ನು ಸುಧಾರಣೆ ಮಾಡಬೇಕೆಂದು ಅವರು ಹೇಳಲಿಲ್ಲ. ಏಕೆ ಹೇಳಲಿಲ್ಲ? ಇದು ನಮ್ಮೆಲ್ಲರ ಕರ್ತವ್ಯ ಜವಾಬ್ದಾರಿ ಅಲ್ಲವೇ? ನಿಮ್ಮದೇ ಎಲ್ಲವೂ ಸಂಪೂರ್ಣ ಜವಾಬ್ದಾರಿ ಎಂದು ನಾನು ಹೇಳುತ್ತಿಲ್ಲ. ಆದರೆ, ಬೃಹದಾಕಾರವಾಗಿ, ದೊಡ್ಡ ಪ್ರಮಾಣದಲ್ಲಿ ಇಂತಹ ಕೆಲಸಗಳು ನಡೆದಾಗ ಇದರ ಬಗ್ಗೆ ಚಿಂತನೆ ಮಾಡುವುದು ಬಹಳ ಮುಖ್ಯ ನಾವು-ನೀವು ಇದರ ಬಗ್ಗೆ ಚಿಂತನೆ ಮಾಡದೆ ಹೋದರೆ ಮತ್ಯಾರು ಚಿಂತನೆ ಮಾಡಬೇಕು? ಅದನ್ನು ಬಿಟ್ಟು ನಾವೆಲ್ಲರೂ ಮನಸ್ಸಿನಲ್ಲಿಟ್ಟುಕೊಂಡು ಒಂದೇ ಸಲ ವಿಧಾನಸೌಧಕ್ಕೆ ಹೋಗಿ ಎಲ್ಲವನ್ನೂ ಕಾರಿಬಿಡೋಣವೆಂದರೆ ಇದು ಯಾವ ನ್ಯಾಯ? ಇದರಿಂದ ಜನರಿಗೆ ಅನುಕಂಪ ತೋರಿಸಿದಂತಾಗುತ್ತದೆಯೋ ಅಥವಾ ಸರ್ಕಾರಕ್ಕೆ ಸುಧಾರಣೇ ಮಾಡಿದಂತಾಗುತ್ತದೆಯೇ ಅತವಾ ನಮ್ಮ ಲೋಪ ದೋಷಗಳನ್ನು ನೋಡಿಯೂ ಅಂದರೆ, ಲೂಟಿ

ಹೊಡೆಯುವವರು ಹಗೇ ಲೂಟಿ ಹೊಡೆದುಕೊಂಡು ಕುಳಿತುಕೊಳ್ಳಲಿ. ನಾವು ಇಲ್ಲಿಗೆ ಬಂದು ಅದನ್ನು ಹೇಳೋಣವೆಂದು ಮೂರು ತಿಂಗಳು ಸುಮ್ಮನಿದ್ದೀರಾ? ನನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದೆ, ರಾಜಕೀಯ ಮಾಡುವುದು ಮಾಡೋಣ ವೋಟು ಕೇಳುವುದಕ್ಕೆ ಹೋಗುವ ದಿವಸ ಬಂದಾಗ ಆಗ ನಮಗೆ ನೀವು ಏನಾದರೂ ಹೇಳುತ್ತೀರಿ, ನಾವು ನಿಮಗೆ ಹೆಳುತ್ತೇವೆ. ನಮ್ಮ ತಪ್ಪುಗಳನ್ನು ನೀವು ಎತ್ತಿ ಹಿಡಿಯುತ್ತೀರಿ. ಅದೇ ರೀತಿ ನಿಮ್ಮಲ್ಲಿ ದೋಷಗಳೇನಾದರೂ ಇದ್ದರೆ ಅದನ್ನು ನಾವು ಹೇಳುತ್ತೇವೆ. ಆ ಕೆಲಸವನ್ನು ವೋಟು ಕೇಳುವಾಗ ಮಾಡೋಣ. ಆದರೆ, ಜನರಿಗೆ ಇಲ್ಲಿ ಸಹಾಯ ಮಡುವಾಗ ಅವರ ಸಮಸ್ಯೆಗಳಿಗೆ ನಾವು ಸ್ಪಂದಿಸುವಾಗ ನಾವೆಲ್ಲರೂ ಸೇರಿ ಕೆಲಸ ಮಾಡಬೇಕಾಗಿದೆಯೇ ಹೊರತು ನಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಾಗಲಿ ಜವಾಬ್ದಾರಿಯಿಂದ ಮುಕ್ತರಾಗುವ ಕೆಲಸವನ್ನು ನಾನಾಗಲಿ, ನೀವಾಗಲಿ ಯರೂ ಕೂಡ ಮಾಡಬಾರದೆಂದು ನಾನು ತಮ್ಮ ಮುಖಾಂತರ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

12.00 ಪಿ.ಎಂ.

ಅದು ಅಲ್ಲದೆ ಹಣದ ದುರುಪಯೋಗವಾಗಬಾರದು ಮತ್ತು ಫುಡ್‌ಗ್ರೇಯಿನ್ಸ್‌ನ್ನು ಮಿಸ್‌ಯೂಸ್ ಮಾಡಿಕೊಳ್ಳಬಾರದೆಂದು ನಾವು ಗೈಡ್‌ಲೈನ್ಸ್ ಕೊಟ್ಟಿದ್ದೇವೆ. ಅದು ಏನೆಂದರೆ, ಮೊದಲು ಕೆರೆಗೆ ಆದ್ಯತೆ ಕೊಡಿ ಎರಡನೆಯದಾಗಿ ಜಿಲ್ಲಾಪಂಚಾಯಿತಿಯ ಕೆರೆಗಳಿಗೆ ಆದ್ಯತೆಯನ್ನು ಕೊಡಿ, ತದನಂತರ, ವಾಟರ್‌ಶೆಡ್ ಪ್ರೋಗ್ರಾಮ್‌ಗೆ ಆದ್ಯತೆ ಕೊಡಿ, ಸಾಯಿಲ್ ಕನ್‌ಸರ್ವೇನ್‌ಗೆ ಆಧ್ಯತೆ ಕೊಡಿ, ಇವೆಲ್ಲಾ ಕೆಲಸಗಳು ಇಲ್ಲವೆಂದರೆ ಅನಂತರ ರಸ್ತೆ ಕೆಲಸ ಅಥವಾ ಅಲ್ಲಿ ಇದ್ದಂಥ ಕೆಲಸವನ್ನು ತೆಗದುಕೊಂಡು ಜನರಿಗೆ ಕೆಲಸ ಕೊಡುವ ಕೆಲಸವನ್ನು ಮಾಡಿ ಎಂದು ಸ್ಪಷ್ಟವಾಗಿ ನಾವು ಹೇಳಿದ್ದೇವೆ. ಇವೆಲ್ಲಾ ಗೈಡ್‌ಲೈನ್ಸ್ ಕೊಡುವ ಉದ್ದೇಶವೇನೆಂದರೆ to create asset ಅಸೆಟ್ ಕ್ರಿಯೇಟ್ ಮಾಡಿ ನಮ್ಮ ರೈತರಿಗೆ ಅನುಕೂಲ ಮಾಡಿಕೊಡಬೇಕು. ಏಕೆಂದರೆ ತೂಬನ್ನು ರಿಪೇರಿ ಮಾಡಲು ಹಣ ಇರುವುದಿಲ್ಲವೆಂಬುದು ತಮಗೆ ಗೊತ್ತಿದೆ. ನಮ್ಮ ಸರ್ಕಾರದಲ್ಲಿ ಮಾತ್ರವಲ್ಲ ಎಲ್ಲಾ ಸರ್ಕಾರಗಳು ಹೆಚ್ಚುಕಡಿಮೆ ಸಣ್ಣ ನೀರಾವರಿಗಳಿಗೆ ಆದ್ಯತೆಯನ್ನು ಕೊಡಲಿಲ್ಲ. ಅದ್ದರಿಂದ ನಾವು ಏನು ಮಾಡಿದ್ದೇವೆಂದರೆ, ಬರಗಾಲದಲ್ಲಾದರೂ ಅದಕ್ಕೆ ಆದ್ಯತೆಯನ್ನು ಕೊಡೋಣ ಎಂಬ ದೃಷ್ಟಿಯಿಂದ ಸಣ್ಣ ನೀರಾವರಿ, ಜಿಲ್ಲಾಪಂಚಾಯತಿಯಲ್ಲಿರುವ ಸಣ್ಣ ನೀರಾವರಿ, ವಾಟರ್‌ಶೆಡ್ ಕಾರ್ಯಕ್ರಮ ಸಾಯಿಲ್‌ಕನ್‌ಸರ್ವೇನ್, ಇದಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಆ ದಿಕ್ಕಿನಲ್ಲಿ ಕೆಲಸ ಮಾಡತಕ್ಕಂಥ ಪ್ರಯತ್ನ ಮಾಡಬೇಕು ಎಂದು ನಿರ್ದೇಶನವನ್ನು ಇಲ್ಲಿಂದ ಕೊಟ್ಟಿದ್ದೇವೆ. ಅದರ ಪ್ರಕಾರ ನನಗೆ ಸಂತೋಷವಾಗಿದೆ. ಅನೇಕ ಜಿಲ್ಲೆಗಳಲ್ಲಿ ಇವತ್ತಿನ ದಿವಸ ಈ ಕೆಲಸಗಳನ್ನು ಮಾಡಿದ್ದಾರೆ, ಇನ್ನೂ ಕೆಲಸ ನಡೆದಿದೆ. ಇನ್ನೂ ಕೆಲವು ಮುಗಿಯತಕ್ಕಂಥ ಹಂತದಲ್ಲಿದೆ. ಇದೇ ದಿಕ್ಕಿನಲ್ಲಿ ಎಲ್ಲರೂ ಕೂಡ ಚಿಂತನೆ ಮಾಡಿ ಜನರಿಗೆ ಸಹಾಯ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಐದನೇ ಅಂಶ ಏನೆಂದರೆ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲೂ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿದ್ದೇವೆ. ಏಕೆಂದರೆ ಸಿ.ಆರ್.ಎಫ್. ಫಂಡ್‌ನಲ್ಲಿ ಕುಡಿಯುವ ನೀರಿಗೆ ನೇರವಾಗಿ ಬೋರ್‌ವೆಲ್ ಹಾಕಲು ಅವಕಾಶವಿಲ್ಲ. ಅದಕ್ಕೆ ನೀವು ಏನು ಮಾಡುತ್ತೀರೆಂದು ಮಾನ್ಯ ಸಿಂಧ್ಯಾರವರೂ ಮಾನ್ಯ ಸೋಮಶೇಖರ್‌ರವರು ಮತ್ತು ಮಾನ್ಯ ಜಗದೀಶ್‌ಶೆಟ್ಟರ್‌ರವರು ಪ್ರಶ್ನೆ ಕೇಳಿದ್ದರು ಅವರು ಭಾಷಣದಲ್ಲಿ ಹೇಳಿದ್ದರು. ಏಕೆಂದರೆ ನೇರವಾಗಿ ಬೋರ್‌ವೆಲ್‌ಗಳನ್ನು ಹಾಕಲು ಅವಕಾಶವಿಲ್ಲ. ಅದಕ್ಕಾಗಿ ಅನೇಕ ಹಳ್ಳಿನಲ್ಲಿ ಅಲ್ಲಿಗೆ ಹೊಸದಾಗಿ

ಬೋರ್‌ವೆಲ್‌ಗಳೂ ಬೇಕಾಗಿದ್ದರೂ ಸರ್ಕಾರದವರು ಕೊಟ್ಟಿಲ್ಲ ಎನ್ನತಕ್ಕಂಥ ಮಾತನ್ನೂ ಅವರು ಹೇಳಿದರು. ಅಲ್ಲಿ ನೇರವಾಗಿ ಬೋರ್‌ವೆಲ್‌ಗಳನ್ನು ಹಾಕಲು ಅವಕಾಶವಾಗಬೇಕೆಂದು ನಾವು ವಿಶೇಷವಾದಂಥ ಹಣವನ್ನು ಬಿಡುಗಡೆ ಮಾಡಿದ್ದೇವೆ ಸುಮಾರು 14 ಕೋಟಿ 90 ಲಕ್ಷ ರೂಪಾಯಿಗಳನ್ನು ಗ್ರಾಮೀಣ ಪ್ರದೇಶದಲ್ಲಿನ ಮತ್ತು ಪಟ್ಟಣ ಪ್ರದೇಶದಲ್ಲಿನ ಬೋರ್‌ವೆಲ್‌ಗಾಗಿ ಬಿಡುಗಡೆ ಮಾಡಿದ್ದೇವೆ. ಮತ್ತು ಅವರಲ್ಲಿರುವ ಹಣವನ್ನು ಮೇನ್‌ಟೆನೆನ್ಸ್‌ಗಾಗಿ ಖರ್ಚು ಮಾಡಬೇಕೆಂದು ಆರ್.ಡಿ.ಪಿ.ಆರ್. ಇಲಾಖೆಯವರೂ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಪೋರ್ಷಡೆಯವರೂ ಇಲ್ಲೇ ಇದ್ದಾರೆ. ಅವರು ಅದರ ಬಗ್ಗೆ ಸ್ಪಷ್ಟವಾಗಿ ಎಲ್ಲರಿಗೂ ಆದೇಶ ಕೊಟ್ಟಿದ್ದಾರೆ. ನಿಮ್ಮಲ್ಲಿರುವ ಹಣವನ್ನು ನೀವು ಕುಡಿಯುವ ನೀರಿಗೆ ಖರ್ಚು ಮಾಡಿ, ಆ್ಯಕ್ಷನ್ ಪ್ಲಾನ್‌ನಲ್ಲೇನಿದೆ ಅದನ್ನು ಮೊದಲು ಖರ್ಚು ಮಾಡಿ. ಕಡಿಮೆ ಬಿದ್ದರೆ ಮತ್ತೆ ಅದಕ್ಕೆ ನಾವು ಸಹಾಯ ಮಾಡುತ್ತೇವೆ ಎನ್ನತಕ್ಕ ಮಾತನ್ನು ಅವರೂ ಕೂಡ ನೇರವಾಗಿ ಹೇಳಿದ್ದಕ್ಕಾಗಿ ನಾನು ಹೆಮ್ಮೆಯಿಂದ ಹೇಳುತ್ತೇನೆ. ಆ ಇಲಾಖೆಯಲ್ಲಿ ಹೋದ ವರ್ಷ ಹೆಚ್ಚಿನ ಕಂಟಿನ್ಯೂಯಸ್ ಕೆಲಸಗಳು ಆಗಿದೆ. ಅದಲ್ಲದೆ ಹಳೆಯ ಬೋರ್‌ವೆಲ್‌ಗಳನ್ನು ರಿಪೇರಿ ಮಾಡತಕ್ಕದ್ದು ಹೊಸ ಬೋರ್‌ವೆಲ್‌ಗಳನ್ನು ಹಾಕತಕ್ಕದ್ದು ಮತ್ತು ಹೈಡ್ರೋಫಾಕ್ಚರ್ ಮೆಷಿನ್‌ನಿಂದ ಡೀಪನಿಂಗ್ ಮಾಡತಕ್ಕದ್ದು ಆ ಎಲ್ಲಾ ಕೆಲಸವನ್ನೂ ಮಾಡಿದ್ದಾರೆ. ಮತ್ತು 389 ಹಳ್ಳಿಗಳಿಗೆ ನೀರನ್ನು ಟ್ರಾನ್ಸ್‌ಪೋರ್ಟ್ ಮಾಡಿ ಸಪ್ಲೈ ಮಾಡಿದ್ದಾರೆ ಬೀದರ್‌ನಲ್ಲಿ ಕೆಲವು ಹಳ್ಳಿಗಳು ಇರಬಹುದು, ಕೋಲಾರದ ಜಿಲ್ಲೆಯಲ್ಲಿರಬಹುದು. ಕೊಪ್ಪಳದಲ್ಲಿ ತುಮಕೂರಿನಲ್ಲಿ ಟ್ರಾನ್ಸ್‌ಪೋರ್ಟ್ ಮಾಡಿ ನೀರನ್ನು ಸಪ್ಲೈ ಮಾಡಿದ್ದಾರೆ. ಸುಮಾರು 389 ಹಳ್ಳಿಗಳಿಗೆ ಆ ರೀತಿ ಟ್ರಾನ್ಸ್‌ಪೋರ್ಟ್ ಮಾಡಿ ನೀರನ್ನು ಒದಗಿಸಿದ್ದಾರೆ. ಅದಕ್ಕೆ ಹಣವನ್ನು ಕೊಟ್ಟಿದ್ದೇವೆ. ಡೆಪ್ಯೂಟಿಕಮಿಷನರ್‌ರವರಿಗೆ ಆದೇಶ ಕೊಟ್ಟಿದ್ದೇವೆ, ಎಷ್ಟೇ ಹಣ ಖರ್ಚಾಗಲಿ ನೀವು ಜನರಿಗೆ ನೀರನ್ನು ಒದಗಿಸಿಕೊಡುವ ಕೆಲಸ ಮಾಡಬೇಕು, ಹಣದ ಅಭಾವ ನಿಮಗಿದ್ದರೆ ಯಾವ ಹೆಡ್‌ನಲ್ಲಿ ಹಣವಿದೆಯೋ ಅದನ್ನು ರೀ–ಅಪ್ರೋಪ್ರಿಯೇಟ್ ಮಾಡಿಕೊಂಡು ಮೊದಲು ಖರ್ಚು ಮಾಡಿ ಅನಂತರ ಪುನ: ಆ ಹೆಡ್‌ನಲ್ಲಿ ನಮ್ಮ ಹತ್ತಿರ ಹಣವನ್ನು ಕೇಳಿ ಎಂದಿದ್ದೇವೆ. ಉದಾಹರಣೆಗಾಗಿ ನಾವು ಒಂದು ಕೆಲಸಕ್ಕಾಗಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಬೆಂಕಿ ಅನಾಹುತಕ್ಕಾಗಿ ಪರಿಹಾರವನ್ನು ಕೊಡಲು ಹಣವನ್ನು ಕೊಟ್ಟಿದ್ದೇವೆ. ಈ ಹಣವನ್ನು ಅವರು ರೀ–ಅಪ್ರೋಪ್ರಿಯೇಟ್ ಮಾಡಿಕೊಳ್ಳಲೂ ಆದೇಶವನ್ನು ಕೊಟ್ಟಿದ್ದೇವೆ. ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡಬೇಕೆಂದು ಅನ್ನಿಸಿದರೆ ಮೊದಲು ಆ ಹಣವನ್ನು ತೆಗೆದು ನೀವು ಖರ್ಚು ಮಾಡಿ ತದನಂತರ ಆ ಹಣವನ್ನು ಪುನ: ಕೇಳಿ ಕೊಡುತ್ತೇವೆಂದು ಹೇಳಿದ್ದೇವೆ. ಆದ್ದರಿಂದ ಅನೇಕ ಕಡೆ ಇಂಥ ಬೃಹತ್ತಾದ ಸಮಸ್ಯೆ ಇದ್ದರೂ ಕೂಡ ಇಂಥ ದೊಡ್ಡ ಸಮಸ್ಯೆ ಇದ್ದರೂ ಕೂಡ ಇದಕ್ಕೆ ನಮ್ಮ ಜಿಲ್ಲಾಧಿಕಾರಿಯವರು, ಮುಖ್ಯಕಾರ್ಯದರ್ಶಿಯವರು ಎಲ್ಲಾ ಅಧಿಕಾರಿಗಳು ಸ್ಪಂದಿಸಿದ್ದಾರೆ, ಕೆಲಸ ಮಾಡಿದ್ದಾರೆ ನಾವು ಕೆಲಸ ಮಾಡಿದವರಿಗೂ ಶಹಭಾಸ್‌ಗಿರಿಯನ್ನು ಕೊಡದಿದ್ದರೆ ಕೊನೆಗೆ ನಾವು ಎಷ್ಟು ದುಡಿದರೂ ಇಷ್ಟೇ ಎಂಬ ಭಾವನೆ ಬರುತ್ತದೆ, ಆದರೆ ಎಲ್ಲಿ ಕೆಲಸ ಮಾಡಿಲ್ಲ ಅವರಿಗೆ ಶಿಕ್ಷೆಯನ್ನೂ ಕೊಟ್ಟಿದ್ದೇವೆ. ಎಲ್ಲೆಲ್ಲಿ ಕೆಲಸ ಮಾಡದಿರುವವರಿಗೆ ಯಾವ ರೀತಿಯಾಗಿ ಆ್ಯಕ್ಷನ್ ತೆಗೆದುಕೊಂಡಿದ್ದೇವೆ ಎಂಬ ಬಗ್ಗೆ ಮಾಹಿತಿ ಕೊಡುತ್ತೇನೆ. ಈ ರೀತಿ 389 ಹಳ್ಳಿಗಳಿಗೆ ಟ್ರಾನ್ಸ್‌ಫೋಟೇಷನ್ ಮಾಡಿ ನೀರನ್ನು ಒದಗಿಸಿದ್ದೇವೆ, ಹೊಸ ಬೋರ್‌ವೆಲ್‌ಗಳು during 2002-03 and 2003-04 ಅಂದರೆ ಇಲ್ಲಿಯವರೆಗೆ, ಆನಂತರ

number of bore wells, hydro factures during 2002-03, and 2003-04 ಜೂನ್ ಕೊನೆಯವರೆಗೆ 990 ಅದರಲ್ಲಿ 858 ಸಕ್ಸಸ್ ಆಗಿದೆ. ವಾಟರ್ ಸಪ್ಲೈ ಕಂಪ್ಲೀಟ್ ಆಗಿದ್ದು ಸುಮಾರು 756 ಪೈಪ್ಡ್ ವಾಟರ್ 1418 ಮಿನಿವಾಟರ್ ಸಪ್ಲೈ ಅದಲ್ಲದೆ ಹತ್ತು ಕೋಟಿ ರೂ ಹಣವನ್ನು ವಿಶೇಷವಾಗಿ ಹೊಸ ಬೋರ್‌ವೆಲ್‌ನ್ನು ತೆಗೆಯಲು ನಾವು ಇವತ್ತಿನ ದಿವಸ ಡ್ರಾಟ್ ಅಫೆಕ್ಟೆಡ್ ಏರಿಯಾಗಳಲ್ಲಿ ಕೊಟ್ಟಿದ್ದೇವೆ. ಹೀಗೆ ಟೋಟಲ್ ಆಮೌಟ್, ಸ್ಟೇಟ್ ಶೇರು ಎಲ್ಲಾ ಸೇರಿಕೊಂಡು ಇವತ್ತಿನ ದಿವಸ 143 ಕೋಟಿ ರೂಪಾಯಿಗಳನ್ನು ನಾವು ಹದಿನೈದು ತಿಂಗಳಿನಲ್ಲಿ ಖರ್ಚು ಮಾಡಿದ್ದೇವೆ. ಬಹುಶಃ ಇಷ್ಟೊಂದು ಹಣ ಕುಡಿಯುವ ನೀರಿಗಾಗಿ ಖರ್ಚು ಮಾಡಿದ್ದು ದಾಖಲೆಯೇ ಎಂದು ಹೇಳಿದರೆ ತಪ್ಪಾಗಲಾರದು. ಹೀಗೆ ಒಂದಲ್ಲಾ ಅನೇಕ ರೀತಿಯಿಂದ ನಾವು ಹೆಜ್ಜೆಯನ್ನು ಇಟ್ಟಿದ್ದೇವೆ. ಜನರ ಸಮಸ್ಯೆಗೆ ಸ್ಪಂದಿಸಬೇಕೆಂದು ನವು ಈ ಪ್ರಯತ್ನವನ್ನು ಮಾಡಿದ್ದೇವೆ ಅದಲ್ಲದೆ ಪಟ್ಟಣ ಪ್ರದೇಶದಲ್ಲಿ ಸಹ ಟ್ಯಾಂಕರ್ ಮೂಲಕ ನೀರನ್ನು ಕೊಡುವುದನ್ನು ಮಾಡಿದ್ದೇವೆ. ಸುಮಾರು 212 ಟೌನ್‌ಶೀಫ್‌ನಲ್ಲಿ 43 ಟೌನ್‌ಶಿಫ್ ಅತ್ಯಂತ worst affected; ಅವರಿಗೆ 49 ಟ್ಯಾಂಕರ್ ಮೂಲಕ ನೀರನ್ನು ಕೊಡತಕ್ಕ ಪ್ರಯತ್ನವನ್ನು ಮಾಡಿದ್ದೇವೆ. ಅದರಿಂದ 4 ಲಕ್ಷ 57 ಸಾವಿರ ಜನರಿಗೆ ಅನುಕೂಲವಾಗಿದೆ. ಹೀಗೆ ಪಟ್ಟಣ ಪ್ರದೇಶದಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಟ್ಟಿದ್ದೇವೆ. ಕುಡಿಯುವ ನೀರಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಕುಡಿಯುವ ನೀರಿಗಾಗಿ ಯಾವ ಬಾಬ್ತಿನಲ್ಲಿ ಹಣವನ್ನು ಕೊಡಬೇಕು. ಆ ಎಲ್ಲಾ ರೀತಿಯಿಂದ ಸಹಕಾರ, ಸಹಾಯ ಮಾಡತಕ್ಕ ಕೆಲಸವನ್ನು ಸರ್ಕಾರ ಮಾಡಿದೆ, ಅದರಲ್ಲಿ ಯಾವುದೂ ಕೂಡ ಹಿಂದೇಟು ಹಾಕಿಲ್ಲವೆಂಬ ಮಾತನ್ನು ಸ್ಪಷ್ಟಪಡಿಸುತ್ತೇನೆ. ಮೇವಿನ ಸಮಸ್ಯೆ ಇದು ಕೆಲವು ಭಾಗಗಳಲ್ಲಿ ಗಂಭೀರವಾಗಿದೆ. ಕೆಲವು ಭಾಗದಲ್ಲಿ ಅಲ್ಲಿನ ಸ್ಥಳೀಯ ವಿಭಾಗಾಧಿಕಾರಿಗಳು ನಿಭಾಯಿಸತಕ್ಕ ಪ್ರಯತ್ನ ಮಾಡಿದ್ದಾರೆ. ಪ್ರತಿಯೊಂದು ಹೋಬಳಿಗೆ ಗೋಶಾಲೆ ತೆಗೆಯುತ್ತೇವೆಂದು ಹೇಳಿದ್ದೀರಿ. ಪ್ರತಿಯೊಂದು ತಾಲ್ಲೂಕಿನಲ್ಲೂ ಮೂರ್‍ನಾಲ್ಕು ಗೋಶಾಲೆ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಎಲ್ಲಿ ಮಾಡಿದಿರಿ ಎಂದು ಹೇಳಿದ್ದಾರೆ. ಪ್ರತಿಯೊಂದು ಹೋಬಳಿಯಲ್ಲೂ ಗೋಶಾಲೆಯನ್ನು ಮಾಡಲು ಆಗಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ಎಲ್ಲಿ ಸಮಸ್ಯೆ ಇತ್ತು ಆ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ 19 ಸ್ಥಳಗಳಲ್ಲಿ ಗೋಶಾಲೆಯನ್ನು ಪ್ರಾರಂಭ ಮಾಡಿದ್ದು ನಿಜ, ಮತ್ತು ಅಲ್ಲಿ ಮೇವಿನ ವ್ಯವಸ್ಥೆಯನ್ನು ಮಾಡಲಾಗಿತ್ತು. ಒಂದೆರಡು ಕಡೆ ತೊಂದರೆ ಬಂದಾಗ ಪುನಃ ಅದನ್ನು ಸ್ವಲ್ಪಮಟ್ಟಿಗೆ ನಿಲ್ಲಿಸಿ ಹೊರಗಡೆಯಿಂದ ಮೇವನ್ನು ಸಂಗ್ರಹಣೆ ಮಾಡಿ ಫಾಡರ್ ಬ್ಯಾಂಕ್ ರೀತಿ ಮಾಡಿ ಆನಂತರ ಪುನಃ ಪ್ರಾರಂಭ ಮಡಿದ್ದೇವೆ. ಅಂಥ 19 ಸ್ಥಳಗಳು ಎಲ್ಲಿ ಎಂದರೆ, ವಿಶೇಷವಾಗಿ ಕೋಲಾರ, ತುಮಕೂರು, ಗದಗ, ಚಿತ್ರದುರ್ಗ, ಕೊಪ್ಪಳ ಇಂಥ ಕಡೆ ಗೋಶಾಲೆಗಳನ್ನು ನಾವು ಮಾಡಿದ್ದೇವೆ. ಸುಮಾರು 9 ಕೋಟಿ 76 ಲಕ್ಷ ರೂಪಾಯಿಗಳನ್ನು ಮೆವಿಗಾಗಿ ಬಿಡುಗಡೆ ಮಾಡಿದ್ದೆವೆ. ಈ ರೀತಿ ಮೇವಿಗಾಗಿ ಹಣ ಬಿಡುಗಡೆ ಮಾಡಿರುವುದಲ್ಲದೆ, ಹರಿಯಾಣ ಮತ್ತು ಪಂಜಾಬ್‌ಗಳಿಂದಲೂ ಕೂಡ ಮೇವು ತರಿಸತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಈಗಾಗಲೇ ಅದರಲ್ಲಿ ಎರಡು ರೇಕುಗಳು ಬಂಗಾರಪೇಟೆಗೆ ಬಂದು ತಲುಪಿವೆ. ಚಿತ್ರದುರ್ಗಕ್ಕೂ ಕೂಡ ಇವತ್ತು ಒಂದು ರೇಕು ಹೋಗುತ್ತಿದೆ. ಸುಮಾರು 6 ರೇಕುಗಳಲ್ಲಿ ಈಗಾಗಲೇ 3 ರೇಕುಗಳ food grains ಬಂದಿದೆ. 635 ಮೆಟ್ರಿಕ್ ಟನ್‌ಗಳಷ್ಟು ಮೇವನ್ನು ತರಿಸತಕ್ಕಂಥ ಪ್ರಯತ್ನ ನಡೆದಿದೆ. ಅದರಲ್ಲಿ ಈಗಾಗಲೆ

3 ರೇಕುಗಳು ಈ ಪ್ರದೇಶದಲ್ಲಿ ಬಂದಿವೆ. ಈ ಒಂದು ಮೇವಿನ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವ ದೃಷ್ಟಿಯಿಂದಲೇ ನಾವು ಆ ಬಗೆಗಿನ ಕೆಲವೊಂದು ಕಂಡೀಷನ್ಸ್ ಅನ್ನೂ ಕೂಡ ರಿಲ್ಯಾಕ್ಸ್ ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಜೋಳದ ದಂಟನ್ನು ಮೊದಲು 1500 ರೂಪಾಯಿಗಳಿಗೆ ಖರೀದಿ ಮಾಡತಕ್ಕಂಥ ವ್ಯವಸ್ಥೆ ಇತ್ತು. ಅದನ್ನು ನಾವು 500 ರೂಪಾಯಿಗಳು ಜಾಸ್ತಿ ಮಡಿ 2000 ರೂಪಾಯಿಗಳೆಂದು ಮಾಡಿದ್ದೇವೆ. ರೈತರು ಇಷ್ಟು ಹಣಕ್ಕೆ ಅದು ಬರುವುದಿಲ್ಲ. ಆದುದರಿಂದ ಇದನ್ನು ಕನಿಷ್ಟ enhance ಮಾಡಬೇಕು. ಎಂದು ಹೇಳಿದ್ದರಿಂದ ನಾವು ಇದನ್ನು ಮಾಡಿದೆವು. Paddy straw 1000 ರೂಪಾಯಿಗಳು ಇದ್ದುದನ್ನು 1500 ರೂಪಾಯಿಗಳೆಂದು ಮಾಡಿದ್ದೇವೆ. green fooder ಗೆ 750 ರೂಪಾಯಿಗಳೆಂದು ನಿಗದಿ ಪಡಿಸಿದ್ದೇವೆ. Fooder transport rate ಮೊದಲು 35 paise per quintal ಇದ್ದುದ್ದನ್ನು ಈಗ 50 ಪೈಸೆ ಎಂದು ಮಾಡಿದ್ದೇವೆ. ಕೆಲವು ರೈತರ ಒಣಗಿ ಹೋಗಿದ್ದ Sugar-cane ಅನ್ನು ದನಗಳಿಗೆ ಫಾಡರ್ ಎಂದು ಉಪಯೋಗ ಮಾಡಿ, ಜಾನುವಾರುಗಳನ್ನು ಬದುಕಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾವು ಅದನ್ನು ಪಡೆದುಕೊಂಡು ಕೋಲಾರಕ್ಕೆ 338 ಟನ್, ತುಮಕೂರಿಗೆ 15 ಟನ್, ಕೊಪ್ಪಳಕ್ಕೆ 873 ಟನ್, ಹೀಗೆ ಒಟ್ಟಾರೆಯಾಗಿ 1226 ಟನ್ Sugar cane ಅನ್ನು ಸಪ್ಲೈ ಮಾಡಿದ್ದೇವೆ. ಅದಲ್ಲದೆ, ಎಲ್ಲೆಲ್ಲಿ, Farm Houses, Research Centrers ಮತ್ತು Horticulture Farms ಇವೆಯೋ ಅಂತಹ ಕಡೆಗಳಿಗೂ ಕೂಡ ನಾವು ಬೀಜ ಕೊಟ್ಟು, ನೀವು ಮೇವನ್ನು ಬೆಳೆಯಬೇಕು ಎಂದು Animal husbandry Department ಮುಖಾಂತರ ಅವರಿಗೆ ಪ್ರೋತ್ಸಾಹ ಧನ ನೀಡತಕ್ಕ ಮತ್ತು ಫಾಡರ್ ಬೆಳೆಸಲಿಕ್ಕೆ ಏನೊಂದು ಸಬ್ಸಿಡಿ ಕೊಡಬೇಕೋ ಅದನ್ನು ಕೂಡ ಕೊಡಿಸತಕ್ಕಂಥದ್ದನ್ನು ಮಾಡಿದ್ದೇವೆ. ರೈತರಿಗೆ ಕೂಡ ಬೀಜ ಕೊಡತಕ್ಕಂಥದ್ದನ್ನು ಮಾಡಿದ್ದೇವೆ. ಯಾರು Pump sets ಇಟ್ಟುಕೊಂಡಿರುತ್ತಾರೋ, ಅವರಲ್ಲಿ ಯಾರು ನಾವು ಮೇವನ್ನು ಬೆಳೆಯುತ್ತೇವೆ ಎಂದು ಮುಂದೆ ಬಂದಿದ್ದಾರೋ ಅವರಿಗೂ ಕೂಡ ಸಬ್ಸಿಡಿ ದರದಲ್ಲಿ ಬೀಜಗಳನ್ನು ಕೊಟ್ಟಿದ್ದೇವೆ. ಬಹುಶಃ ಅನೇಕ ಜನ ಅದನ್ನು ಬೆಳೆದು ಅವರವರೇ ಇಟ್ಟುಕೊಂಡಿದ್ದಾರೆಯೇ ಹೊರತು ಬೇರೆಯವರಿಗೆ ಅವರು ಕೊಡಲಿಲ್ಲ. ಆದರೆ ಹೆಚ್ಚಿನ ರೀತಿಯಲ್ಲಿ ಬೆಳೆದು ಮಾರಬೇಕೆನ್ನುವ ಆಕಾಂಕ್ಷೆಯುಳ್ಳ ರೈತರೇನಿದ್ದರೋ, ಅವರಿಗೆ ಸಾಕಷ್ಟು ಇದರ ಕೊರತೆ ಇದ್ದ ಕಾರಣ ಮತ್ತು ಅದು economically feasible ಆಗುವುದಿಲ್ಲ. ಎನ್ನುವ ದೃಷ್ಟಿಯಿಂದ ಅವರುಗಳು, ನೀವು ಇದಕ್ಕೆ ಹೆಚ್ಚಿನ ಹಣವನ್ನು ನಿಗದಿ ಮಾಡಿ, ನಮ್ಮಿಂದಲೇ ಖರೀದಿ ಮಾಡಿದರೆ ನಾವು ಇನ್ನು ಹೆಚ್ಚಿನ ಮೇವನ್ನು ಬೆಳೆಸುತ್ತೇವೆ ಎಂದು ಕೆಲವು ರೈತರು ಕೋಲಾರ, ಕೊಪ್ಪಳ, ಬಳ್ಳಾರಿ ಮತ್ತು ಬಾಗಲಕೋಟೆಗಳಲ್ಲಿ ನಾವು ಹೋದಾಗ ಹೇಳಿದ್ದರು. ಆ ರೈತರು ಮೇವನ್ನು ನಾವೇ ಬೆಳೆಸುತ್ತೇವೆ. ನಮಗೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಳ್ಳುತ್ತೇವೆ, ಉಳಿದಿದ್ದನ್ನು ಸರ್ಕಾರ ಖರೀದಿ ಮಾಡತಕ್ಕಂಥ ಗ್ಯಾರಂಟಿ ಕೊಟ್ಟರೆ ನಾವು ಹುಲ್ಲು ಬೆಳೆಸಿ ನಿಮಗೆ ಕೊಡುತ್ತೇವೆ ಎಂದು ಹೇಳಿದ್ದರು. ಆದ್ದರಿಂದ ಆ ಬಗ್ಗೆ ನಾವು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾದಂತಹ ಆದೇಶವನ್ನು ಕೊಟ್ಟಿದ್ದೇವೆ. ಹುಲ್ಲು ಬೆಳೆಸುತ್ತೇವೆ ಎನ್ನುವಂತಹ ರೈತರು ಮುಂದೆ ಬಂದರೆ, ಅವರಿಗೆ ನೀವು ಈ ಬರಗಾಲದ ಪರಿಸ್ಥಿತಿ ಮುಗಿಯುವವರೆಗೆ minimum 50 percent ಆದರೂ ಅವರ ಮೇವನ್ನು ಖರೀದಿ ಮಾಡತಕ್ಕಂಥ ಗ್ಯಾರಂಟಿ ನೀವು ಅವರಿಗೆ ಕೊಡಿ ಎನ್ನುವಂತಹ ಆದೇಶವನ್ನೂ ಕೂಡ ನಾವು ಕೊಟ್ಟಿದ್ದೇವೆ. ಕೆಲವು ರೈತರಾದರೂ ಇದಕ್ಕಾಗಿ ಮುಂದೆ ಇರಬಹುದು, ಅದನ್ನು ನಾವು

ಕಾದು ನೋಡೋಣ. 9 ಕೋಟಿ 75 ಲಕ್ಷ ರೂಪಾಯಿಗಳಲ್ಲಿ transportation of fooder ಗೆ 48 ಲಕ್ಷ ರೂ Mini kit programme ಗೆ 1 ಕೋಟಿ ರೂ Veterinary Medicines ಗೆ 3 ಕೋಟಿ ರೂ Fooder Bank ಗಳಿಗೆ 3ಕೋಟಿ ರೂ ಮತ್ತು fooder Development in Government Farms 2 ಕೋಟಿ 27 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹೀಗೆ ಒಟ್ಟಾರೆಯಾಗಿ 9 ಕೋಟಿ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಾವು ಇವತ್ತಿನ ದಿವಸ ಸಾಕಷ್ಟು ಹಣವನ್ನು ಇದಕ್ಕಾಗಿ ಬಿಡುಗಡೆ ಮಾಡಿದ್ದೇವೆ. ಈಗಾಗಲೇ ಇದರಲ್ಲಿ 6 ಕೋಟಿ 8 ಲಕ್ಷ ರೂಪಾಯಿಗಳು ಖರ್ಚಾಗಿವೆ. 3 ಕೋಟಿ ರೂಪಾಯಿಗಳ ಹಣ ಇನ್ನೂ ಅನೇಕ ಜಿಲ್ಲಾಧಿಕಾರಿಗಳ ಬಳಿ ಪೆಂಡಿಂಗ್ ಇದೆ. ಈ ರೀತಿಯಾಗಿ ಮೇವಿನ ಬಗ್ಗೆ ನಾವು ಪ್ರಯತ್ನವನ್ನು ಮಾಡಿದ್ದೇವೆ. ಆದರೆ ಕೆಲವು ಕಡೆಗಳಲ್ಲಿ ಇನ್ನೂ ತೃಪ್ತಿಕರವಾಗಿ ಈ ಸಮಸ್ಯೆ ಬಗೆಹರಿದಿಲ್ಲವೆಂದು ಹೇಳಿದ್ದಾರೆ. ನಾವು ಪುನಃ ಅದರ ಬಗ್ಗೆ ಗಮನ ಹರಿಸುತ್ತೇವೆ. ಈಗಾಗಲೇ ನಾನು ಹೇಳಿದಂತೆ, ನಾವು ಸ್ವತಃ ಖರೀದಿ ಮಾಡತಕ್ಕಂಥದ್ದು, ಯಾವ್ಯಾವ ಫಾರ್ಮ್‌ಗಳಲ್ಲಿ ಬೆಳೆಯುತ್ತಾರೋ, ಅವರಿಗೆ ಬೆಳೆಸಲಿಕ್ಕೆ ಪ್ರೋತ್ಸಾಹ ನೀಡುವುದು. ಸೀಡ್ಸ್‌ಗೆ ಸಬ್ಸಿಡಿ ಕೊಡುವುದು, ರೈತರು ಬೆಳೆದಿದ್ದರಲ್ಲಿ, ಶೇಕಡ 50 ರಷ್ಟನ್ನಾದರೂ ಜಿಲ್ಲಾಧಿಕಾರಿಗಳು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಗ್ಯಾರಂಟಿ ಕೊಡುವುದು, ಎಲ್ಲಿ ಕಬ್ಬು ಒಣಗಿ ಹೋಗಿದೆಯೋ, ಅದನ್ನು ಮೇವಾಗಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯ ಇದ್ದರೆ ಅದನ್ನು ತೆಗೆದುಕೊಳ್ಳುವುದು, ಹೀಗೆ ನಮ್ಮ ಪ್ರಯತ್ನಗಳು ಜಾರಿಯಲ್ಲಿವೆ. ಈ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ಸಾಕಷ್ಟು ಇಂತಹ ಉಲ್ಬಣಗೊಂಡಂತಹ ಸಮಸ್ಯೆಗಳನ್ನೂ ಕೂಡ ಬಗೆಹರಿಸತಕ್ಕಂಥ ಪ್ರಯತ್ನವನ್ನು ಇವತ್ತು ನಾವು ಮಾಡಿದ್ದೇವೆ. ಅದರ ಜೆತೆಯಲ್ಲಿ ಈಗ ಕೃಷಿ ಸಾಲದ ಮೇಲಿನ ಬಡ್ಡಿ ಕೂಡ ಮನ್ನಾ ಮಾಡಿದ್ದೇವೆ. ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ. ಸುಮಾರು 127 ಕೋಟಿ ರೂಪಾಯಿಗಳಲ್ಲಿ ನಮ್ಮ ಮೇಲೆಯೇ ಸಂಪೂರ್ಣವಾದಂತಹ ಭಾರ ಬಿದ್ದಿದೆ. ಏಕೆಂದರೆ, ಕೇಂದ್ರ ಸರ್ಕಾರ ಕೇವಲ 20ರಷ್ಟು ಕೊಡುತ್ತೇವೆ ಎಂದು ಹೇಳಿದ ಮೇಲೆ, ಉಳಿದ ಎಲ್ಲಾ ಹಣವನ್ನೂ ಕೂಡ ಸರ್ಕಾರವೇ ಭರಿಸಬೇಕಾಗಿದೆ. ಆ ಹೊಣೆಯನ್ನು ನಾವು ಹೊತ್ತುಕೊಂಡು ಆ ಕೆಲಸವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಇವತ್ತು ಸ್ಪಷ್ಟವಾಗಿ ಹೇಳಲಿಕ್ಕೆ ಇಷ್ಟಪಡುತ್ತಿದ್ದೇನೆ. ಆದರೂ ಕೂಡ Government of india, ಅಂದರೆ ಕೇಂದ್ರ ಸರ್ಕಾರ ಈ ಸ್ಕೀಮ್ಸ್‌ಗೆ ಯವ ರೀತಿಯಾಗಿ ಸಹಾಯ ಮಾಡುತ್ತಿದೆ ಎನ್ನುವುದರ ಬಗ್ಗೆ ಎರಡೇ ಲೈನ್ ಅನ್ನು ತಮ್ಮ ಮುಂದೆ ನಿಮ್ಮ ಗಮನಕ್ಕೆ ತರಲು ನಾನು ಓದಿ ಹೇಳಬಯಸುತ್ತೇನೆ.

As per the proposal of Government of india, the amount waived works out to Rs. 492 lakhs only in terms of interest amount deferred for payment to commercial banks by farmers.

(2) On the advances extended by RRBS, the waiver works out Rs.2.81 lakhs only out of deferred payment of interest. Thus the total interest amount to the waived works out to Rs. 7.73 lakhs.

ತಾವು ಕೇಂದ್ರ ಸರ್ಕಾರದ ಒಂದು ಪತ್ರವನ್ನು ರೆಫರ್ ಮಾಡಿದಿರಲ್ಲಾ ಆದ್ದರಿಂದ ನಾನು ಈ ಬಗ್ಗೆ ಹೇಳಿದೆ. ಆದ್ದರಿಂದ ನಮಗೆ ಒಟ್ಟಾರೆಯಾಗಿ ಲಾಭ ಎಷ್ಟಾಗಿದೆ. ಎಂದರೆ, 7 ಕೋಟಿ 73 ಲಕ್ಷ ರೂಪಾಯಿಗಳು ಮಾತ್ರ ಆದರೆ ನಾವು ಇವತ್ತು ಬಿಡುಗಡೆ ಮಾಡತಕ್ಕಂಥ ನಮ್ಮ ಪಾಲಿನ ಹಣ

ಎಷ್ಟೆಂದರೆ, As against this Government of Karnataka has to waive an amount of Rs. 115. crores 70 lakhs being the interest amount on advances extended by cooperative institutions, which covers all crops and all areas in the state. ಕೇಂದ್ರ ಸರ್ಕಾರದ ನಾರ್ಮ್ಸ್ ಪ್ರಕಾರ ಹೋದರೆ, 7 ಕೋಟಿ 73 ಲಕ್ಷ ರೂಪಾಯಿಗಳು. ನಮ್ಮ ಪ್ರಕಾರ ನಾರ್ಮ್ಸ್ ಹೋದರೆ, ನಾವು 115 ಕೋಟಿ 70 ಲಕ್ಷ ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ. ಈಗೇನು ನಾವು ಮಾಡಿದ್ದು ಒಳ್ಳೆಯದೋ? ಕೇಂದ್ರ ಸರ್ಕಾರ ಮಾಡಿದ್ದು ಒಳ್ಳೆಯದೋ? ಇದೇನು ರೈತರ ಪರವೋ ರೈತರ ವಿರುದ್ಧವೋ ಎಂಬುದನ್ನು ತಾವೇ ಹೇಳಬೇಕು. ಇದಲ್ಲದೆ, KPTCL ಬಗ್ಗೆಯಂತೂ ತಮಗೆ ಗೊತ್ತಿದೆ, ಅದರ ಬಗ್ಗೆ ಪ್ರಸ್ತಾಪವಾಗಿತ್ತು ಮತ್ತು ಸಾಕಷ್ಟು ಅದರ ಬಗ್ಗೆ ಚರ್ಚೆಯೂ ಕೂಡ ಆಗಿದೆ. ಆ ಬಗ್ಗೆ ಈಗಾಗಲೇ ನಮ್ಮ errgy Department ನ Principal Secretary ಯವರು ದಿನಾಂಕ 24ನೇ ಏಪ್ರಿಲ್ 2003ರಂದು ಒಂದು ಆದೇಶವನ್ನೂ ಕೂಡ ಹೊರಡಿಸಿದ್ದಾರೆ.

As per Government Order No.B. 36 PSR 2003 dt. 24-4-2003 Government has waived the interest component in the electricity arrears as on 31-3-2003 in respect of IP set consumers, who pay the principal amount in full during the period 1.4.2003 to 31.7.2003. in the preamble to this Government order reference is made to Government Order No.D. 8 PSR 2002 dt. 31.5.2002 In that Government Order No. dt. 31-5-2002, Government took over the KPTCL's receivables to the tune of Rs. 866 crores.

ಇದರಿಂದ ಉದ್ಭವವಾಗತಕ್ಕಂತಹ ಎಕ್ಸ್‌ಪೆಂಡಿಚರ್ ಏನಿದೆ, ನಾವು ಐಪಿ ಸೆಟ್‌ಗಳಿಗೆ ಏನು ವೇವ್ ಮಾಡುತ್ತೇವೆ ಅದರ ಅರಿಯರ್ಸ್ ಬಗ್ಗೆ ಹೇಳಿದ್ದಾರೆ. ಅದು ಹೆಚ್ಚೂ ಕಡಿಮೆ 866 ಕೋಟಿ ರೂ ಬರುತ್ತದೆ. ಅದೂ ಕೂಡ ಸರ್ಕಾರವೇ ಕೆಪಿಟಿಸಿಎಲ್‌ಗೆ ಕೊಡುವ ವ್ಯವಸ್ಥೆ ಮಾತಕ್ಕಂಥದ್ದು ಆಗಿದೆ. ಇದು ಎಲ್ಲಾ ಕೂಡ ರೈತರ ಹಿತದೃಷ್ಟಿಯಿಂದ ಮತ್ತು ಐಪಿ ಸೆಟ್ ಕನ್‌ಸ್ಯೂಮರ್ ಏನಿದ್ದಾರೆ ಅವರಿಗೆ ಅನುಕೂಲ ಮಾಡತಕ್ಕಂತಹ ದೃಷ್ಟಿಯಿಂದ ಸರ್ಕಾರ ಈ ನಿರ್ಣಯ ತೆಗೆದುಕೊಂಡಿದೆ. ಕೆಪಿಟಿಸಿಎಲ್ ಕಂತೂ ಕೂಡ ತಪ್ಪುವುದಿಲ್ಲ. ಗ್ಯಾರಂಟಿ ಆದರೂ ಕೊಡಿ, ಲೋನ್ ಆದರೂ ಕೊಡಿ, ಬಜೆಟ್‌ನಲ್ಲಿ ಆದರೂ ಪ್ರಾವಿಷನ್ ಮಾಡಿ, ಯಾವುದೇ ರೂಪದಲ್ಲಿ ಅವರಿಗೆ ಕೊಡಲೇಬೇಕು. ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಈ ಎಲ್ಲಾ ಪ್ರಯತ್ನಗಳು ರೈತರಿಗಾಗಿ, ರೈತರ ಪರ ಮತ್ತು ರೈತರಿಗೆ ಅನುಕೂಲ ಮಾಡಿ ಕೊಡುವ ದೃಷ್ಟಿಯಿಂದ ಈ ಕೆಲಸವನ್ನು ಸರ್ಕಾರ ಮಾಡಿದೆ. ಬಿತ್ತನೆ ಬೀಜದ ಬಗ್ಗೆ ಸಾಕಷ್ಟು ಗುಲ್ಲು ಹೊರಗಡೆಯೂ ಇದೆ, ಒಳಗಡೆಯೂ ಕೆಲವು ಸಲ ಇತ್ತು. ನನಗೆ ಇದು ವಿಮಾ ಕಾರಣ. ನಾನು ಇದರ ಬಗ್ಗೆ ತಮಗೆ ಸ್ಪಷ್ಟವಾದ ಮಾಹಿತಿ ಕೊಡುತ್ತೇನೆ. ಇದರ ಬಗ್ಗೆ ಸಂಶಯವೇನಾದರೂ ಇದ್ದರೆ ನಾನು ಆಗಲೇ ಹೇಳಿದ್ದೇನೆ, ನಮ್ಮ ಕೃಷಿ ಸಚಿವರು ಇದರ ಮೇಲೆ ಹೇಳಿಕೆ ಮಾಡುತ್ತಾರೆ. ಏಕೆಂದರೆ, ಅಪಪ್ರಚಾರ ಮಾಡತಕ್ಕಂಥದ್ದು ಎಲ್ಲಾದರೂ ನಿಲ್ಲಬೇಕು. ಇಲ್ಲದಿದ್ದರೆ ಇದರಲ್ಲಿ ಏನೋ ಇದೆ ಎಂದು ನಾವಾಗಿ ಜನರ ಮನಸ್ಸಿನಲ್ಲಿ ಸಂಶಯ ಮೂಡಿಸಿದರೆ ಅದು ಅದೇ ರೀತಿ ಹೋಗುತ್ತದೆ. 2002–03 ರಲ್ಲಿ ಈ ಹಂಗಾಮಿನಲ್ಲಿ ರೈತರಿಗೆ ಸುಮಾರು ಶೇಕಡ 50ರಷ್ಟು ರಿಯಾಯಿತಿ ದರದಲ್ಲಿ ಬೀಜ ಕೊಡುವುದು ಮಾಡಿದ್ದೇವೆ. ಈಗಾಗಲೇ ಅವರಿಗೆ 30 ಕೋಟಿ

ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಅದರಲ್ಲಿ ಆಗಲೇ 20 ಕೋಟಿ ರೂಪಾಯಿ ಭರಿಸಿದ್ದೇವೆ. ಇನ್ನು 10 ಕೋಟಿ ರೂಪಾಯಿ ಪೈಪ್ ಲೈನ್‌ನಲ್ಲಿ ಇದೆ. ಅದನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೇವೆ. ಈ ವ್ಯವಸ್ಥೆಯನ್ನು ಸುಮಾರು 134 ತಾಲ್ಲೂಕುಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥೆ ಇದೆ. ಸುಮರು 745 ರೈತ ಸಂಪರ್ಕ ಕೇಂದ್ರಗಳು ಏನು ಇವೆ ಈ ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಬೀಜವನ್ನು ವಿತರಿಸತಕ್ಕಂಥದ್ದು, ಅಥವಾ ಬೀಜದ ಬಗ್ಗೆ ಪ್ರಚಾರ ಮಾಡತಕ್ಕಂಥದ್ದು ಸುಮಾರು 13 ವಿವಿಧ ಬೆಳೆಗಳು ರೈತ ಸಂಪರ್ಕ ಕೇಂದ್ರಗಳಲ್ಲಿ ಯಾವ ಯಾವ ಭಾಗದಲ್ಲಿ ಅದಕ್ಕೆ ಇಂಪಾರ್ಟೆನ್ಸ್ ಇದೆ, ಯಾವ ಭಾಗದಲ್ಲಿ ಯಾವ ಬೀಜಗಳು ಬೇಕು? ಎಲ್ಲಿ ಭತ್ತ ಬೇಕು, ರಾಗಿ ಬೇಕು, ಜೋಳ ಬೇಕು, ಗೋವಿನ ಜೋಳ ಬೇಕು, ಸಜ್ಜೆ ಮತ್ತು ತೊಗರಿ ಇದರ ಬಗ್ಗೆ ಎಲ್ಲರಿಗೂ ವಿಶೇಷವಾದ ಮಾಹಿತಿ ಕೊಡುವುದು ಈ ರೈತ ಸಂಪರ್ಕ ಕೇಂದ್ರಗಳು ಮಾಡುತ್ತವೆ. ಅವರು ಇದರ ಬಗ್ಗೆ ಸಾಕಷ್ಟು ಪ್ರಚಾರ, ಕರ ಪತ್ರಗಳು ಪೋಸ್ಟರ್‌ಗಳ ಮುಖಾಂತರ ರೇಡಿಯೋ ಮುಖಾಂತರ ಮತ್ತು ಎಲೆಕ್ಟ್ರಾನಿಕ್ ಮೀಡಿಯಗಳ ಮುಖಾಂತರ ಪ್ರಚಾರ ಮಾಡತಕ್ಕಂತಹ ಎಲ್ಲ ಪ್ರಯತ್ನಗಳು ಇವತ್ತಿನ ದಿವಸ ಮಾಡಿದ್ದಾರೆ ಇಲ್ಲಿಯವರೆಗೆ ಸುಮಾರು 10.7.03 ರವರೆಗೆ 50.521 ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೆಂದ್ರಗಳು ವಿತರಿಸಿರತಕ್ಕಂಥದ್ದು, ಇದರ ಅಂದಾಜು ಮೌಲ್ಯ 24 ಕೋಟಿ ರೂ ನಷ್ಟು ಇತ್ತು. ರಿಯಾಯಿತಿ ಮೊತ್ತ 12 ಕೋಟಿ ರೂಪಾಯಿ ಆಗಿರುತ್ತದೆ. ಇದಲ್ಲದೆ ಸಾಮಾನ್ಯ ವಿತರಣಾ ಜಾಲದಲ್ಲಿ ಇದೇ ಅವಧಿಯಲ್ಲಿ ಸುಮಾರು 49,800 ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ. ಇದರಿಂದಾಗಿ ಒಂದು ಲಕ್ಷ ಕ್ವಿಂಟಾಲ್‌ಗಿಂತ ಮೇಲ್ಪಟ್ಟು ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗಿದೆ. ಖರೀದಿ ಮಾಡಿದ್ದು ಹೊರಗಡೆ ಮಾರ್ಕೆಟ್ ಪ್ರೈಸ್ ಬಹಳ ಕಡಿಮೆ ಇದರಲ್ಲಿ ನೀವು ಕೊಡತಕ್ಕಂಥದ್ದು ಬಹಳ ದುಬಾರಿ ಇದರಲ್ಲಿ ಏನೋ ಅವ್ಯವಹಾರವಾಗಿದೆ. ಎನ್ನತಕ್ಕಂತಹ ಮಾತೂ ಕೂಡ ಈ ಸದನದಲ್ಲಿ ಕೇಳಿ ಬಂತು. ಯಾವುದೇ ಒಂದು ಖರೀದಿ ಮಾಡಲಿ ಬೀಜ ಖರೀದಿ ಮಾಡಲಿ, ಬೇರೆ ಯಾವುದೇ ವಸ್ತುಗಳನ್ನು ನಾವು ಖರೀದಿ ಮಾಡಬೇಕಾದರೂ ಕೂಡ ಟ್ರಾನ್ಸ್‌ಪರೆನ್ಸಿ ಆ್ಯಕ್ಟ್ ಕೆಳಗಡೆ ನಾವು ಮಾಡಬೇಕು. ಟೆಂಡರ್ ಕಾಲ್‌ಫಾರ್ ಮಾಡಿ, ಅಥವಾ ಅದನ್ನು ಪಬ್ಲಿಸಿಟಿ ಮಾಡಿ ಅದರ ಪ್ರಕಾರ ಬೀಜಗಳನ್ನು ಖರೀದಿ ಮಾಡಿದ್ದೇವೆ. ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಬೀಜ ಪೂರೈಸಲಿಕ್ಕೆ ಸರ್ಕಾರೀ ಸ್ವಾಯತ್ತ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಬೀಜ ನಿಗಮ ರಾಷ್ಟ್ರೀಯ ಬೀಜ ನಿಗಮ, ಕರ್ನಾಟಕ ಎಣ್ಣೆ ಕಾಳು ಮಹಾ ಮಂಡಳಿ, ಕೃಷಿ ವಿಶ್ವವಿದ್ಯಾಲಯ ಧಾರವಾಡ ಇವುಗಳ ಜೊತೆ 22 ಖಾಸಗಿ ಸಂಸ್ಥೆಗಳು ಸಹ ಟೆಂಡರ್‌ನಲ್ಲಿ ಭಾಗವಹಿಸಿದ್ದವು. ಬಿತ್ತನೆ ಬೀಜಗಳ ಸರಬರಾಜಿನಲ್ಲಿ ಪ್ರಮಾಣಿತ ಬೀಜಕ್ಕೆ ಮೊದಲ ಆದ್ಯತೆ ನೀಡಲಾಗಿದೆ. ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಪ್ರಕಟಿತವಾಗಿರುವ ತಳಿಗಳನ್ನು ಮತ್ತು ಕೃಷಿ ವಿಶ್ವವಿದ್ಯಾನಿಲಯದಿಂದ ಪರೀಕ್ಷಿಸಲ್ಪಟ್ಟಿರುವ ತಳಿಗಳು ಮಾತ್ರ ವಿತರಿಸಲಾಗುತ್ತಿದೆ. ಈ ಯೋಜನೆಯಲ್ಲಿ ಗುರುತಿಸಲಾದ ತಳಿಗಳ ಜೊತೆಗೆ ಮಾರುಕಟ್ಟೆಯಲ್ಲಿ ಅನೇಕ ಖಾಸಗಿ ತಳಿಗಳು ಬಿತ್ತನೆ ಬೀಜಗಳು ಮಾರಾಟವಾಗುತ್ತಿವೆ. ಅವುಗಳ ಬೆಲೆಗಳ ಮೇಲೆ ಯಾವುದೇ ನಿಯಂತ್ರಣ ಇರುವುದಿಲ್ಲ. ಒಂದು ಪಕ್ಷ ಯಾವುದೇ ಸಂಸ್ಥೆ ದರ ಕರಾರು ಬೆಲೆಗಿಂತ ಡೀಲರ್‌ಗಳ ಕಡಿಮೆ ದರದಲ್ಲಿ ನೀಡಿದ ನಿದರ್ಶನಗಳು ಇದ್ದಲ್ಲಿ ಆ ದರಗಳಿಗೆ ಯೋಜನೆಯಿಂದ ರಿಯಾಯಿತಿ ಬೀಜವನ್ನು ನೀಡುವ ಶರತ್ತನ್ನೂ ಸಹ ಕರಾರು ಒಪ್ಪಂದದಲ್ಲಿ ಸೇರಿಸಿಕೊಂಡರೆ ಇದರಿಂದ ಯಾವುದೇ ಹಂತದಲ್ಲಿ

ಸರ್ಕಾರ ಸ್ವಾಯತ್ತ ಅಥವಾ ಖಾಸಗಿ ಸಂಸ್ಥೆಗಳ ದರ ಕರಾರು ಒಪ್ಪಂದಕ್ಕೆ ಒಳಪಟ್ಟಿರುತ್ತದೆ. ನಮ್ಮ ಶ್ರೀನಿವಾಸಗೌಡರು ಹೇಳಿದರು, ಮಾರ್ಕೆಟಿಂಗ್ ಫೆಡರೇಷನ್‌ನಿಂದ ಅವರೇ ಬೀಜ ಕೊಡುತ್ತಾರೆ. ಸೀಜ್ ಫೆಡರೇಷನ್‌ನಲ್ಲಿ ಎಲ್ಲಾ ಅವರೇ, ಅವರು ಹೆಚ್ಚು ಕಡಿಮೆ ಯಾವ ದರದಲ್ಲಿ ಕೊಡುತ್ತಾರೆ, ಹೇಗೆ ಕೊಡುತ್ತಾರೆಂದು ಅವರು ಹೇಳಿದರೆ ಚೆನ್ನಾಗಿತ್ತು. ಏಕೆಂದರೆ, ಅವರೂ ಕೂಡ ಧ್ವನಿಯಲ್ಲಿ ಧ್ವನಿ ಕೂಡಿಸಿದರು. ಸರ್ಕಾರ ಖರೀದಿ ಮಾಡಿದರೆ ಸರಿಯಲ್ಲ, ಅವರು ಅಲ್ಲಿ ಏನು ಬೀಜ ತೆಗೆದುಕೊಂಡಿದ್ದಾರೆ ಅದು ದುಬಾರಿ ಇದೆ, ದುಪ್ಪಟ್ಟು ಬೆಲೆಯಲ್ಲಿ ತೆಗೆದುಕೊಂಡಿದ್ದಾರೆ, ಅದನ್ನು ಮಾರುಕಟ್ಟೆಯಲ್ಲಿ ಹೊರಗಡೆ ಕಡಿಮೆ ಬೆಲೆಗೆ ಸಿಗುತ್ತದೆ, ಎಂದು ಸರ್ಟಿಫೈಡ್ ಸೀಡ್ಸ್ ಯಾವ ಟೆಂಡರ್ ಮುಖಾಂತರ ಕರೆದಿದ್ದಾರೆ, ಯಾವ ಬೆಲೆಯಲ್ಲಿ ತೆಗೆದುಕೊಂಡಿದ್ದಾರೆ ಅದೇ ಬೆಲೆಯಲ್ಲಿ ಕೊಟ್ಟಿದ್ದಾರೆ. ಸರ್ಟಿಫೈಡ್ ಸೀಡ್ಸ್ ತೆಗೆದುಕೊಂಡ ಮೇಲೆ ಸಂಸ್ಥೆಗೆ ಜವಾಬ್ದಾರಿ ಇರುತ್ತದೆ. ಸರ್ಟಿಫೈಡ್ ಸೀಡ್ಸ್ ಬೇಕಾಬಿಟ್ಟಿ ನಾವು ಹೊರಗಡೆ ಖರೀದಿ ಮಾಡಿದರೆ ನಾಳೆ ಏನದರೂ ಅನಾಹುತ ಆದರೆ ಯಾರು ಜವಾಬ್ದಾರರು? ನಾವು ಇದನ್ನೂ ಕೂಡ ತಿಳಿದುಕೊಳ್ಳಬೇಕು. ಸೇಲ್ಸ್ ಟ್ಯಾಕ್ಸ್ ಕೊಟ್ಟು ನೀವು ಯಾವುದೇ ಮಾಲು ಖರೀದಿ ಮಾಡುವಾಗ ದುಬಾರಿ ಬೀಳುತ್ತದೆ. ಸೇಲ್ಸ್ ಟ್ಯಾಕ್ಸ್ ಇಲ್ಲದೆ ಹೇಗೆ ಕೊಡುವುದು ಎಂದೆ, 10 ರಿಂದ 5 ರೂಪಾಯಿ ಕಡಿಮೆ ದರದಲ್ಲಿ ಸಿಗಬಹುದು. ಸರ್ಕಾರ ಆ ಕೆಲಸ ಮಾಡುವುದಕ್ಕಾಗುತ್ತಾ? ಸಂಸ್ಥೆ ಆ ಕೆಲಸ ಮಾಡುವುದಕ್ಕೆ ಆಗುತ್ತದೆಯಾ? ಅದಕ್ಕೋಸ್ಕರ ಅದನ್ನು ಬೇಕಾದರೆ ಡೀಟೇಲಾಗಿ ಕ್ಲ್ಯಾರಿಫಿಕೇನ್‌ನಲ್ಲಿ ಹೇಳುತ್ತಾರೆ. ಇದರಲ್ಲಿ ಯಾವುದೇ ಸತ್ಯಾಂಶ ಇಲ್ಲ. ಆವತ್ತಿನ ದಿವಸ ಏನು ಖರೀದಿ ಆಗಿದೆ ಟ್ರಾನ್ಸ್‌ಪರೆನ್ಸಿ ಆಕ್ಟ್ ಪ್ರಕಾರ ಖರೀದಿ ಆಗಿದೆ ಎನ್ನತಕ್ಕಂತಹ ಮಾಹಿತಿ ನನ್ನ ಹತ್ತಿರ ಇದೆ. ಬರೀ ತಪ್ಪು ಮಹಿತಿ ಕೊಡುವುದು ಆಗಬಾರದು, ಅದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಖಂಡಿತವಾಗಿ ಪರಿಶೀಲನೆ ಮಾಡೋಣ. ಆದರೆ ಇದನ್ನು ಬಹಳ ದುಬಾರಿಯಾಗಿದೆ, ಲಪಟಾಯಿಸಿದ್ದಾರೆ, ದುಡ್ಡು ಹೊಡೆದಿದ್ದಾರೆ, ಲಂಚ ಹೊಡೆದಿದ್ದಾರೆ ಇಂತಹ ಶಬ್ದಗಳನ್ನು ಯಾರೂ ಕೂಡ ಬಳಸಬಾರದು. ಏಕೆಂದರೆ, ನಿಖರವಾಗಿ ಏನಾದರೂ ಹೇಳಿದರೆ ನಾವು ಅದರ ಬಗ್ಗೆ ತನಿಖೆ ಮಾಡಬಹುದು. ಅವರಿಗೂ ಕೂಡ ಈ ಆ್ಯಕ್ಟ್ ಬಗ್ಗೆ ಮಾಹಿತಿ ಇದೆ, ಕಾನೂನು ಬಗ್ಗೆ ಮಾಹಿತಿ ಇದೆ, ಪ್ರೊಸೀಜರ್ ಬಗ್ಗೆ ಮಾಹಿತಿ ಇದೆ. ಪ್ರೊಸೀಜರ್ ಬಿಟ್ಟು ಡೀವಿಯೇಟ್ ಮಾಡುವುದಕ್ಕೆ ಬಂದರೆ ಆ ಮಾತು ಬೇರೆ ಅದಕ್ಕಾಗಿ ಇದರಲ್ಲಿ ಯಾವುದೇ ಹುರುಳಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಭೂ ಕಂದಾಯ ಮನ್ನ ಕೂಡ ಸುಮಾರು 23 ಜಿಲ್ಲೆಗಳಲ್ಲಿ 130 ತಾಲ್ಲೂಕುಗಳಲ್ಲಿ ಭೂ ಕಂದಾಯ ಮನ್ನಾ ಮಾಡುತ್ತಿದ್ದೇವೆ. 134ರ ಪೈಕಿ 66 ತಾಲ್ಲೂಕುಗಳಲ್ಲಿ 100 ಪರ್ಸೆಂಟ್, 68 ತಾಲ್ಲೂಕುಗಳಲ್ಲಿ 50 ರಷ್ಟು ಭೂ ಕಂದಾಯವನ್ನು ಸರ್ಕಾರ ಮನ್ನಾ ಮಾಡಿದೆ. ಯಾವ ಯಾವ ತಾಲ್ಲೂಕುಗಳಲ್ಲಿ ಎನ್ನುವುದು ನಾನು ಪಟ್ಟಿ ಕೊಡುತ್ತೇನೆ. ಬೇಕಾದರೆ ನೋಡಬಹುದು. ಅದು ದೊಡ್ಡ ಲೀಸ್ಟ್ ಆಗುತ್ತದೆ. ಆದ್ದರಿಂದ ಇಷ್ಟು ಮಾತ್ರ ಈ ಸಭೆಯಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರದ ನೆರವು ತೆಗೆದುಕೊಳ್ಳುವುದಕ್ಕೆ ಏನು ಪ್ರಯತ್ನ ನಮ್ಮಿಂದ ಆಗಿದೆ ಎಂದು ಹೇಳಿದರು, ಏನೂ ಪ್ರಯತ್ನ ನಡೆದಿಲ್ಲ ಎನ್ನುವ ಮಾತು ಇಲ್ಲಿ ಕೇಳಿದ್ದೇವೆ. ಅಥವಾ ಹೊರಗಡೆಯಲ್ಲೂ ಕೂಡ ಆ ಮಾತನ್ನು

12.40 ಪಿ.ಎಂ.

ನಾವು ಕೇಳಿದ್ದೇವೆ. ಅಧ್ಯಕ್ಷರೆ, ತಮಗೆ ಗೊತ್ತಿದೆ. ಈ ಡ್ರಾಟ್ ಸಮಸ್ಯೆ ಪ್ರಾರಂಭವಾದಾಗಲೇ ಎಲ್ಲಾ ಕಡೆಯಲ್ಲೂ ಮೊದಲಿನಿಂದಲೇ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಡೆಪ್ಯೂಟಿ

ಕಮಿಶನರ್‌ರವರನ್ನು, ಪ್ರಿನ್ಸಿಪಲ್ ಸೆಕ್ರೆಟರಿಗಳನ್ನು, ಡೆವಲಪ್‌ಮೆಂಟ್ ಕಮಿಶನರ್‌ರವರುಗಳನ್ನು, ಚೀಫ್ ಸೆಕ್ರೆಟರಿಯಾದಿಯಾಗಿ ಎಲ್ಲರಿಗೂ ಕೂಡ ಆದೇಶ ಕೊಟ್ಟು ಈ ಸ್ಕೋರ್ ಸಿಟಿ ಏನಿದೆ ಅಥವಾ ಡ್ರಾಟ್ ಅಫೆಕ್ಟೆಡ್ ತಾಲ್ಲೂಕುಗಳು ಏನಿದೆ ಅಲ್ಲೆಲ್ಲಾ ಆದ್ಯತೆ ಮೇಲೆ ನೀರಿನ ವ್ಯವಸ್ಥೆ ಮಾಡಬೇಕು, ಮೇವಿನ ವ್ಯವಸ್ಥೆ ಮಾಡಬೇಕು. ಮತ್ತು ಉದ್ಯೋಗ ಕೊಡಬೇಕು ಎನ್ನತಕ್ಕಂಥದ್ದರ ಬಗ್ಗೆ ಆದೇಶವನ್ನು ಕೊಟ್ಟರು. ಆ ಕೆಲವು ಕೆಲಸಗಳು 2001, 2002 ರಲ್ಲಿ ನಡೆದವು. ಪುನಃ 2002–2003 ರಲ್ಲಿಯೂ ಕೂಡ ಕಂಟಿನ್ಯೂ ಆಯಿತು. ಆದರೆ ಇದರ ಗಂಭೀರತೆಯನ್ನು ಕಂಡು ನಮ್ಮಲ್ಲಿ ಏನು ಪರಿಸ್ಥಿತಿ ಇದೆಯೋ ಅದೇ ಪರಿಸ್ಥಿತಿ ಭಾರತ ದೇಶದ ಸುಮಾರು 11 ರಾಜ್ಯಗಳಲ್ಲಿ ಇತ್ತು. ಆ 11 ರಾಜ್ಯಗಳಲ್ಲೂ ಬರಗಾಲದ ಇದೇ ಪರಿಸ್ಥಿತಿ ಇದೆ ಎನ್ನುವುದನ್ನು ತಿಳಿದುಕೊಂಡು ಕೇಂದ್ರ ಸರ್ಕಾರ ಒಂದು ಕಮಿಟಿಯನ್ನು ರಚನೆ ಮಾಡಿತು. ಸೆಂಟ್ರಲ್ ಡ್ರಾಟ್ ಟಾಸ್ಕ್‌ಫೋರ್ಸ್ ಕಮಿಟಿ ಎಂದು ಮಾಡಿತು. ಈ ಕಮಿಟಿಯು ಉಪ ಪ್ರಧಾನಿಗಳಾದ ಸನ್ಮಾನ್ಯ ಎಲ್.ಕೆ. ಅಡ್ವಾನಿಯವರ ನೇತೃತ್ವದಲ್ಲಿ ರಚನೆಯಾಗಿ ಸಮಿತಿಯಲ್ಲಿ ಅಗ್ರಿಕಲ್ಚರ್ ಮಿನಿಸ್ಟರ್, ಫುಡ್ ಮಿನಿಸ್ಟರ್, ರೂರಲ್ ಡೆವಲಫ್‌ಮೆಂಟ್ ಮಿನಿಸ್ಟರ್, ಫೈನಾನ್ಸ್ ಮಿನಿಸ್ಟರ್‌ಗಳನ್ನು ಸೇರಿಸಿಕೊಂಡು ಯಾವ ಯಾವ ರಾಜ್ಯಗಳಲ್ಲಿ ಈ ಬರ ಪರಿಸ್ಥಿತಿ ಗಂಭೀರವಾಗಿದೆ ಅಂಥ ಕಡೆಗಳಿಗೆ ನೆರವನ್ನು ನೀಡಬೇಕೆಂದು ಹೇಳಿಯೇ ಎನ್.ಸಿ.ಸಿ.ಎಫ್, ಫಂಡ್ ಎಂದು ಮೊದಲನೆ ಬಾರಿಗೆ ಸೃಷ್ಟಿ ಮಾಡಲಾಯಿತು. ಆ ಒಂದು ಎನ್.ಸಿ.ಸಿ.ಎಫ್. ಫಂಡ್‌ನ್ನು ವಿತರಣೆ ಮಾಡತಕ್ಕಂಥದ್ದಾಗಲಿ ಮತ್ತು ಅದನ್ನು ಯಾರು ಮಾಡಬೇಕು ಎಂದು ಹೇಳಿ ಈ ಟಾಸ್ಕ್ ಫೋಸ ಕಮಿಟಿ ಏನಿತ್ತೋ ಶ್ರೀಮಾನ್ ಅಡ್ವಾನಿ ಯವರ ನೇತೃತ್ವದಲ್ಲಿ ಇದ್ದ ಕಮಿಟಿಯೇ ಎಲ್ಲಾ ರಾಜ್ಯಗಳಿಗೆ ಫುಡ್‌ಗ್ರೈನ್ಸ್ ಹಾಗೂ ಹಣವನ್ನು ವಿತರಣೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಆ ಕಮಿಟಿ ಅಲ್ಲಿ ಆದಮೇಲೆ ನಮ್ಮ ರಾಜ್ಯದಲ್ಲೂ ಕೂಡ ಬರಗಾಲದ ಗಂಭೀರತೆಯನ್ನು ನೋಡಿ, ಡ್ರಾಟ್ ಸಿಚ್ಯುಯೇಶನ್ ಸೀರಿಯಸ್‌ನೆಸ್‌ನ್ನು ಅರಿತುಕೊಂಡು ಮಾನ್ಯ ಮುಖ್ಯಮಂತ್ರಿಗಳು ನಮ್ಮ ರಾಜ್ಯದಲ್ಲೂ ಕೂಡ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಬ್ ಕಮಿಟಿಯನ್ನು ಮಾಡಿದರು. ಆ ಸಬ್ ಕಮಿಟಿಯಲ್ಲಿ ಅಗ್ರಿಕಲ್ಚರ್ ಮಿನಿಸ್ಟರ್, ವಾಟರ್ ರಿಸೋರ್ಸ್‌ಸ್ ಮಿನಿಸ್ಟರ್, ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್, ರೆವಿನ್ಯೂ ಮಿನಿಸ್ಟರ್ ಮತ್ತು ಅನಿಮಲ್ ಹಸ್ಬೆಂಡರಿನಿಟರ್ ಹೀಗೆ ಕೆಲವು ಮಿನಿಸ್ಟರ್‌ಗಳನ್ನೊಳಗೊಂಡ ಈ ಸಬ್ ಕಮಿಟಿಯನ್ನು ರಾಜ್ಯ ಮಟ್ಟದಲ್ಲೂ ಕೂಡ ಮಾಡಿದರು. ಏಕೆ ಎಂದರೆ ಇದಕ್ಕೆ ವಿಶೇಷವಾದಂಥ ಚಾಲನೆಯನ್ನು ಕೊಡಬೇಕು, ಕೆಲಸಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು, ಜನರ ಸಮಸ್ಯೆಗೆ ಸ್ಪಂದಿಸಬೇಕು ಮತ್ತು ಅವರ ಕಷ್ಟವನ್ನು ಪರಿಹಾರ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದಲೇ ನಮ್ಮ ರಾಜ್ಯದಲ್ಲೂ ಕೂಡ ಇದಕ್ಕಾಗಿ ಒಂದು ಸಬ್ ಕಮಿಟಿಯನ್ನು ಮೊಟ್ಟಮೊದಲನೆಯ ಬಾರಿಗೆ ಮಾಡಲಾಯಿತು. ಕೇಂದ್ರದಲ್ಲೂ ಕೂಡ ಪ್ರಥಮ ಬಾರಿಗೇ ಮಾಡಿದ್ದು. ಅದೇ ರೀತಿಯಾಗಿ ನಮ್ಮ ರಾಜ್ಯದಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಈ ಸಬ್ ಕಮಿಟಿಯನ್ನು ಇವೊತ್ತಿನ ದಿವಸ ಕಾನ್‌ಸ್ಟಿಟ್ಯೂಟ್ ಮಾಡಿದರು. ಇನ್ನು ನಮ್ಮ ಪ್ರಯತ್ನಗಳು ಏನು ನಡೆಯಿತು ಎಂಬ ಬಗ್ಗೆ ಹೇಳುತ್ತೇನೆ. **19-09-2002ರಲ್ಲಿ the cabinet sub-Committee members met Deputy prime Minister, Union Agriculture Minister, Union Consumer Affairs Minister, seeking allocation**

of food grains. ಅಂದರೆ ನಮಗೆ ಮುಡ್‌ಗ್ರೈನ್ಸ್ ಬೇಕು ಮತ್ತು ಮೆಮೊರಾಂಡ್‌ಮ್‌ನಂತೂ ನಾವು ಈಗಾಗಲೇ ಹೇಳಿದ ಹಾಗೆ 1563 ಕೋಟಿ ರೂಗೆ ಕೊಟ್ಟಿದ್ದೆವು, ಅದನ್ನೂ ಕೂಡ ಕೊಟ್ಟೆವು. ಅದಕ್ಕೆ ಸೆಪ್ಟೆಂಬರ್ 19ಕ್ಕೆ ನಮ್ಮ ಪ್ರಯತ್ನ ಪ್ರಾರಂಭವಾಯಿತು. ಇದಾದಮೇಲೆ ಡಿಸೆಂಬರ್ 13 ಮತ್ತು 14 ರಂದು the Cabinet sub-committee members met Hon'ble Deputy prime Minister, Union Agriculture Minister and Union Consumer Affairs Minister seeking more allocation of food grains. ಆಮೇಲೆ ಮೂರನೆಯದಾಗಿ 8ನೇ ಫೆಬ್ರವರಿ 2003 ರಂದು Internal Security Meeting ಗೆ ನಾವು ಹೋದಾಗ ಆಗಲೂ ಕೂಡ ಡೆಪ್ಯುಟಿ ಪ್ರೈಮ್ ಮಿನಿಸ್ಟರ್‌ರವರಿಗೆ ಮತ್ತು ಬೇರೆ ಮಂತ್ರಿಗಳನ್ನು ಭೇಟಿಯಾಗಿ ಆಗಲೂ ಕೂಡ ಮನವರಿಕೆಯನ್ನು ಇಲ್ಲಿನ ಸಿಚ್ಯುಯೇಶನ್ ಬಗ್ಗೆ ಅವರಿಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ಆಗ ಇಲ್ಲಿನ ಡ್ರಾಟ್ ಸೀರಿಯಸ್‌ನೆಸ್ ಬಗ್ಗೆ ಕೂಡ ತಿಳುವಳಿಕೆಯನ್ನು ಕೊಟ್ಟಿದ್ದೇವೆ ತದನಂತರ ನಾಲ್ಕನೇ ಬಾರಿಗೆ 24.4.2003 ರಂದೂ ಕೂಡ ಡೆಪ್ಯೂಟಿ ಪ್ರೈಮ್ ಮಿನಿಸ್ಟರವರಿಗೆ ಹಾಗೂ ಉಳಿದ ಯೂನಿಯನ್ ಮಿನಿಸ್ಟರಗಳನ್ನು ಪುನಃ ಭೇಟಿಯಾಗಿ ನಾವು ಒತ್ತಾಯವನ್ನು ಮಾಡಿದೆವು. ಇದಾದ ಮೇಲೆ 13.05–2003 ರಂದು ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್ ಆದಮೇಲೆ ಪ್ರಯತ್ನ ಆಗ ಮಾನ್ಯ ಅಜೀತ್‌ಸಿಂಗ್ ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದರು. ಅವರನ್ನೂ ಕೂಡ ಭೇಟಿಯಾಗಿ ಫಂಡ್ಸ್ ರಿಲೀಸ್ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಕೇಳಿಕೊಂಡೆವು. ಇದಾದಮೇಲೆ ಏಳನೇ ಬಾರಿಗೆ 4.6.2003 ರಂದು The cabinet sub-committee Member met Hon'ble Deputy Prime minister, other Union Ministers, deputy Chairman of Planning Commission. ಇವರೆಲ್ಲರನ್ನೂ ಭೇಟಿಯಾಗಿ ಪುನಃ ಫಂಡ್ಸ್‌ನ್ನು ರಿಲೀಸ್ ಮಾಡಿ ಎಂದು ನಾವು ಕೇಳಿಕೊಂಡೆವು. ಇದಾದಮೇಲೆ ಎಂಟನೇ ಬಾರಿ 9–6–2003 ರಂದು ಯುನಿಯನ್ ಅಗ್ರಿಕಲ್ಚರ್ ಮಿನಿಸ್ಟರ್ ರಾಜನಾಥಸಿಂಗ್, ಯುನಿಯನ್ ಅಗ್ರಿಕಲ್ಚರ್ ಸ್ಕ್ರೆಟರಿ ಶರ್ಮಾರವರು ಇಲ್ಲಿಗೇ ಬಂದಿದ್ದರು. ಜಾಯಿಂಟ್ ಸ್ಕ್ರೆಟರಿ ಜೈನ್‌ರವರು ಇಲ್ಲಿಗೆ ಬಂದಿದ್ದರು. ಅವರನ್ನು ನಮ್ಮ ಕ್ಯಾಬಿನೆಟ್ ಸಬ್ ಕಮಿಟಿ ಮೆಂಬರ್‌ಗಳೆಲ್ಲರೂ ಭೇಟಿಯಾಗಿ ಇಲ್ಲಿನ ಪರಿಸ್ಥಿತಿ ಬಗ್ಗೆ ನಾವು ಅವರಿಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ಅವರುಗಳು ನಾವು ಮಾಡಿದಂಥ ಕೆಲಸಗಳನ್ನೂ ಕೂಡ ಅಪ್ರೀಶಿಯೇಟ್ ಮಡಿದರು, ಬಹಳ ಒಳ್ಳೆಯ ರೀತಿಯಿಂದ ಕೆಲಸವನ್ನು ಮಾಡಿದ್ದೀರಿ, ಅವುಗಳನ್ನು ತಾವು ಮುಂದುವರೆಸಿಕೊಂಡು ಹೋಗಿ, ನಾವು ಆದಷ್ಟು ಸಹಾಯವನ್ನು ಮಾಡುತ್ತೇವೆ ಎನ್ನುವ ಮಾತನ್ನು, ವಾಗ್ದಾನವನ್ನು ಅವರು ಇಲ್ಲಿಗೆಯೇ ಬಂದಿದ್ದಾಗ ಕೊಟ್ಟಿದ್ದಾರೆ. ತಮಗೆಲ್ಲರಿಗೂ ಗೊತ್ತಿದೆ. ರೇಡಿಯೋನಲ್ಲಿ ಕೂಡ ಬಂದಿತು, ಪತ್ರಿಕೆಗಳಲ್ಲೂ ಕೂ ಬಂತು, ಎಲ್ಲಾ ಕಡೆಯೂ ಕೂಡ ಮಾತುಗಳನ್ನು ಅವರು ಹೇಳಿದರು ಮತ್ತು ಆದಷ್ಟು ಸಹಾಯವನ್ನು ಮಾಡುತ್ತೇವೆ ಎಂದು ಅವರು ಇಲ್ಲಿ ಹೇಳಿಹೋದರು. ಅದಾದಮೇಲೆ ಒಂಭತ್ತನೆಯ ಬಾರಿ 24ನೇ ಜೂನ್ 2003 ರಂದು all party delegation of the state headed by Hon. Chief Minister ಗಳು ಮತ್ತು ನಾವು, ಎಲ್ಲರೂ ಸೇರಿ ಹೋದಾಗ ತಾವೆಲ್ಲರೂ ಕೂಡ ಇದ್ದಿರಿ, ನಾವು, ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಡೆಪ್ಯೂಟಿ ಪ್ರೈಮ್ ಮಿನಿಸ್ಟರ್‌ರವರ ಹತ್ತಿರ ಸಮಯವನ್ನು ತೆಗೆದುಕೊಂಡು ಅವರ ಛೇಂಬರ್‌ನಲ್ಲಿಯೇ ಹೋಗಿ ಭೇಟಿಯಾಗಿ ನಮ್ಮ ಬೇಡಿಕೆಯನ್ನು ಪುನಃ ಸಲ್ಲಿಸಿ ಪುನಃ ಅವರಿಗೆ ಕೇಳಿಕೊಂಡು ಆದಷ್ಟು ಹೆಚ್ಚಿನ ಆಹಾರ ಧಾನ್ಯವನ್ನು ಕೊಡಬೇಕೆಂದು, ಹಣವನ್ನು

ಕೊಡಬೇಕೆಂದು ಹೇಳಿ ಅಲ್ಲಿಯೂ ಕೂಡ ಅವರನ್ನು ನಾವು ಕೇಳಿಕೊಂಡಿದ್ದೇವೆ. ಹೀಗೆ ಸ್ವಾಮಿ, ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ಅಲ್ಲ, ನಾಲ್ಕು ಬಾರಿಯಲ್ಲ ಸುಮರು 9 ಬಾರಿ ನಮ್ಮ ಪ್ರಯತ್ನಗಳು ನಡೆದಿದೆ. ಇನ್ನೂ ನಡೆಯುತ್ತಾ ಇದೆ. ಏಕೆಂದರೆ ಎಲ್ಲಿಯವರೆವಿಗೆ ನಮ್ಮ ಸಮಸ್ಯೆಗಳು ಇರುತ್ತದೆಯೋ ಆ ಸಮಸ್ಯೆಗೆ ಎಲ್ಲಿಯವರೆವಿಗೆ ಕೇಂದ್ರ ಸರ್ಕಾರ ಸ್ಪಂದಿಸುವುದಿಲ್ಲವೋ ಅಲ್ಲಿಯವರೆವಿಗೆ ನಮ್ಮ ಪ್ರಯತ್ನಗಳನ್ನು ಮುಂದುವರಿಸಿಕೊಂಡೇ ಇರಬೇಕಾಗುತ್ತದೆ. ಈ ಬಗ್ಗೆ ನಮ್ಮ ಪ್ರಯತ್ನಗಳು ಎಷ್ಟರ ಮಟ್ಟಿಗೆ ನಡೆದಿದೆ ಎಂಬುದಕ್ಕೆ ನಾನು ತಮ್ಮ ಗಮನಕ್ಕೆ ತರುವುದಕ್ಕೆ ಹೇಳಿದನೇ ಹೊರತು ಬೇರೆ ಉದ್ದೇಶದಿಂದಲ್ಲ ಏಕೆಂದರೆ ಇಷ್ಟು ಹೇಳಿದ ಮೇಲೂ ನೀವು ನಮಗೆ ಇಷ್ಟು ಸಲ ಹೋಗಿದ್ದೀರಲ್ಲಾ ಏನು ಮಾಡಿದಿರಿ ಎಂದು ಕೇಳಬಾರದು. ನಮ್ಮ ಪ್ರಯತ್ನಗಳು ಇವೆ, ಪ್ರಯತ್ನಗಳನ್ನು ಮಾಡುವುದು ನಮ್ಮ ಕೆಲಸ. ಈ ಪ್ರಯತ್ನಗಳನ್ನು ಮಾಡುವುದರಲ್ಲಿ ನಾವು ವಿಫಲರಾಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಲ್ಲದೆಯೇ ಇಲ್ಲಿ ಕೆಲವು ಬಾರಿ ಸದಸ್ಯರು ಮಾತನಾಡಿ ಈಗಾಗಲೇ ರೈತರುಗಳು ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರಲ್ಲಾ, ಅವರಿಗೆ ಏನು ಪರಿಹಾರ ಕೊಟ್ಟಿರಿ, ಏನು ಮಾಡಿದಿರಿ ಎನ್ನುವ ಪ್ರಶ್ನೆಗಳನ್ನು ಕೇಳಿದರು. ಅದಕ್ಕೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು 18-7-2003 ರಂದು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಯಾವುದೇ ರೈತ ಕುಟುಂಬದಲ್ಲಿ ರೈತ ಆತ್ಮಹತ್ಯೆ ಮಾಡಿಕೊಂಡಿದ್ದರೆ ಅಂಥ ಪ್ರಕರಣಗಳ ಬಗ್ಗೆ ತಿಳಿದು ಕೊಳ್ಳಲು ಒಂದು ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯಲ್ಲಿ ಕಂದಾಯ ಇಲಾಖೆಯ ಉಪ ವಿಭಾಗಾಧಿಕಾರಿ ಅಧ್ಯಕ್ಷರಾಗಿರುತ್ತಾರೆ. ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಸದಸ್ಯರಾಗಿರುತ್ತಾರೆ. ಇವರಲ್ಲದೇ ಆಯಾಯ ತಾಲ್ಲೂಕಿನ ತಹಸೀಲ್ದಾರರುಗಳು ಮತ್ತು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಕಾರ್ಯದರ್ಶಿ, ಸಹಕಾರಿ ಸಂಘದ ಅಭಿವೃದ್ಧಿ ಅಧಿಕಾರಿ, ಲೀಡ್ ಬ್ಯಾಂಕಿನ ಮ್ಯಾನೇಜರ್, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು, ಇವರುಗಳನ್ನೊಳಗೊಂಡ ಒಂದು ಕಮಿಟಿಯನ್ನು ಮಾಡಿದ್ದಾರೆ ಆ ಕಮಿಟಿ ಸರ್ಟಿಫೈ ಮಾಡಿದ ಮೇಲೆ ಅಲ್ಲೇನು ನಮ್ಮ ರೈತರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೋ ಅವರ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ಈಗಾಗಲೇ ಆದೇಶವನ್ನು ಹೊರಡಿಸಿದ್ದಾರೆ. ಇದರ ಪ್ರಕಾರ ಆ ಕಮಿಟಿ ಏನು ಶಿಫಾರಸ್ಸು ಮಾಡುತ್ತದೋ ಆ ಒಂದು ಲಕ್ಷ ರೂಪಾಯಿಯನ್ನು ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬಕ್ಕೆ ಕೊಡತಕ್ಕಂಥದ್ದಾಗಿದೆ. ಇಲ್ಲಿ ಆ ರೈತ ಸಾಲವನ್ನು ಮಾಡಿದ್ದ, ಸಾಲದ ಹೊರೆ ಅವನ ಮೇಲೆ ಇತ್ತು, ಸಾಲವನ್ನು ತೀರಿಸಲಾಗದೆಯೇ ಅವನು ಆತ್ಮಹತ್ಯೆ ಮಾಡಿಕೊಂಡದ್ದು ಎಂದು ಆ ಕಮಿಟಿ ಶಿಫಾರಸ್ಸು ಮಾಡಿದರೆ ಮಾತ್ರ ಒಂದು ಲಕ್ಷ ರೂಪಾಯಿ ಕೊಡತಕ್ಕಂತ ಆದೇಶವನ್ನು ಈಗಾಗಲೇ ಹೊರ ಹಾಕಿದ್ದೇವೆ. ಇದರ ಲಾಭವನ್ನು ರೈತರು ಪಡೆಯಬಹುದು ಎಂದು ತಮ್ಮ ಮುಖಾಂತರ ಇಡೀ ರಾಜ್ಯದ ರೈತರಿಗೆ ಹೇಳಬಯಸುತ್ತೇನೆ. ಬರಗಾಲದಲ್ಲಿ ನಡೆದಿರತಕ್ಕಂಥ ಅವ್ಯವಹಾರದ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಅದನ್ನು ನಾನು ಪುನಃ ಹೇಳುವುದಿಲ್ಲ. ಕೆಲವು ಉದಾಹರಣೆಗಳನ್ನು ಹೇಳುತ್ತೇನೆ. ನಾನು ಈಗಾಗಲೇ ಹೇಳಿದೆ, 1,31,000 ಕೆಲಸಗಳಲ್ಲಿ ಸುಮಾರು 32,000 ಕ್ಕಿಂತಲೂ ಮೇಲ್ಪಟ್ಟು ನಮ್ಮ ಸಿ.ಆರ್.ಎಫ್‌ನಲ್ಲಿ ನಡೆದಂತಹ, ಎನ್.ಸಿ.ಸಿ.ಎಫ್‌ನಲ್ಲಿ ನಡೆದಂತಹ ಬರಗಾಲ ಕಾಮಗಾರಿಗಳಲ್ಲಿ ತೆಗೆದುಕೊಂಡಂತಹವು ಒಟ್ಟು 96 ಸಾವಿರ ನಮ್ಮ ಡಿಪಾರ್ಟ್‌ಮೆಂಟಲ್ ಕೆಲಸ ಇವೆಲ್ಲವೂ ಹಿಡಿದುಕೊಂಡಾಗ ಬರಗಾಲದ ಕಾಮಗಾರಿಗಳ ನಿರ್ವಹಣೆಯಲ್ಲಿ ನಡೆದಿರುವ

ಅವ್ಯವಹಾರಗಳ ವಿವರಗಳು. ಶಿವಮೊಗ್ಗದಲ್ಲಿ ಮೂರು ಕೇಸಸ್, ಭದ್ರಾವತಿಯಲ್ಲಿ ದಿ: 31.11.02 ರಲ್ಲಿ ಎಂದರೆ ಇದು ಹೋದವರ್ಷದ್ದು Sri. Lokesh, Watchman, P.W.D. Godown, P.W.D was kept under suspension and police case has been registered. ಏಕೆಂದರೆ ಅವನು ಬೆಂಕಿ ಹಚ್ಚಿದ್ದಾನೆ ಎಂದು ಸುದ್ಧಿ ಬಂದಿತ್ತು. ನಾವು ಸ್ಟೋರ್ ಮಾಡಿದಂತಹ 23 ಮೆಟ್ರಿಕ್ ಟನ್ ಅಲ್ಲಿ ಡೆಸ್ಟ್ರಾಯ್ ಆಗಿದೆ ಎಂದು ಬಂದಮೇಲೆ ಆ ಗೋಡೌನ್ ಕೀಪರ್ ಅಥವಾ ವಾಚ್‌ಮನ್ ಲೋಕೇಶ್ ಅವನನ್ನು ಅಲ್ಲಿ ಸಸ್ಪೆಂಡ್ ಮಡಲಾಗಿದೆ. On 16.11.2002 at shikaripur around 54 metric tonne of rice was caught by Tehsildar in M.s. Santosh Rice Mill. The Assistant Director, Karnataka Land Army Corporation was kept under suspension and case is registered, Police is looking after. Shimoga- On 11.07.2003 M.R. yekantappa, Executive Officer, Taluka Panchayat, Shimoga was suspended. S.L. Raju, Junior Engineer was suspended on 4.6.2003 for incurring excess expenditure in drought relief works, non payment of wages to the labour and non-recording in the Measurement Book. Thirdly, Mysore District one case, On 18.12.2002 Lokayuktha detected S.G.R.Y. food grains in a private Rice Mill and 593 quintals seized in M.S. Shankar Rice Mill, Hallahalli Nanjangud. Sri. Basavanna, Assistant Executive Engineer Z.P. kept under suspension in Bagalkot - one case. On 11.06.2003, 30 metric tonnes of rice illegally transported to Maharastra was seized by Police and Sri. Gopalappa, Junior Engineer, Minor Irrigation has been kept under suspension. fourthly, Dharwad District - one case. That on 09.07.2003 100 metric tons or food grains stored in Godown owned by Sri. Udaya Shetty, Kalagatagi was seized. D.C. is conducting enquiry as to whether these food grains were meant for Government sponsered works or other works. Fifthly, Chitradurga District - one case poor quality or work was noticed on 5.7.2003 at bopanahalli village, Challakere. It is a budgeted work of Minor irrigation which is being implemented by Sri. Shadakahari, Executive Engineer, Sri. Ravi Naik, A.E., and Sri Noor Ahmed, J.E. Notices were issued and the matter is under investigation for further disciplinary action. Gulbarga-Jevergi - on 17.02.2003 Sri. Erayya, Junior engineer, Zilla Panchayat, Jevargi was suspended for not handing over charge in the store. Aland - On 03.06.2003, R.N. Channabasappa, Junior Engineer Zilla Panchayat, Aland was suspended for Mis-using of food grains. Kolar District - one case. On 07.04.2003 while inspecting the works at Bangarpet, Mis-use of 341 quintals or rice under S.G.R.Y. Special component detected and

disciplinary action is being initiated against the Executive Officer, Taluka Panchayat, Bangarpet for dereliction of duty ಹೀಗೆ ಏಳು ಜಿಲ್ಲೆಗಳಲ್ಲಿ ಸುಮಾರು ಹೆಚ್ಚು ಕಡಿಮೆ ಒಂಬತ್ತು ಕೇಸುಗಳನ್ನು ಯಾವುದು ಇಲ್ಲಿ ರಿಜಿಸ್ಟರ್ ಆಗಿದೆ, ಇದು ಬಿಟ್ಟು ಪೊಲೀಸರು ಸುಮಾರು 23 ಕೇಸನ್ನು ರಿಜಿಸ್ಟರ್ ಮಾಡಿರುವಂತಥದ್ದು ಎಲ್ಲಾ ಸೇರಿದರೆ 30 ಕೇಸ್ ಇದೆ. ಇದನ್ನು ಸರ್ಕಾರ ಮುಚ್ಚುಮರೆ ಮಾಡಿಲ್ಲ. ಯಾರಿಗೂ ಕೂಡ ಶೀಲ್ಡ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಯಾರ ಬಗ್ಗೆ ಕೂಡ ನಾವು ಅನುಕಂಪ ತೋರಿಸತಕ್ಕಂಥ ಅವಶ್ಯಕತೆ ಇಲ್ಲ ಈ ಸಕಾರಕ್ಕೆ ಯಾರು ತಪ್ಪು ಮಾಡಿದ್ದಾರೆ, ಅವರಿಗೆ ಶಿಕ್ಷೆ ಕೊಟ್ಟಿದ್ದೇವೆ, ಸಸ್ಪೆಂಡ್ ಮಾಡಿದ್ದೇವೆ ಮುಂದೆ ಇನ್‌ವೆಸ್ಟಿಗೇಷನ್‌ಲ್ಲಿ ಪ್ರೂಪ್ ಆದರೆ ಡಿಸ್‌ಮಿಸ್ ಕೂಡ ಮಾಡುತ್ತೇವೆ. ಇಷ್ಟೊಂದು ನಮ್ಮಲ್ಲಿ ಮಾಹಿತಿ ಇದ್ದು, ಇದರ ಬಗ್ಗೆ ನಾವು ಕೊಟ್ಟರೂ ಕೂಡ ಪದೇ ಪದೇ ಸರ್ಕಾರದ ಮೇಲೆ ಪುಢಾರಿಗಳು, ಲೀಡರ್‌ಗಳು ಯಾವ ಹೆಸರು ಹೇಳಬೇಕೋ ಎಲ್ಲಾದ್ದು ಕೂಡ ಹೇಳಿಕೊಂಡು ಈ ಒಂದು ಸರ್ಕಾರಕ್ಕೆ ಕೆಟ್ಟ ಹೆಸರು ಬರಲಿ ಅವರ ಮೇಲೆ ಅಪಪ್ರಚಾರ ಮಾಡಬೇಕು ಎಂಬ ಉದ್ದೇಶದಿಂದ ಮಾಡಿದ್ದಾರೆ ಏಕೆಂದರೆ ಚುನವಣೆಗಳು ಬರುತ್ತಿವೆಯಲ್ಲ, ಒಂದು ವರ್ಷದಲ್ಲಿ ಚುನಾವಣೆ ನಡೆಯುತ್ತಿದೆ ಎಂದು ಈಗಿನಿಂದೀಗಲೇ ಇದಕ್ಕೆ ಪೀಠಿಕೆ ಹಾಕಬೇಕೆಂದು ಬೇರೆ ಯಾವುದೇ ವಿಷಯ ಇಲ್ಲ; ಆದ್ದರಿಂದ ಬರೀ ಅದೇ ತೆಗೆದುಕೊಳ್ಳುವುದು. ಇದರ ಬಗ್ಗೆ ಹೇಳುತ್ತಿರುವುದು. ಈಗ ತಾವು ನೋಡಿ ಅಧ್ಯಕ್ಷರೆ ತಮ್ಮ ಮುಂದೆ ಇಟ್ಟಿದ್ದೇನೆ, ಎಷ್ಟು ಕೆಲಸಗಳು ಆಗಿವೆ? ಎಷ್ಟು ಕಂಪ್ಲೀಟ್ ಆಗಿದೆ ಎಂದು 1 ಲಕ್ಷ 31 ಸಾವಿರ ಕೆಲಸದಲ್ಲಿ 30 ಕೇಸುಗಳು ಇವತ್ತಿನ ದಿವಸ ಸಿಕ್ಕರೆ ಅದು ಎಷ್ಟು ಪರ್ಸೆಂಟ್ ಆಗಬಹುದು ಎಂದು ನೀವೇ ಲೆಕ್ಕ ಮಾಡಿ ನೋಡಿ. ಅದಕ್ಕಾಗಿ ನಾನು ಹೇಳಿದೆ ಇಂತಹ ಬೃಹತ್ ಗಾತ್ರದಲ್ಲಿ ಅಥವಾ ಹೆಚ್ಚಿನ ರೀತಿಯಲ್ಲಿ ಕೆಲಸ ನಡೆದಾಗ ನಮ್ಮೆಲ್ಲರ ಜವಾಬ್ದಾರಿ ಇದೆ. ತಪ್ಪಾದಲ್ಲಿ ನಾವು ತಕ್ಷಣ ಸರ್ಕಾರದ ನೋಟೀಸ್‌ಗೆ ತರಬೇಕು. ನಾವು ಕ್ರಮ ಜರುಗಿಸಿದ್ದೇವೆಯೇ ಇಲ್ಲವೇ ಎಂದು ನೋಡಬೇಕು. ಮತ್ತು ಅಲ್ಲಿ ಅನೇಕ ಶಾಸಕರನ್ನೂ ಕೂಡ ತಾಲ್ಲೂಕು ಮಟ್ಟದಲ್ಲಿ ರಿಲೀಫ್ ಕಮಿಟಿ ಅಧ್ಯಕ್ಷರಾಗಿದ್ದ ಕಾರಣ ಅವರು ಅಪ್ರೂವ್ ಮಾಡಿದ ಕೆಲಸವನ್ನು ನಡೆಯುತ್ತಿದೆಯೇ ಇಲ್ಲವೇ ಎಂದು ನೋಡತಕ್ಕಂಥಾದ್ದು ಬಹಳ ಮುಖ್ಯ ಎನ್ನುವಂತಹ ಮಾತನ್ನೂ ಕೂಡ ಈ ಸಂದರ್ಭದಲ್ಲಿ ನಾನು ಒತ್ತಿ ಹೇಳುತ್ತೇನೆ. ಅಲ್ಲದೆ ಇನ್ನೂ ಕೆಲವು ಕಡೆ ಏನಾಗಿದೆ ಎಂದರೆ ಟ್ರಾನ್ಸ್‌ಪೋಟೇಷನ್ ಮಾಡುವಾಗ ಹಂಚುವುದಕ್ಕೆ ಹೋದಾಗ ಕೂಡ ಹಿಡಿದಿದ್ದೇವೆ. 30 ಕೇಸನಲ್ಲಿ ವರ್ಕ್‌ಸ್ಪಾಟ್‌ಗೆ ತೆಗೆದುಕೊಂಡು ಹೋಗುವಾಗ ಕೆಲವು ಜನ ಲೀಡರ್ಸ್ ಗಲಾಟೆ ಮಾಡಿ ಒಬ್ಬೊಬ್ಬರಿಗೂ ಇದು ಮಾರುಕಟ್ಟೆಗೆ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದು, ಅದಕ್ಕೆ ಇಲ್ಲ ಇದು ವರ್ಕ್‌ಸ್ಪಾಟ್‌ಗೆ ಹಂಚಲಿಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆ ಎಂದು ಇನ್ನೊಬ್ಬರು ಈ ರೀತಿಯಾಗಿ ಕೆಲವು ಡೆಪ್ಯೂಟಿ ಕಮೀಷನರ್‌ರವರಿಂದ ಕೂಡ ಮಾಹಿತಿ ಇದೆ. ಅದನ್ನು ಬೇಕಾದರೆ ನಾನು ಒದಗಿಸಿಕೊಡುತ್ತೇನೆ. ನಾನು ಹೇಳುವಂತಹ ತಾತ್ಪರ್ಯ ಇಷ್ಟೆ, ನಮ್ಮ ಪೂಜಾರಿಯವರು ಇಲ್ಲಿ ಇದ್ದಾರೆ, ಅವರ ಕ್ಷೇತ್ರದಲ್ಲಿ ಕೂಡ ಕೆಲವು ಜನ ಬಂದು ನಮಗೆ ರೆಪ್ರಸೆಂಟೇಷನ್ ಕೊಡುತ್ತಿದ್ದರೆ, ಏನೆಂದರೆ ನಮ್ಮ ಮನೆಗೆ 2–3 ಜನ ಹೋಗಿ ಕೂಲಿ ಮಾಡಿದ್ದೇವೆ, ನಮಗೆ ದಿನ ಐದು ಕೆ.ಜಿ. ಅಕ್ಕಿ ಕೊಡುತ್ತಿದ್ದರು, ಮೂರು ಜನ ಎಂದರೆ 15 ಕೆ.ಜಿ ಕೊಡಬೇಕು. ಕೆರೆ ಕೆಲಸ ಮಾಡುವಾಗ ಸ್ವಲ್ಪ ಉಳಿಸಿಕೊಂಡಿದ್ದ ಕಾರಣ ಉಪ್ಪು ಖಾರ ತೆಗೆದುಕೊಳ್ಳಬೇಕೆಂದು ಎಂದರೆ ಇದ್ದುದ್ದರಲ್ಲಿ ನಾವು ಕೊಡಬೇಕು. ಇದಕ್ಕೆ ನಿಮ್ಮವರು

ಪೊಲೀಸ್‌ನವರನ್ನು ಹಿಡಿದು ಕೇಸ್ ನಮ್ಮ ಮೇಲೆ ಹಾಕುವುದಕ್ಕೆ ಬಂದಿದ್ದರು ಎಂದು ಅದು ಬಹುಶಃ ಅವರ ನೋಟೀಸ್‌ಗೆ ಕೂಡ ಬಂದಿರಬಹುದು. ಇದು ಬಾಗಲಕೋಟೆ ಹೂಳು ತೆಗೆಯತಕ್ಕಂಥ ವಿಚಾರ ಇದನ್ನು ನಾನು ಏಕೆ ಹೇಳುತ್ತೇನೆ ಎಂದರೆ ನಾನು ಅಲ್ಲಿ ಹೋದಾಗ ತಾವೂ ಕೂಡ ಇದ್ದಿರಿ. ಇಂತಹ ಕೇಸಸ್ ಇರಬಹುದು, ಅದಕ್ಕೆ ಇವೆಲ್ಲವೂ ಸೇರಿ 30 ಕಂಪ್ಲೇಂಟ್ ಇದೆ. ಅದಕ್ಕೆ ನಾವು ಇದನ್ನು ದೊಡ್ಡದಾಗಿ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಲಕ್ಷಾಂತರ ಕೆಲಸಗಳು ನಡೆದಿವೆ, ಪ್ರತಿ ಪಂಚಾಯತ್‌ನಲ್ಲಿ, ಪ್ರತಿ ಹಳ್ಳಿಗಳಲ್ಲಿ ಜನರಿಗೆ ಇದರಿಂದ ಅನುಕೂಲವಾಗುತ್ತಿದೆ. ನೀವು ಒಳ್ಳೆಯದನ್ನು ನೋಡಬೇಕೇ ಹೊರತು ಸಣ್ಣಪುಟ್ಟ ಲೋಪದೋಷಗಳು ಎಲ್ಲೋ ಆದರೆ ಅದನ್ನು ದೊಡ್ಡದಾಗಿ ಮಾಡಿ ಅದರ ಬಗ್ಗೆ ಪ್ರಚಾರ ಕೊಟ್ಟು ನಾವು ಮಾಡಿದಂತಹ ಒಳ್ಳೆಯ ಕೆಲಸಕ್ಕೆ ಮಸಿ ಬಳಿಯುವಂತಹ ಕೆಲಸ ಯಾರೂ ಕೂಡ ಮಾಡಬಾರದೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇದಾದ ಮೇಲೆ ಈ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೆ ನಾವು ಏನೇನು ಕಾರ್ಯಕ್ರಮವನ್ನು ಇವತ್ತು ಹಾಕಿಕೊಂಡಿದ್ದೇವೆ ಅಥವಾ ಯಾವರೀತಿಯಾಗಿ ನಿರ್ವಹಣೆ ಕೆಲಸ ಇವತ್ತು ನಡೆದಿದೆ, ಈಗಾಗಲೇ ಡಿಸ್ಟ್ರಿಕ್ಟ್ ಅವೆಲ್‌ನಲ್ಲಿ ರಾಜ್ಯಮಟ್ಟದಲ್ಲಿ ಅಂತೂ ಸಬ್ ಕಮಿಟಿ ಇದೆ. ಅದೂ ಅಲ್ಲದೆ ಜಿಲ್ಲಾಮಟ್ಟದಲ್ಲಿ ಡಿಸ್ಟ್ರಿಕ್ಟ್ ಇನ್‌ಚಾರ್ಜ್ ಮಿನಿಸ್ಟರ್ ಕೂಡ ಈ ಕೆಲಸವನ್ನು ನೋಡುತ್ತಿದ್ದಾರೆ. ನಂತರ ಪ್ರಿನ್ಸಿಪಲ್ ಸ್ಕ್ರೆಟರಿ ಪ್ರತಿಯೊಂದು ಜಿಲ್ಲೆಗೆ ನಾವು ನೇಮಿಸಿದ್ದೇವೆ. ಅವರೂ ಕೂಡ ಈ ಡಿಸ್ಟ್ರಿಕ್ಟ್‌ನಲ್ಲಿ ಡೆವಲಪ್‌ಮೆಂಟ್ ಬಗ್ಗೆ ಬರಗಾಲದ ಕಾಮಗಾರಿಗಳ ಬಗ್ಗೆ ರಿವ್ಯೂ ಮಾಡುತ್ತಾರೆ.

ನೋಡಲ್ ಆಫೀಸರ್ಸ್ ಎಂದು ಜಿಲ್ಲಾಮಟ್ಟದಿಂದ ಪ್ರತಿಯೊಂದು ತಾಲ್ಲೂಕುಗಳಿಗೆ ನಾಮಿನೇಟ್ ಮಾಡಿ ಅವರೂ ಕೂಡ ರಿಲೀಫ್ ವರ್ಕ್ ಅನ್ನು ನೋಡಬೇಕೆಂದು ಮಾಡಿದ್ದೇವೆ. ನಾಲ್ಕನೆಯ ಹಂತದಲ್ಲಿ ತಾಲ್ಲೂಕಿನಲ್ಲೂ ಕೂಡ ನಮ್ಮ ಶಾಸಕರು ಅಧ್ಯಕ್ಷರಿರುವುದರಿಂದ ಬಹುಶಃ ಕೆಡಿಪಿ ಮಿಟಿಂಗ್‌ನಲ್ಲಿ ಆಗಲಿ ಅಥವಾ ಅವರೇ ರಿಲೀಫ್ ವರ್ಕ್ ನೋಡುವಾಗ ರಿವ್ಯೂ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆನೆ. ಈಗ ನಾಲ್ಕು ಹಂತದಲ್ಲಿ ರಿಲೀಫ್ ಕೆಲಸವನ್ನು ಸೂಪರ್‌ವೈಸ್ ಮಾಡುವುದು, ನೋಡಿಕೊಳ್ಳುವುದು, ಉಸ್ತುವಾರಿ ಮಾಡುವುದು, ಸಲಹೆ ಕೊಡುವುದು, ಸಹಾಯ ಮಾಡುವುದು ಇತ್ಯಾದಿಗಳನ್ನೆಲ್ಲಾ ಮಾಡಿದ ಮೇಲೆ ಮಿಸ್‌ಯೂಸ್ ಆಗುವುದಕ್ಕೆ ಸಾಧ್ಯವಿಲ್ಲ, ಸಣ್ಣಪುಟ್ಟ ದೋಷಗಳೇನಾದರೂ ಆಗಿದ್ದರೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ಸರ್ಕಾರ ತಕ್ಷಣವೇ ಮಾಡಿದೆ ಏತಕ್ಕೆ ಹೇಳುತ್ತಿದ್ದೇನೆ. ಇಷ್ಟೊಂದು ಅಬಂಡಂಟ್, ಕೇರ್ ಅಂಡ್ ಪ್ರಿಕಾಷನ್ಸ್ ಇವತ್ತಿನದಿವಸ ನಮ್ಮ ಸರ್ಕಾರ ತೆಗೆದುಕೊಂಡಿದೆ. ಸುಮಾರು 27 ಕಾರ್ಯದರ್ಶಿಗಳನ್ನು ಪ್ರತಿ ಜಿಲ್ಲೆಗಳ ಈ ಕೆಲಸಗಳ ಸೂಪರ್‌ವೈಸ್ ಮಾಡಲು ನೇಮಕ ಮಾಡಿದ್ದೇವೆ. ಇದರ ಜೊತೆಗೆ ಸ್ಪೆಷಲ್ ಮೆಷರ್ಸ್ ನಾವೇನು ತೆಗೆದುಕೊಂಡಿದ್ದೇವೆಂದರೆ, ಒಂದು ಹೇಳಿದಂತೆ ಎಂಪವರ್ಡ್ ಕ್ಯಾಬಿನೆಟ್ ಸಬ್ ಕಮಿಟಿ ಟು ಮ್ಯಾನೇಜ್ ಡ್ರಾಟ್, ಆಮೇಲೆ ಈಗಾಗಲೇ ನಾವು ಎರಡು ಮನವಿಯನ್ನು ಕೊಟ್ಟಿದ್ದೇವೆ ನಮಗೆಷ್ಟು ಹಣ ಬರಬೇಕಾಗಿತ್ತು ಅದು ಬಂದಿಲ್ಲ. ಕೊನೆಗೆ ಮೂರನೆಯ ಮನವಿಯನ್ನು ತಮ್ಮೆಲ್ಲಾ ಸಹಾಯ ಹಾಗೂ ಸಹಕಾರದೊಡನೆ ಕೊಡುತ್ತಿದ್ದೇವೆ, ಅದರಲ್ಲಿ ನಿಮ್ಮೆಲ್ಲಾ ಸಲಹೆಗಳನ್ನು ಅಳವಡಿಸಿಕೊಂಡು ಮತ್ತೆ ನಮ್ಮ ಅವಶ್ಯಕತೆಯನ್ನು ನೋಡಿಕೊಂಡು, ಮಳೆ ಹಾಗೂ ಬೆಳೆ ಈ ಸೀಸನಲ್ ಕಂಡಿಷನ್ಸ್ ಎಲ್ಲಾ ನೋಡಿಕೊಂಡು ಯಾವ್ಯಾವ ಭಾಗದಲ್ಲಿ ತಾಲ್ಲೂಕುಗಳಲ್ಲಿ ಕೆಲಸದ ಅವಶ್ಯಕತೆ ಇದೆ, ಮೇವಿನ ಅವಶ್ಯಕತೆ ಇದೆ, ಕುಡಿಯುವ ನೀರಿನ ಅವಶ್ಯಕತೆ ಇದೆ ಅದಕ್ಕೆ ಅನುಗುಣವಾಗಿ

ನಾವು ಇನ್ನೊಂದು ಮನವಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ. ರೆಮಿಷನ್ ಆಫ್ ಲ್ಯಾಂಡ್ ರೆವಿನ್ಯೂ ಬಗ್ಗೆ ಈಗಾಗಲೇ ಹೇಳಿದ್ದೇನೆ, ಇದು ಮೂರನೆಯದು ಕ್ರಾಫ್ ಲೋನ್ ಇಂಟರೆಸ್ಟ್ ಟು ದಿ ಟ್ಯೂನ್ ಆಫ್ 120 ಕ್ರೋರ್ಸ್, ನಾವು ಇದನ್ನು ಒಪ್ಪಕೊಂಡಿದ್ದೇವೆ, ಇದು ನಾಲ್ಕನೆಯ ಕ್ರಮ. ಕೆಪಿಟಿಸಿಎಲ್‌ಗೂ ಕೂಡ ನಾವು ವಿಶೇಷವಾದ ಧನಸಹಾಯವನ್ನು ಕೊಟ್ಟು ಕುಡಿಯುವ ನೀರಿಗಾಗಿ ಅವರೇನು ಹಣವನ್ನು ಖರ್ಚು ಮಾಡಿದ್ದರು, ಅದಕ್ಕೆ ಇಲ್ಲಿಯವರೆಗೆ ಸುಮಾರು 17 ಕೋಟಿ ರೂ. ಕೊಟ್ಟಿದ್ದೇವೆ. ಸೇಲ್ಸ್ ಟ್ಯಾಕ್ಸ್ ಎಕ್ಸೆಂಪ್ಷನ್ ಅನ್ನು ಈ ಕ್ಯಾಟಲ್ ಫೀಡ್ ಕಾರ್ಖಾನೆಗಳೇನಿವೆ ಅಥವಾ ಕ್ಯಾಟಲ್ ಫೀಡ್ ತಯಾರು ಮಾಡುವುದಕ್ಕೆ ಕೊಟ್ಟಿದ್ದೇವೆ. ಇದನ್ನು ಚೀಪ್ ರೇಟ್‌ನಲ್ಲಿ ರೈತರಿಗೆ ಅದು ಸಗಲೆನ್ನುವ ಉದ್ದೇಶದಿಂದಲೇ ಎಂಟು ದಿವಸಗಳ ಹಿಂದೆಯೇ ಮಾನ್ಯ ಮುಖ್ಯಮಂತ್ರಿಗಳು ಮಾರಾಟ ತೆರಿಗೆ ವಿನಾಯಿತಿಯನ್ನು ಕೊಟ್ಟಿದ್ದಾರೆ ಇದರಿಂದ ರೈತರಿಗೆ ಸಾಕಷ್ಟು ಅನುಕೂಲ ಆಗುತ್ತದೆ. ನಮ್ಮ ಏಳನೆಯ ಕಾರ್ಯಕ್ರಮವೆಂದರೆ ತೆಗೆದುಕೊಂಡ ಸ್ಟೆಪ್ಸ್ ಅಂದರೆ ಈ ಗ್ರಾಂಡ್ ವಾಟರ್ ಮತ್ತು ಪೂರ್ ಇನ್‌ಫ್ಲೂಸ್ ಅನ್ನು ನೋಡಿ ಈಗ ಇರುವ ಕೆರೆಗಳನ್ನು ಸಧ್ಯಕ್ಕೆ ತೂಬನ್ನು ಮುಚ್ಚಿ ನೀರನ್ನು ಸಂಗ್ರಹಿಸುವುದು ಮತ್ತು ಅಂತರ್‌ಜಲವನ್ನು ಹೆಚ್ಚಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳುವುದರ ಬಗ್ಗೆ ನಾವೊಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ, ಸಚಿವಸಂಪುಟದ ಮುಂದೆ ಇದರ ಬಗ್ಗೆಯೂ ಕೂಡ ಆದಷ್ಟು ಬೇಗ ಆ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಈ ಮಧ್ಯೆ ಮಾನ್ಯ ಮುಖ್ಯ ಎಲ್ಲರಿಗೂ ಅಪೀಲ್ ಮಾಡಿದ್ದಾರೆ. ಪ್ರತಿಯೊಂದು ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾಪಂಚಾಯಿತಿಗಳು ಆದಷ್ಟು ನೀರಿನ ಬಳಕೆಯನ್ನು ಎಕಾನಮಿಕ್ ಆಗಿ ಮಾಡಬೇಕು, ಮತ್ತು ಹೆವಿ ಕ್ರಾಪ್ಸ್ ಏನಿವೆ ಉದಾಹರಣೆಗಾಗಿ ಪ್ಯಾಡಿ ಇರಬಹುದು, ಶುಗರ್ ಕೇನ್ ಇರಬಹುದು ಇಂತಹ ಬೆಳೆಗಳನ್ನು ಬೆಳೆಯುವುದನ್ನು ಸ್ವಲ್ಪ ಮಟ್ಟಿಗೆ ನಿಲ್ಲಿಸಬೇಕು ಎಂದು ಹೇಳಿದ್ದಾರೆ, ನಾವೂ ಕೂಡ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಹೇಳಿದ್ದೇವೆ, ಏಕೆಂದರೆ ಮುಂದೆ ಬರುವ ದಿವಸಗಳಲ್ಲಿ ಪುನಃ ಇಂತಹದೇ ಪರಿಸ್ಥಿತಿಯನ್ನು ಅನುಭವಿಸಬಾರದು. ನೀರಿನ ಸಂಗ್ರಹಣೆ ಹೆಚ್ಚಾಗಲಿ ಎನ್ನುವ ದೃಷ್ಟಿಯಿಂದ ಆದಷ್ಟು ನಮ್ಮ ಪ್ರಯತ್ನಗಳು ನಡೆದಿವೆ, ಈ ನಿಟ್ಟಿನಲ್ಲಿ ತಮ್ಮೆಲ್ಲಾ ಸಹಕಾರ ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಲ್ಲದೆ ಕೇಂದ್ರ ಸರ್ಕಾರದಿಂದ ಏನು 55,000 ಮೆಟ್ರಿಕ್ ಟನ್ ಆಹಾರಧಾನ್ಯ ಬಂದಿದೆ ಅದನ್ನು ಮಾತ್ರ ನಾವು ಈಗಾಗಲೇ ಹಂಚಿದ್ದೇವೆ ಹಾಗೂ ನಾನು ಈಗಾಗಲೇ ಹೇಳಿದಂತೆ ನಮ್ಮ 31,000 ಕೆಲಸಗಳನ್ನು ಪೂರೈಸಬೇಕಾದರೆ ಇನ್ನೂ 1,89,000 ಮೆಟ್ರಿಕ್ ಟನ್ ಒಟ್ಟು 2 ಲಕ್ಷ ಮೆಟ್ರಿಕ್ ಟನ್ ಆಹಾರಧಾನ್ಯ ಬೇಕು ಅದಕ್ಕೆ ನಾವು ಕೇಳಿದ 3 ಲಕ್ಷ ಮೆಟ್ರಿಕ್ ಟನ್ ಆಹಾರಧಾನ್ಯಗಳನ್ನು ಕೂಡಲೇ ಬಿಡಗಡೆ ಮಾಡಿದರೆ ನಮಗೆ ದೊಡ್ಡ ಸಹಾಯ, ಸಹಕಾರ ನೀಡಿದಂತಾಗುತ್ತದೆ. ಅದಕ್ಕಗಿ ಕೇಂದ್ರ ಸರ್ಕಾರ 3 ಲಕ್ಷ ಟನ್ ಆಹಾರಧಾನ್ಯವನ್ನು ಕೂಡಲೇ ಬಿಡುಗಡೆ ಮಾಡಬೆಕೆಂದು ನಾವು ಕೇಳಿಕೊಂಡಿದ್ದೇವೆ, ಅವರು ಮಾಡಬೇಕು, ಅದಕ್ಕೆ ತಮ್ಮೆಲ್ಲರ ಪ್ರಯತ್ನ ಇರಬೇಕು. ಪುನಃ ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ. ಈ ಪ್ರೈಮರಿ ಫೋಕಸ್ ಏನೆಂದರೆ ಎಂಪ್ಲಾಯಿಮೆಂಟ್ ಜನರೇಷನ್, ಫುಡ್‌ಗ್ರೇನ್ಸ್ ಬಂದರೆ ನಮ್ಮಲ್ಲಿರತಕ್ಕಂಥ ಕ್ಯಶ್ ಪೋರ್ಷನ್ ಮತ್ತು ಆ ಫುಡ್ ಗ್ರೇನ್ಸ್ ಎರಡೂ ಕೂಡ ಉಪಯೋಗವಾಗುತ್ತದೆ. ಇದಲ್ಲದೆ ಆರ್‌ಡಿಪಿಎಆರ್ ಮಿನಿಸ್ಟರ್ ಕೂಡ ಅವರಲ್ಲಿ ಅನೇಕ ಯೋಜನೆಗಳಿವೆ ಅದನ್ನು ನೀವು ಯಾವರೀತಿಯಾಗಿ ಲೇಬರ್ ಓರಿಯೆಂಟೆಡ್ ಯೋಜನೆಗಳಿಗೆ ಬಳಸಿಕೊಳ್ಳಬಹುದು ಎನ್ನುವುದನ್ನು ಅವರು ಸ್ಪಷ್ಟವಾಗಿ ಹೇಳುತ್ತಾರೆ; ದಯವಿಟ್ಟು

ಅದನ್ನೂ ಕೂಡ ಕೇಳಬೇಕು, ಇಷ್ಟೆಲ್ಲಾ ಪ್ರಯತ್ನಗಳು ನಡೆದಿವೆ. ಇದಲ್ಲದೆ ಬಿಸಿ ಊಟದ ಬಗ್ಗೆ ಬಹಳ ಮಾತನಾಡುತ್ತಾರೆ, ಬಿಸಿ ಊಟದ ಯೋಜನೆಗೂ ಈ ಬರಗಾಲಕ್ಕೂ ಯಾವ ರೀತಿಯ ಸಂಬಂಧವಿದೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ಈ ಬಿಸಿ ಊಟದ ವಿಚಾರದಲ್ಲಿ ಕೆಲವು ಸಲಹೆಗಳನ್ನು ನಾವು ಸರ್ಕಾರಕ್ಕೆ ಕೊಡಬೇಕೆಂದು ಇದ್ದೇವೆ, ಅದಕ್ಕೆ ರೂಲ್ 69 ರಲ್ಲಿ ಚರ್ಚೆಗೆ ಅವಕಾಶ ಕೇಳಿದ್ದೇವೆ, ಆ ಸಂದರ್ಭದಲ್ಲಿ ಈ ವಿಚಾರದ ಬಗ್ಗೆ ಇವರು ಉತ್ತರವನ್ನು ಕೊಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅದರ ಬಗ್ಗೆ ನಾವು ಹೇಳುವುದಿಲ್ಲ, ಇಂತಹ ಬರಗಾಲದ ಪರಿಸ್ಥಿತಿಯಲ್ಲಿ ಜನರು ಅನ್ನಕ್ಕಾಗಿ ಮರುಗುವಾಗ, ಸರ್ಕಾರ ಬಿಸಿ ಊಟದ ಯೋಜನೆಯನ್ನು ದೊಡ್ಡ ಪ್ರಮಾಣದಲ್ಲಿ ಹಿಂದೆ ಇದು ಕೇವಲ ಏಳು ಜಿಲ್ಲೆಗಳಲ್ಲಿ ಮಾತ್ರವಿತ್ತು, ಅದನ್ನು ಉಳಿದ 20 ಜಿಲ್ಲೆಗಳಿಗೂ ಕೂಡ ವಿಸ್ತರಿಸಿ ಹೆಚ್ಚುಕಡಿಮೆ 50 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡಬೇಕೆಂದರೆ, ಇಂತಹ ಬರಗಾಲ ಪರಿಸ್ಥಿತಿಯಲ್ಲಿ ಸಹಾಯವಾಗುವುದಿಲ್ಲವೇ?

ಶ್ರೀ ಆರಗಜ್ಞಾನೇಂದ್ರ :- ಅದು ಯಾರ ಕಾರ್ಯಕ್ರಮವೆನ್ನುವುದನ್ನು ಹೇಳಿ ಸ್ವಾಮಿ ಕೇಂದ್ರ ಸರ್ಕಾರದ್ದು ಏನೇನು ಇದೆ ಎನ್ನುವುದನ್ನು ಹೇಳಿ ಇದ್ದಕ್ಕಿದ್ದಂತೆ ರಾಜ್ಯ ಸರ್ಕಾರ ಬೋರ್ಡ್ ಹಾಕಿಕೊಂಡು ಬಿಟ್ಟರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತದನಂತರ ಫಾಡರ್ ಬಗ್ಗೆ, ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಸಬ್ಸಿಡೈಸ್ ಸೀಡ್ಸ್ ಕೊಡುವುದರ ಬಗ್ಗೆ, ಉದ್ಯೋಗ ಕೊಡುವುದರ ಬಗ್ಗೆ, ಲೇಬರ್ ಓರಿಯಂಟೆಡ್ ಕೆಲಸಗಳನ್ನು ತೆಗೆದುಕೊಳ್ಳುವುದರ ಬಗ್ಗೆ, ಹೆಲ್ತ್ ಆಗಬಹುದು, ಅನಿಮಲ್ ಬಗ್ಗೆ ಆಗಬಹುದು ಮೆನ್ ಆಗಬಹುದು ಅದರ ಬಗ್ಗೆಯೂ ಕೂಡ ನಾವೇನು ಹೆಚ್ಚಿನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಆ ಎಲ್ಲಾ ಕೆಲಸಗಳನ್ನು ಕೂಡ ಇವತ್ತು ರಾಜ್ಯ ಸರ್ಕಾರ ಆದ್ಯತೆಯ ಮೇಲೆ ಮಾಡಿದೆ ಹೀಗೆ ಒಂದಲ್ಲ ಇವತ್ತು ನೂರಾರು ಕೆಲಸಗಳನ್ನು ನಾವು ಕೈಗೆತ್ತಿಕೊಂಡು ಜನರಿಗೆ ಸಹಾಯ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ ಮತ್ತು 159 ತಾಲ್ಲೂಕುಗಳಲ್ಲಿ ಜನರೇನು ಬರಗಾಲದ ಪರಿಸ್ಥಿತಿಗೆ ತುತ್ತಾಗಿದ್ದಾರೆ, ಅಂತಹವರ ನೆರವಿಗೆ ಸರ್ಕಾರ ಮುಂದೆ ಬಂದಿದೆ.

1.10 ಪಿ.ಎಂ.

ಬಜೆಟ್‌ನಲ್ಲಿರತಕ್ಕಂಥ ಕೆಲವು ಕೆಲಸಗಳಿಗೆ ನಾವು ಹಣವನ್ನು ಕಡಿಮೆ ಇಟ್ಟರೂ ಕೂಡ, ಈ ಕೆಲಸಗಳಿಗೆ ನಾವು ಹಣವನ್ನು ಕಡಿಮೆ ಮಾಡಿಲ್ಲ. ಸಾಕಷ್ಟು ಹಣವನ್ನು ಕೊಡತಕ್ಕಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. ನಮ್ಮ ಈ ಪ್ರಯತ್ನ ಮುಂದುವರೆಯುತ್ತದೆ. ಯಾವ ಜನ ತೊಂದರೆಯಲ್ಲಿದ್ದಾರೆ, ಅವರಿಗೆ ಸಹಾಯ ಮಾಡತಕ್ಕಂಥಾದ್ದೇ ನಮ್ಮ ಕರ್ತವ್ಯ. ಈ ಸರ್ಕಾರ ಎಂದೂ ಕೂಡ ಅದರಲ್ಲಿ ಹಿಂಜರಿಯುವುದಿಲ್ಲ. ಸಾಮಾನ್ಯ ಜನರಿಗೆ, ರೈತರಿಗೆ, ಕಷ್ಟದಲ್ಲಿರತಕ್ಕಂಥ ಎಲ್ಲರಿಗೂ ಕೂಡ ನೆರವಾಗತಕ್ಕಂಥಾದ್ದೇ ನಮ್ಮ ಮುಖ್ಯ ಉದ್ದೇಶ ನಮ್ಮ ಗುರಿ. ಆ ದಿಕ್ಕಿನಲ್ಲಿ ನಾವು ಹೋಗುತ್ತಿದ್ದೇವೆ. ಅದಕ್ಕಾಗಿಯೇ ನಾವು ಕೇಂದ್ರ ಸರ್ಕಾರವನ್ನು ಕೇಳಿಕೊಂಡದ್ದು. ನಾವು ಪದೇ ಪದೇ ಕೇಂದ್ರ ಸರ್ಕಾರದವರ ಮೇಲೆ ಗೂಬೆ ಕೂರಿಸಬೇಕು, ಅವರ ವಿರುದ್ಧವಾಗಿ ಹೇಳಬೇಕು ಎನ್ನತಕ್ಕಂಥಾದ್ದು ಅಲ್ಲ. ನಾವು ಅವರಿಗೆ ಕೇಳಿಕೊಂಡಿದ್ದು ಏನೆಂದರೆ, ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ, ನಾವೂ ಬರ ಪರಿಸ್ಥಿತಿಯಲ್ಲಿದ್ದೇವೆ. ಬೇರೆಯವರಿಗೆ ಹೋಲಿಸಿದರೆ ನಾವು ಇವತ್ತಿಗೂ ಕೂಡ ತೊಂದರೆಯಲ್ಲಿದ್ದೇವೆ.

ಆದರೆ ಒಂದು ಕಡೆ 46 ಲಕ್ಷ ಮೆಟ್ರಿಕ್ ಟನ್, ಇನ್ನೊಂದು ಕಡೆ 12 ಲಕ್ಷ ಮೆಟ್ರಿಕ್ ಟನ್, ಮತ್ತೊಂದು ಕಡೆ 11 ಲಕ್ಷ ಮೆಟ್ರಿಕ್ ಟನ್ ಕೊಟ್ಟಿದ್ದಾರೆ. ಯಾರು ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಡದಿದ್ದರೂ ಕೂಡ ಅವರಿಗೆ ಆಹಾರ ಧಾನ್ಯಗಳನ್ನು ಕೊಡತಕ್ಕಂಥಾದ್ದು ಆಗಿದೆ. ನಾವು ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಟ್ಟು, ಶೇಕಡ 94–95ರಷ್ಟು ಯುಟಿಲೈಸೇಷನ್ ಮಾಡಿದ್ದೇವೆ ಎಂದು ಹೇಳಿದರೂ ಕೂಡ ನಮಗೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಆಹಾರಧಾನ್ಯವನ್ನು ಕೂಡ ತಕ್ಕಂಥಾದ್ದನ್ನು ಮಾಡಿದ್ದಾರೆ. ಇದು ತಾರತಮ್ಯ ಎನ್ನುವಂಥ ಮಾತನ್ನು ನಾವು ಹೇಳಿದ್ದು ನಿಜ. ಇದನ್ನು ತಾವೂ ಕೂಡ ಹೇಳಬೇಕು, ಯಾವುದು ತಾರತಮ್ಯವಾಗಿದೆ ಅದನ್ನು ತಾರತಮ್ಯ ಮಡಿದ್ದಾರೆ ಎಂದು ಹೇಳಬೇಕು. ನಮಗೆ ಎಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಅಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಹೇಳಬೇಕು. ನಾವೂ ಕೂಡ ಖಂಡಿತವಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಹೇಳುತ್ತೇವೆ. ಅನೇಕ ಸಾರಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಶಹಬಾಸ್‌ಗಿರಿ ಕೊಟ್ಟಿದ್ದಾರೆ, ಧನ್ಯವಾದಗಳನ್ನು ಹೇಳಿದ್ದಾರೆ, ಕಂಗ್ರಾಜುಲೇಟ್ ಮಾಡಿದ್ದಾರೆ, ಕೆಲವು ಯೋಜನೆಗಳ ಬಗ್ಗೆ ಅಪ್ರಿಷಿಯೇಟ್ ಕೂಡ ಮಾಡಿದ್ದಾರೆ. ಆದರೂ ನಮಗೆ ಹೆಚ್ಚು ಹಣ ಕೊಟ್ಟಿಲ್ಲ. ನಾವು ಅವರನ್ನು 1567 ಕೋಟಿ ರೂ ಕೇಳಿದ್ದೇವೆ, ಆದರೆ ನಮಗೆ ಬಂದದ್ದೇ 209 ಕೋಟಿ ರೂ.ಗಳು ನಾನು ಅದರ ಲೆಕ್ಕವನ್ನು ಆಗಲೇ ನಿಮಗೆ ಹೇಳಿದೆ. ಆಮೇಲೆ ನಾವು 11 ಲಕ್ಷದ 9 ಸಾವಿರ ಕೇಳಿದೆವು. ಆದರೆ ನಮಗೆ ಬಂದದ್ದೇ 6 ಲಕ್ಷ ಏಕೆಂದರೆ, ಬಂದಿದ್ದರಲ್ಲಿ 1 ಲಕ್ಷ 2001–02 ನೇ ಸಾಲಿನದು. ಹೀಗೆ ನಾವು ಕೇಳಿದುದ್ದರಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕೊಟ್ಟಿದ್ದಾರೆ ಮತ್ತು ಹೆಚ್ಚಿನ ರೀತಿಯಲ್ಲಿ ಸ್ಪಂದಿಸಿಲ್ಲ ನಾವು ಇಲ್ಲಿ ಸಾಕಷ್ಟು ಶಕ್ತಿ ಮೀರಿ ಕೆಲಸವನ್ನು ಮಾಡಿದ್ದೇವೆ. ನಾನು ಇವತ್ತೂ ವಾಗ್ದಾನ ಮಾಡುತ್ತೇನೆ, ಇವತ್ತು ತೊಂದರೆಯಲ್ಲಿರುವ ಬಡ ಜನತೆ ಮತ್ತು ರೈತರ ತೊಂದರೆಗಳನ್ನು ನಿವಾರಿಸತಕ್ಕಂಥ ಮತ್ತು ಅವರ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾ, ಇವತ್ತು ನನಗೆ ಇಷ್ಟೊಂದು ಕಾಲಾವಕಾಶವನ್ನು ಕೊಟ್ಟು, ಉತ್ತರವನ್ನು ಕೊಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೂ ಮತ್ತು ಬಹಳ ಶಾಂತ ರೀತಿಯಿಂದ ಕೇಳಿದಂಥ ಎಲ್ಲಾ ಮಾನ್ಯ ಸದಸ್ಯರಿಗೂ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಈಗ ಮಾನ್ಯ ಘೋರ್ಪಡೆಯವರು ಹೇಳುತ್ತಾರೆ.

+ ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಅಧ್ಯಕ್ಷರೇ, ಎಸ್.ಜಿ.ಆರ್.ವೈ ಬಗ್ಗೆ ನಾನು ಒಂದು ಮಾತನ್ನು ಪ್ರತ್ಯೇಕವಾಗಿ ಹೇಳಬೇಕಾಗುತ್ತದೆ. ಏಕೆಂದರೆ, ಎಸ್ ಜಿ ಆರ್ ವೈ ಅಡಿಯಲ್ಲಿ ಕರ್ನಾಟಕದಲ್ಲಿ ಹೋದವರ್ಷ ಏನು ಕೆಲಸವಾಗಿದೆ ಎನ್ನುವುದನ್ನು ತಾವು ಗಮನಿಸಬೇಕು. ಈ ವರ್ಷ ಏನು ಮಾಡುತ್ತಿದ್ದೇವೆ ಎನ್ನುವುದನ್ನೂ ಗಮನಿಸಬೇಕು ಏಕೆಂದರೆ, ಕೇಂದ್ರ ಸರ್ಕಾರ ಈ ಬಗ್ಗೆ ಬಹಳ ಮೆಚ್ಚುಗೆಯನ್ನು ತೋರಿಸಿದೆ. ಮೆಚ್ಚುಗೆಯನ್ನೂ ತೋರಿಸಿದ್ದಾರೆ ಮತ್ತು ನಮಗೆ ಸಹಕಾರವನ್ನೂ ಕೂಡ ಕೊಡುತ್ತಿದ್ದಾರೆ. ಎಸ್ ಜಿ ಆರ್ ವೈ ಯನ್ನು ಪ್ರತ್ಯೇಕವಾಗಿ ಹೇಳುವ ಕಾರಣವೇನೆಂದರೆ, ಕರ್ನಾಟಕಕ್ಕೆ ಎಷ್ಟು ಕಾಳು ಬಂತು, ಅದನ್ನು ನಾವು ಯಾವ ರೀತಿ ಖರ್ಚು ಮಾಡಿದ್ದೇವೆ ಎನ್ನುವ ಬಗ್ಗೆ ಬಹಳ ಚರ್ಚೆಯಾಗಿದೆ. ಕಾಳಿನ ವಿಷಯವನ್ನು ಹೇಳುವಾಗ, ಕೆಲಾಮಿಟಿ ರಿಲೀಫ್ ಅಷ್ಟೇ ಅಲ್ಲ, ಎಸ್ ಜಿ ಆರ್ ವೈ ಅಡಿಯಲ್ಲಿ

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಎಷ್ಟು ಕಾಳು ಬಂತು, ಅದು ಯವ ರೀತಿ ಉಪಯೋಗವಾಗಿದೆ ಎನ್ನುವುದೂ ಕೂಡ ಬಹಳ ಮಹತ್ವದ್ದಾಗಿದೆ. ಇದರಿಂದ ತಮಗೆ ಒಂದಷ್ಟು ಸಂತೋಷವಾಗಬಹುದು ಮತ್ತು ಆಶ್ಚರ್ಯ ಕೂಡ ಆಗಬಹುದು. ನಾನು ಬರಗಾಲದ್ದು ಹೇಳುತ್ತಿಲ್ಲ. ಎಸ್ ಜಿ ಆರ್ ವೈ ನಲ್ಲಿ ಅರ್ಧ ಕಾಳು ಮತ್ತು ಅರ್ಧ ಹಣ ಇರುತ್ತದೆ. ಈ ಹಣದಲ್ಲಿ ಮುಕ್ಕಾಲು ಭಾಗವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ, ಉಳಿದ ಕಾಲು ಭಾಗವನ್ನು ನಾವು ಕೊಡುತ್ತೇವೆ. ಇದು ಬಹಳ ಉಪಯುಕ್ತವಾದಂಥ ಒಂದು ಕಾರ್ಯಕ್ರಮ. ಇದು ರಾಷ್ಟ್ರೀಯ ಮಟ್ಟದಲ್ಲಿ ಕೂಡ ನಡೆದಿದೆ. ಕೇಂದ್ರದ ಉದ್ದೇಶ ಏನೆಂದರೆ, ಈ ಧಾಟಿಯಲ್ಲಿ ಎಲ್ಲಾ ಕಡೆ ಕೆಲಸ ನಡೆಯಲಿ, ಇಡೀ ದೇಶದಲ್ಲಿ ಕೆಲಸ ನಡೆಯಲಿ ಎನ್ನುವುದು. ಬರಗಾಲ ಬಂದಾಗ ಇಂಥ ಕೆಲಸಗಳನ್ನು ಮಾಡಿಯೂ ಕೂಡ ಎಲ್ಲರಿಗೂ ಸಮಾಧಾನವಾಗದಿದ್ದರೆ, ವಿಶೇಷವಾದಂಥ ಸಹಾಯ ಕೊಡಲಿಕ್ಕೆ ಕೆಲಾಮಿಟಿ ರಿಲೀಫ್ ಫಂಡನ್ನು ಉಪಯೋಗಿಸಬೇಕು ಎನ್ನುವುದು ಕೇಂದ್ರ ಸರ್ಕಾರದ ಧೋರಣೆಯಾಗಿದೆ. ಈಗ ನಾವು ಎಸ್ ಜಿ ಆರ್ ವೈ ಗೆ ಎಷ್ಟು ಮಹತ್ವ ಕೊಡುತ್ತಿದ್ದೇವೆ ಎಂದರೆ, ಬರಗಾಲದ ಕಾಮಗಾರಿಗಳನ್ನು ಮಾಡುವಾಗ ಕೂಡ, ಆ ಕಾಮಗಾರಿಗೆ ಎಸ್ ಜಿ ಆರ್ ವೈ ಸ್ಪೆಷಲ್ ಕಾಂಪೋನೆಂಟ್ ಎಂದು ಹೆಸರು ಕೊಟ್ಟಿದ್ದೇವೆ. ಪ್ರತ್ಯೇಕವಾಗಿ ಕೊಟ್ಟರೂ ಸಹ ಎಸ್ ಜಿ ಆರ್ ವೈ ಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಬೇಕು ಎನ್ನುವುದೇ ಸರ್ಕಾರದ ಉದ್ದೇಶ. ಹೋದವರ್ಷ ನವು ಕರ್ನಾಟಕದ 5600 ಗ್ರಾಮ ಪಂಚಾಯತಿಗಳಲ್ಲಿ 300 ಕೋಟಿ ರೂಪಾಯಿ ಹಣ ಮತ್ತು ಮೂರು ಲಕ್ಷ ಟನ್ ಆಹಾರ ಧಾನ್ಯವನ್ನು ಬಹಳ ಒಳ್ಳೆಯ ರೀತಿಯಿಂದ ಖರ್ಚು ಮಾಡಿದ್ದೇವೆ. ಈ 300 ಕೋಟಿ ರೂಪಾಯಿ ಹೇಗೆ ಬಂತು ಎಂದು ನೀವು ಕೇಳಬಹುದು. ಆ 300 ಕೋಟಿ ರೂ ನಲ್ಲಿ 150 ಕೋಟಿ ರೂ ಕೇಂದ್ರ ಸರ್ಕಾರದಿಂದ ಬಂದು. ನಮ್ಮ ಸರ್ಕಾರದಿಂದ 50 ಕೋಟಿ ರೂ ಬಂತು. ಉಳಿದ 100 ಕೋಟಿ ರೂ ಗಳನ್ನು ಗ್ರಾಮ ಪಂಚಾಯಿತಿಗಳವರು ಜೋಡಿಸಿಕೊಂಡರು. ಅದನ್ನು ಜೋಡಿಸಿಕೊಳ್ಳಲು ಗ್ರಾಮ ಪಂಚಾಯಿತಿಗಳಿಗೆ ಶಕ್ತಿ ಎಲ್ಲಿಂದ ಬಂತೆಂದರೆ, ನಮ್ಮ ಸರ್ಕಾರ, ವಿಶೇಷವಾಗಿ ಮುಖ್ಯಮಂತ್ರಿಗಳು, ಅನ್‌ಟೈಡ್ ಗ್ರ್ಯಾಂಟ್ಸನ್ನು ಗ್ರಾಮಮಟ್ಟದಲ್ಲಿ ಬೆಳೆಸಲು ಸತತವಾಗಿ ಪ್ರಯತ್ನ ಮಾಡಿದ್ದಾರೆ. 1993ರಲ್ಲಿ, ಒಂದು ಗ್ರಾಮ ಪಂಚಾಯಿತಿಗೆ ಇದು ಒಂದು ಲಕ್ಷ ರೂ ಆದರೂ ಇರಬೇಕು ಎಂದು ಕಾನೂನಿನಲ್ಲಿ ಸೇರಿಸಲಾಯಿತು. ಅದು ಕ್ರಮೇಣ ಎರಡು ಲಕ್ಷ ರೂ. ಆಗಿ ಮೂರು ಲಕ್ಷ ರೂ ಆಗಿ ಇವತ್ತು ಪ್ರತಿಯೊಂದು ಗ್ರಾಮಪಂಚಾಯಿತಿಗೆ ಐದು ಲಕ್ಷ ರೂಪಾಯಿಗಳು ಅನುದಾನವಾಗಿ ಹೋಗುತ್ತಿದೆ. ಅದನ್ನು ಸ್ಟಾಟುಟರಿ ಡೆವೆಲಪ್‌ಮೆಂಟ್ ಗ್ರ್ಯಾಂಟ್ ಎಂದು ಕರೆಯಬಹುದು. ಅಂದರೆ 5600 ಗ್ರಾಮ ಪಂಚಾಯತಿಗೆ ಹೆಚ್ಚು ಕಡಿಮೆ 300 ಕೋಟಿ ರೂಪಾಯಿ ಅನ್‌ಟೈಡ್ ಅನುದಾನ ಸರ್ಕಾರದಿಂದ ಹೋಗುತ್ತಿತ್ತು. ಯಾವ ಒಂದು ಕಾರ್ಯಕ್ರಮದಡಿಯಲ್ಲೂ ಸಹ ಅದೇ ಕಾರ್ಯಕ್ರಮದ ಪ್ರಕಾರ ಖರ್ಚು ಮಾಡಬೇಕು ಎಂದು ಇಲ್ಲ. ಇದು ಅನ್‌ಟೈಡ್ ಗ್ರ್ಯಾಂಟ್ ಎಂದಿರುವುದರಿಂದ, ಇವತ್ತು ಗ್ರಾಮಮಟ್ಟದಲ್ಲಿ ಜನತೆಗೆ ಏನು ಬೇಕೋ, ಅಂಥ ಕಾರ್ಯಕ್ರಮಗಳಿಗೆ ಉಪಯೋಗಿಸಲು ಅವಕಾಶವಿದೆ. ಈ 5 ಲಕ್ಷ 300 ಕೋಟಿ ರೂ ಏನಾಯಿತು ಎಂದು ತಾವು ಕೇಳಬಹುದು. ಇದರಲ್ಲಿ ಸುಮಾರು 200 ಕೋಟಿ ರೂ ಅನ್ನು ಗ್ರಾಮ ಪಂಚಾಯಿತಿಗಳು ನಮ್ಮ ಅವಶ್ಯಕವಾದಂಥ ಕೆಲಸಗಳಿಗೆ ಉಪಯೋಗಿಸಿದ್ದಾರೆ. ಅಂದರೆ, ಕುಡಿಯುವ ನೀರು, ಎಲೆಕ್ಟ್ರಿಸಿಟಿ ಬಿಲ್ ಇಂತವುಗಳಿಗೆ ಉಪಯೋಗಿಸಿದ್ದಾರೆ. ಇಲ್ಲದಿದ್ದರೆ ಕರ್ನಾಟಕದಲ್ಲಿ ಬಹಳ ಹಾಹಾಕಾರವಾಗುತ್ತಿತ್ತು. 200 ಕೋಟಿ ರೂ ಯನ್ನು ಅದಕ್ಕೆ ಉಪಯೋಗಿಸಿ

ನಂತರ 100 ಕೋಟಿ ರೂ ಡೆವಲಪ್‌ಮೆಂಟ್ ಗೋಸ್ಕರ ತೆಗೆದಿಡುವಂಥ ಶಕ್ತಿ, ಸಾಮರ್ಥ್ಯ ಗ್ರಾಮ ಪಂಚಾಯಿತಿಗಳಿಗೆ ಕರ್ನಾಟಕದಲ್ಲಿ ಮಾತ್ರ ಇದೆ. ಈ ದೇಶದಲ್ಲಿ ಗ್ರಾಮ ಪಂಚಾಯಿತಿಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎನ್ನುವ ಕಲ್ಪನೆ ಸ್ವಲ್ಪಮಟ್ಟಿಗೆ ನನಗೆ ಇದೆ. ಈ ದೇಶದ ಯಾವ ರಾಜ್ಯದಲ್ಲೂ ಕೂಡ ಪಂಚಾಯಿತಿಗಳಿಗೆ 5 ಲಕ್ಷ ರೂ ಅನ್‌ಟೈಡ್ ಗ್ರ್ಯಾಂಟ್ಸ್ ಇಲ್ಲ. ಇದು ನಮ್ಮ ರಾಜ್ಯದಲ್ಲಿ ಇರುವುದರಿಂದ, 300 ಕೋಟಿ ರೂ ನಲ್ಲಿ 100 ಕೋಟಿ ರೂಪಾಯಿಗಳನ್ನು ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆಗೆ ಅಂದರೆ ಎಸ್ ಜಿ ಆರ್ ವೈ ಗೆ ಉಪಯೋಗಿಸಲು ಗ್ರಾಮ ಪಂಚಾಯಿತಿಗಳಿಗೆ ಸಾಧ್ಯವಾಯಿತು. ಅಂದರೆ 300 ಕೋಟಿ ರೂನಲ್ಲಿ 150 ಕೋಟಿ ರೂ ಕೇಂದ್ರ, 50 ಕೋಟಿ ರೂ ರಾಜ್ಯ ಸರ್ಕಾರ ಮತ್ತು 100 ಕೋಟಿ ರೂ ಅನ್ನು ರಾಜ್ಯ ಸರ್ಕಾರದ ಸಹಾಯದಿಂದ ಗ್ರಾಮ ಪಂಚಾಯಿತಿಗಳು ಕೊಟ್ಟಿವೆ. ಈ 300 ಕೋಟಿ ರೂಪಾಯಿ ಹಣದ ಜೊತೆಗೆ ನಮಗೆ 3 ಲಕ್ಷ ಟನ್ ಕಾಳು ಸಿಕ್ಕಿತು. ಇದಕ್ಕೆ ನಾವು ಭಿಕ್ಷೆ ಬೇಡಬೇಕಾದುದೇನೂ ಇಲ್ಲ. ನಮ್ಮ ಅಗತ್ಯದ ಪ್ರಕಾರ ನಾವು ಉಪಯೋಗಿಸಿದ್ದೇವೆ. ತಾವು ಗಮನಿಸಬೇಕು, ನಾನು ಮೊದಲೇ ಹೇಳಿದೆ, ಅರ್ಧ ಹಣ, ಅರ್ಧ ಕಾಳು ಈ ಯೋಜನೆಯಲ್ಲಿರುತ್ತದೆ ಎಂದು. ನಾವು 300 ಕೋಟಿ ರೂಪಾಯಿಗಳನ್ನು ಉಪಯೋಗಿಸಿದಾಗ ಅವರು ನಮಗೆ 3 ಲಕ್ಷ ಟನ್ ಆಹಾರ ಧಾನ್ಯಗಳನ್ನು ಕೂಡಲೇಬೇಕು, ಅದರಂತೆ ಕೊಟ್ಟಿದ್ದಾರೆ. ಒಂದು ಲಕ್ಷ ಟನ್ ಎಂದರೆ 100 ಕೋಟಿ ರೂ ಆಗುತ್ತದೆ. ಒಂದು ಕೆ.ಜಿ. ಆಹಾರಧಾನ್ಯ 10 ರೂಪಾಯಿ ಎಂದು ನಾವು ಲೆಕ್ಕ ಮಾಡಿದರೂ, ಒಂದು ಲಕ್ಷ ಟನ್‌ಗೆ 100 ಕೋಟಿ ರೂ ಆಗುತ್ತದೆ. ಹೀಗೆ 3 ಲಕ್ಷ ಟನ್‌ಗೆ 300 ಕೋಟಿ ರೂ ಆಗುತ್ತದೆ. ಹೀಗಾಗಿ, ನಾವು ಕರ್ನಾಟಕದಲ್ಲಿ 300 ಕೋಟಿ ರೂಪಾಯಿ ಹಣ ಮತ್ತು 3 ಲಕ್ಷ ಟನ್ ಆಹಾರ ಧಾನ್ಯವನ್ನು ದಕ್ಷತೆಯಿಂದ ಉಪಯೋಗಿಸಿದ್ದೇವೆ. ನಾನು ದೆಹಲಿಗೆ ಹೋದಾಗ, ಇದನ್ನು ಹೇಳಿದಾಗ, ಅವರು ಬಹಳ ಸಂತೋಷ ಪಟ್ಟರು. ಇನ್ನೂ ಒಂದು ಕಾರ್ಯಕ್ರಮವಿದೆ. ಅದನ್ನು ಹೇಳುವುದಕ್ಕಿಂತ ಮುಂಚೆ ಇದನ್ನು ಮುಗಿಸಿಬಿಡುತ್ತೇನೆ. ಹೀಗಾಗಿ, ಈ ವರ್ಷ, ಈ ಕಾರ್ಯಕ್ರಮವನ್ನು 400 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲು ಸಾಧ್ಯವಾಯಿತು. ಕಳೆದ ವರ್ಷ ಕೇಂದ್ರ ಸರ್ಕಾರ 150 ಕೋಟಿ ರೂಪಾಯಿ ಕೊಟ್ಟರೆ ಈ ವರ್ಷ 125 ಕೋಟಿ ರೂಪಾಯಿಗಳನ್ನು ಕೊಡುತ್ತದೆಂದು ನಾನು ನಂಬಿದ್ದೇನೆ. ಏಕೆಂದರೆ ನಮ್ಮ ಫರ್‌ಫಾರ್ಮೆನ್ಸ್ ಆ ರೀತಿ ಇದೆ. ಅವರನ್ನು ಭಿಕ್ಷೆ ಬೇಡುತ್ತಿಲ್ಲ, ಇಷ್ಟು ಮಾಡಿ ತೋರಿಸಿದ್ದೇವೆ. ಆಶ್ಚರ್ಯದ ಮಾತು ಏನೆಂದರೆ ಈ 300 ಕೋಟಿ ರೂಪಾಯಿಗಳನ್ನು ಆ ವರ್ಷ ಮುಗಿಯುವುದಕ್ಕೆ 3 ತಿಂಗಳ ಮುಂಚೆಯೇ ನಾವು ಅದನ್ನು ಉಪಯೋಗಿಸಿದ್ದೇವೆ. ಕೇಂದ್ರ ಸರ್ಕಾರಕ್ಕೆ ಅದು ಗೊತ್ತಿದ್ದು ಅವರು ಆಶ್ಚರ್ಯಪಟ್ಟರು. ಬೇರೆ ರಾಜ್ಯಗಳಲ್ಲಿ ಇದು ನಡೆಯಲಿಲ್ಲ, ನೀವು ವರ್ಷ ಮುಗಿಯುವುದಕ್ಕೆ ಮುಂಚೆಯೇ 300 ಕೋಟಿ ರೂಪಾಯಿಗಳನ್ನು ಉಪಯೋಗಿಸಿದ್ದೀರಲ್ಲಾ, ಒಳ್ಳೆಯದು, ನಮಗೆ ಸಂತೋಷ ಎಂದು ಹೇಳಿದರು. ಆ ವಿಷಯದಲ್ಲಿ ಒಮ್ಮತ ಇದೆ. ಅದಕ್ಕೋಸ್ಕರ ಈ ವರ್ಷ ಅಂದರೆ 2003–2004ಕ್ಕೆ ಕೇಂದ್ರ ಸರ್ಕಾರದಿಂದ 225 ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಅಲ್ಲಿಂದ 225 ಕೋಟಿ ರೂ.ಗಳು ಬಂದರೆ ನಮ್ಮ ಸರ್ಕಾರ 75 ಕೊಟಿ ರೂಪಾಯಿಗಳನ್ನು ಕೊಡುತ್ತದೆ. ಏಕೆಂದರೆ ರೂಲ್ಸ್‌ನ ಪ್ರಕಾರ ಆ ರೀತಿ ಸಂತೋಷದಿಂದ ಸರ್ಕರ ಕೊಡುತ್ತದೆಂದು ನನ್ನ ನಂಬಿಕೆ. ಹಾಗೆಯೇ ಈ ವರ್ಷ ಗ್ರಾಮಪಂಚಾಯತಿಗಳು 100 ಕೋಟಿ ರೂಪಾಯಿಗಳನ್ನು ತೆಗೆದಿಟ್ಟೇ ಇಡುತ್ತಾರೆ. ಆದ್ದರಿಂದ ಈ ವರ್ಷದ ಕಾರ್ಯಕ್ರಮ 400 ಕೋಟಿ ರೂಪಾಯಿಗಳ ಕಾರ್ಯಕ್ರಮವಾಗುತ್ತದೆ.

ಇದು ನೇರವಾಗಿ ಎಂಪ್ಲಾಯಿಮೆಂಟ್‌ಗೆ ಸಂಬಂಧಪಟ್ಟಿದ್ದಾಗಿದೆ. ಏಕೆಂದರೆ ಇಲ್ಲಿ ಲೆಕ್ಕ ಹಾಕಿದರೆ ಇದು ಹಣ ಕೊಡುವುದು ಅಲ್ಲ, ಕಾಳು ಕೊಟ್ಟ ಹಾಗೆ ಆಗುತ್ತದೆ. ಎಷ್ಟು ಜನರಿಗೆ ಕಾಳು ಕೊಟ್ಟಂತೆ ಆಗುತ್ತದೆ? ಈ ಬೇಸಿಕ್ ಕ್ಯಾಲುಕಲೇಷನ್ ಏನಿದೆ ಅದನ್ನು ನೀವೂ ಸಹ ಮಾಡಬಹುದು. ನಮ್ಮ ಲೆಕ್ಕದ ಪ್ರಕಾರ ಒಂದು ಲಕ್ಷ ಟನ್ ಎಂದರೆ 5 ಕೆ.ಜಿ. ಕಾಳುಗೆ ಒಂದು ಮ್ಯಾನ್‌ಡೇ ಎಂದು ಇಟ್ಟುಕೊಂಡರೆ ಒಂದು ಲಕ್ಷ ಟನ್‌ಗೆ, ಒಂದು ಲಕ್ಷ ಜನರಿಗೆ 9 ತಿಂಗಳ ಕಾಲ ಕೆಲಸ ಕೊಟ್ಟಂತೆ ಆಗುತ್ತದೆ. ಅಷ್ಟು ಕಾಳು ಖರ್ಚಾಗಿದ್ದರೆ, ಅಷ್ಟು ಕೆಲಸ ಸಿಕ್ಕಿರಲೇಬೇಕು. ಏಕೆಂದರೆ ಕಾಳನ್ನು 5 ಕೆ.ಜಿ ಪ್ರಕಾರ ನಾವು ಹಂಚಿದರೆ ಅಷ್ಟು ಜನಕ್ಕೆ ಅಷ್ಟೇ ಆಗುತ್ತದೆ. ಆದಕಾರಣ ಎಸ್‌ಬಿಆರ್‌ವೈ ಅಡಿಯಲ್ಲಿ 3 ಲಕ್ಷ ಟನ್ ಕಾಳನ್ನು ನಾವು ಉಪಯೋಗಿಸಿದ್ದೇವೆಂದು ಹೇಳಿದೆ. ಅಂದರೆ 3 ಲಕ್ಷ ಜನರಿಗೆ ಕಳೆದ ವರ್ಷ ಎಸ್‌ಟಿಆರ್‌ವೈ ಅಡಿಯಲ್ಲಿ ನಾವು 9 ತಿಂಗಳ ಕೆಲಸವನ್ನು ಕೊಟ್ಟಂತಾಗುತ್ತದೆ. ನಾಲ್ಕೂವರೆ ತಿಂಗಳಿಗೆ ಲೆಕ್ಕ ಹಾಕಿದರೆ ಅದರ ಡಬಲ್ ಆಗುತ್ತದೆ. 9 ತಿಂಗಳಿಗೆ 3 ಲಕ್ಷ ಟನ್ ಆದರೆ ನಾಲ್ಕೂವರೆ ತಿಂಗಲೀಗೆ 4–5 ಲಕ್ಷ ಜನರಿಗೆ ಕೆಲಸ ಕೊಟ್ಟಂತೆ ಆಗುತ್ತದೆ. ಇದಲ್ಲದೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು – ಬರಗಾಲ ಕೆಲಸದ ಅಡಿಯಲ್ಲಿ 5 ಲಕ್ಷ ಟನ್ ಕಾಳನ್ನು ಉಪಯೋಗಿಸಿದ್ದೇವೆಂದು ಹೇಳಿದರು. ಹಾಗಾಗಿ ಈ ರಾಜ್ಯದಲ್ಲಿ 3 ಲಕ್ಷ ಟನ್ ಎಸ್‌ಜಿಆರ್‌ವೈ ಅಡಿಯಲ್ಲಿ ಮತ್ತು 5 ಲಕ್ಷ ಟನ್ ಕಾಳು ಬರಗಾಲದ ಹೆಸರಿನಲ್ಲಿ ಹೀಗೆ ಒಟ್ಟು 8 ಲಕ್ಷ ಟನ್ ಇಲ್ಲಿ ಖರ್ಚಾಗಿದೆ. ಅಂದರೆ 8 ಲಕ್ಷ ಜನತೆಗೆ 9 ತಿಂಗಳುಗಳ ಕಾಲ ಅಥವಾ 15 ಲಕ್ಷ ಜನತೆ 4–5 ತಿಂಗಳುಗಳ ಕಾಲ ಕೊಡುವಂಥ ಶಕ್ತಿ ಈ ಕಾಳಿನಲ್ಲಿ ಏನಿದೆ, ಇದಕ್ಕಗಿ ನಾವು ಈ ಮಾತು ಹೇಳುವುದಕ್ಕೆ ಹಿಂಜರಿಯುವುದಿಲ್ಲ. ಈ ಸರ್ಕಾರ, ಕೇಂದ್ರ ಸರ್ಕಾರ ಕೂಡ ಸಾಕಷ್ಟು ಕಾಳು ಗೋಡೌನ್‌ನಲ್ಲಿ ಇರುವುದರಿಂದ ಸುದೈವದಿಂದ ಈ ತೀರ್ಮಾನಕ್ಕೆ ಬಂದಿದ್ದೇವೆ. ಡೆವಲಪ್‌ಮೆಂಟ್ ಎಸ್‌ಬಿಆರ್‌ವೈ ಅಡಿಯಲ್ಲಿ ಎಸ್‌ಬಿಆರ್‌ವೈ ಎಂದು 10 ಸಾವಿರ ಕೋಟಿ ರೂಪಾಯಿಗಳ ಉಪಯೋಗ ಕಾರ್ಯಕ್ರಮಗಳನ್ನು ಇಡೀ ದೇಶಕ್ಕೆ ಹಾಕಿಕೊಂಡಿದ್ದಾರೆ. ಅದರಲ್ಲಿ ನಾವು ಹೋದ ವರ್ಷ 300 ಕೋಟಿ ರೂಪಾಯಿಗಳನ್ನು ಉಪಯೋಗಿಸಿದ್ದೇವೆ. ಈ ವರ್ಷ 4 ಲಕ್ಷ ಟನ್ ಅದನ್ನು ಉಪಯೋಗಿಸಲಿಕ್ಕೆ ಹೊರಟಿದ್ದೇವೆ. ಅದಲ್ಲದೆ, ಜಲ ರಕ್ಷಣೆ ಕಾರ್ಯಕ್ರಮ, ಇದು ಒಂದು ಬಹಳ ಪ್ರಗತಿಪರವಾದಂಥ ಕಾರ್ಯಕ್ರಮ. ಇದು ಕರ್ನಾಟಕದಲ್ಲಿ ಜನ್ಮ ತಾಳಿದೆ. ಏಕೆಂದರೆ 'ಹರಿಯಾಲಿ' ಕಾರ್ಯಕ್ರಮ ಆ ನಂತರ ಬಂದಿರುವಂಥದ್ದು ಅಂದರೆ ಈ ವರ್ಷ ಬಂತು. ನಾವು ಕಳೆದ ವರ್ಷ ಜಲ ರಕ್ಷಣೆ ಕಾರ್ಯಕ್ರಮ ಮಾಡುವುದಕ್ಕೆ ಕಾರಣವೇನೆಂದರೆ, ಎಲ್ಲಿಯವರೆಗೆ ಪ್ರತಿಯೊಂದು ಭೂಮಿಯಲ್ಲಿ, ಎಲ್ಲಾ ರೈತರ ಭೂಮಿಯಲ್ಲಿ ಈ ಕೆಲಸ ವ್ಯಾಪಕವಾಗಿ ನಡೆಯುವುದಿಲ್ಲ, ಅಲ್ಲಿಯವರೆವಿಗೂ ನೀವು ಗ್ರೌಂಡ್ ವಾಟರ್ ರೀಜನರೇಷನ್ ಮಾಡುವುದು ಬಹಳ ಕಷ್ಟ ಆಗುತ್ತದೆ ಎಂದು ಇದನ್ನು ಮಾಡಲಾಗಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ಇಡೀ ದೇಶದಲ್ಲಿ ರಾಜಸ್ಥಾನ ಬಿಟ್ಟರೆ ನಮ್ಮ ರಾಜ್ಯದಲ್ಲಿ ಏನು ಭೂಮಿ ಇದೆ ಅದು ಬಹಳ ಕೊನೆಯವರೆವಿಗೂ ಮಳೆ ಆಧಾರದ ಮೇಲೆ ವ್ಯವಸಾಯ ಮಾಡಬೇಕಾಗುತ್ತದೆ. second argest rainfed, ಅಂದ ಮೇಲೆ ನಾವು ಎಲ್ಲಾ ನದಿಗಳನ್ನು ಕೂಡಿಸಿದರೂ ಕೂಡ ಈ rainfed ಅನ್ನು ನಾವು ಬಿಡಲಿಕ್ಕೆ ಆಗುವುದಿಲ್ಲ. ಅದು ನಮ್ಮ ಮುಖ್ಯ ಆಧಾರವಾಗಿದೆ. ವಾಟರ್ ಟೇಬಲ್ ನೋಡಿದರೆ ದಿನೇ ದಿನಕ್ಕೆ ಕಡಿಮೆ ಆಗುತ್ತಿದೆ. ವರ್ಷವರ್ಷ ಕಡಿಮೆಯಾಗುತ್ತಿದೆ. ಇದರಿಂದ ಬರೀ ಕುಡಿಯುವ ನೀರು ಅಷ್ಟೇ ಅಲ್ಲ, ನಮ್ಮ ರಾಜ್ಯದ ವ್ಯವಸಾಯಕ್ಕೂ ಕೂಡ ಒಂದು ದೊಡ್ಡ ಪೆಟ್ಟು ಆಗುವಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ನವು ವಾಟರ್ ಜನರೇಷನ್ ಹೆಚ್ಚು ಮಾಡಬೇಕು,

ಸಾಯಿಲ್ ಕನ್ಸರ್ವೇಷನ್ ಮೇಲೆ ನಾವು ಏನು ಖರ್ಚು ಮಾಡುತ್ತಿದ್ದೇವೆ, ಸಾಯಿಲ್ ಕನ್ಸರ್ವೇಷನ್‌ನ್ನು ಯಾವುದೇ ಹೆಸರಿನಲ್ಲಿ ಕರೆದರೂ ಕೂಡ ಭೂಮಿ ಯಾರದು ಇದೆ, ಅವನ ಭೂಮಿಯಲ್ಲಿ ಕೆಲಸ ನಡೆಯಬೇಕಾದರೆ ಆ ರೈತನಿಗೆ ನಾವು ಸಹಾಯ ಮಾಡಬೇಕಾಗುತ್ತದೆ. ಬರೀ ಸರ್ಕಾರಿ ಭೂಮಿಯಲ್ಲಿ ಎಷ್ಟು ಮಾಡಲಿಕ್ಕೆ ಸಾಧ್ಯವಾಗುತ್ತದೆ? ಇದು ಈ ಕಾರ್ಯಕ್ರಮದ ಮುಖ್ಯ ವಿಚಾರವಾಗಿದೆ. ರೈತರ ಭೂಮಿಯಲ್ಲಿ ಎಲ್ಲಿ ಒಡ್ಡು ಹಾಕುವುದಕ್ಕೆ ಸಾಧ್ಯ ಆಗುತ್ತದೆ ಅಲ್ಲಿ ಒಡ್ಡುಹಾಕು ಎಲ್ಲಿ ಫಾರಂ ಪಾಂಡ್ ಅನದನು ಮಾಡಲಿಕ್ಕೆ ಸಾಧ್ಯ ಅದನ್ನು ಮಾಡಬೇಕೆಂದು ಹೇಳುವುದಾದರೆ, ಅದಕ್ಕೆ ನಾವು ಸಹಾಯ ಮಾಡಬೇಕಾಗುತ್ತದೆ. ಅದಕ್ಕೆ ಎಲ್ಲಾ ರೀತಿಯಲ್ಲಿ ನಾವು ಕರ್ನಾಟಕದಲ್ಲಿ ಏನು ಹೇಳಿದ್ದೇವೆಂದರೆ, ಅಂಥ ಕೆಲಸವನ್ನು ನೀವು ನಿಮ್ಮ ಹೊಲದಲ್ಲಿ ಮಾಡುವುದಾದರೆ ನಾವು ಒಂದು ದಿನಕ್ಕೆ 5 ಕೆ.ಜಿ ಕಾಳು ಕೊಡುತ್ತೇವೆ. 5 ಕೆಜಿ ಒಂದು ದಿನಕ್ಕೆ ಕೊಡಬೇಕಾಗುತ್ತದೆ ಎನ್ನುವುದು ತಮಗೆ ಗೊತ್ತಿದೆ. ಅದರ ಜೊತೆಗೆ 15 ರೂಪಾಯಿ ಕ್ಯಾಷ್ ಕೊಡಬೇಕಾಗುತ್ತದೆ. ಇದನ್ನು ಇಡೀ ರಾಜ್ಯದಲ್ಲಿ ಎಲ್ಲರೂ ಒಪ್ಪಿರತಕ್ಕಂಥ ವಿಧಾನ. ರೈತರಿಗೆ ನಾವು ಏನು ಹೇಳಿದೆವು ಎಂದರೆ ನೀನು ಮಾಡು ಹೋಗು, ನೀನು ಮಾಡಿದರೆ ನಾವು 5 ಕೇಜಿ ಕಾಳು ಕೊಡುತ್ತೇವೆ 15 ರೂಪಾಯಿಯನ್ನು ನೀನು ಕೊಡಬೇಕು, ಕೊಡಲಿಕ್ಕೆ ಆಗದಿದ್ದರೆ ನೀನು ಸ್ವಂತ ದುಡಿಯಬೇಕು. ಏಕೆಂದರೆ ಎಷ್ಟೋ ಜನ ಕರ್ನಾಟಕದಲ್ಲಿ ಸಣ್ಣ ರೈತರಿದ್ದವರು ದೊಡ್ಡ ರೈತರಾದರು. ದುಡಿಮೆ ಕಂಡರೆ ಬಹಳ ಉತ್ಸಾಹದಿಂದ ಈ ಕಾರ್ಯಕ್ರಮಕ್ಕೆ ಮುಂಚೆ ಬಂದಿದ್ದಾರೆ. ಕೆಲವರು ಈ ಕಾರ್ಯಕ್ರಮ ನಮಗೆ ಗೊತ್ತೇ ಇಲ್ಲ ಎಂದು ಹೇಳಿದರು. ಇದರಿಂದ ನನಗೆ ಸ್ವಲ್ಪ ದುಃಖ ಆಯಿತು. ಅದು ನಮ್ಮ ದೋಷ, ಇದು ನಮ್ಮ ದುರ್ದೈವ. ಏಕೆಂದರೆ ಈ ಕಾಯ್ತ್ರಮ ಅತೀ ಮುಖ್ಯಮಾದದ್ದು. ಇದನ್ನು ಪಂಚಾಯಿತಿಗಳ ಮೂಲಕ ನಡೆಸಬೇಕು. ಶ್ರೀ ಸಿಂಧ್ಯಾರವರಿಗೇ ಈ ಕಾರ್ಯಕ್ರಮ ಗೊತ್ತಿಲ್ಲ ಎನ್ನುವುದಾದರೆ ಆವಾಗ ನಾನು ಅದನ್ನು ಹೇಳಲೇ ಬೇಕಾಗುತ್ತದೆ. Let me finish my...........

ಶ್ರೀ ಪಿ.ಜಿ. ಆರ್. ಸಿಂಧ್ಯಾ :– Mr. speaker sir, it will help him ತಾವು ಮೂರು ದಿವಸಗಳ ಹಿಂದೆ ನನಗೆ ಹೇಳಿದ ಮೇಲೆ ಈ ಜಲ ರಕ್ಷಣೆ ಕಾರ್ಯಕ್ರಮದ ಬಗ್ಗೆ ನಾನು ನಮ್ಮ ತಾಲ್ಲೂಕಿನ ಅಧಿಕಾರಿಗಳ ಜೊತೆಯಲ್ಲಿ ಶುಕ್ರವಾರ ಒಂದು ಸಭೆ ಮಾಡಿದೆ. ಈ ತರಹದ ಕಾರ್ಯಕ್ರಮದ ವಿವರಗಳು ಏನು ಎಂದು ನಾನು ಅವರಿಗೆ ಕೇಳಿದೆ. ಅವರು ಏನು ಹೇಳಿದರೆಂದರೆ ಈ ಕಾರ್ಯಕ್ರಮದ ಬಗ್ಗೆ ಸಿ.ಇ.ಓ. ಕಡೆಯಿಂದ ನಮಗೆ ನಿನ್ನೆ ಟೆಲಿಗ್ರಾಂ ಬಂದಿದೆ ಎಂದು ಜಲ ಸಂರಕ್ಷಣೆ ಅಲ್ಲ. ಅದು ಕುಡಿಯುವ ನೀರಿಗೆ ಸಂಬಂಧಿಸಿದ್ದು, ಅದು ಬೇರೆ ವಿಚಾರ ನಾನು 'ಜಲ ರಕ್ಷಣೆ' ವಿಚಾರ ಒಡ್ಡನ್ನು ಹಾಕತಕ್ಕಂಥದ್ದರ ವಿಚಾರವಾಗಿ ಹೇಳುತ್ತಿರತಕ್ಕಂಥದ್ದು. ಗದಗ್‌ನಲ್ಲಿ ಮಾನ್ಯ ಡಿ. ಆರ್. ಪಾಟೀಲರು ಬಹಳ ಒಳ್ಳೆಯ ಕೆಲಸವನ್ನು ಮಾಡಿಸಿದ್ದಾರೆ ಎಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದರು. ಅದಕ್ಕಾಗಿ ನಾವೂ ಕೂಡ ಮಾಡಿಸಬೇಕು ಎನ್ನುವ ಉದ್ದೇಶದಿಂದಲೇ ಕೇಳಿದೆ. ಮೊನ್ನೆಯವರೆವಿಗೂ ಕಮ್ಯೂನಿಕೇಷನ್ ಸಹಿತ ಇಲ್ಲ.

ಶ್ರೀ ಎಂ.ವೈ. ಘೋರ್ಪಡೆ :– ಶ್ರೀ ಸಿಂಧ್ಯಾರವರೇ ನಮ್ಮ ತಪ್ಪೂ ಇರಬಹುದು, ಯಾರ ತಪ್ಪಾದರೂ ಇರಬಹುದು, ಅದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಪೂರೈಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಜಲ ರಕ್ಷಣೆ ಬಗ್ಗೆ ಎಲ್ಲಾ ಮಂತ್ರಿಗಳಿಗೂ, ಎಲ್ಲಾ ಶಾಸಕರಿಗೂ, ಶ್ರೀ ಸಿಂಧ್ಯಾರವರಿಗೂ ಸಹಿತ ಪಾಂಪ್ಲೆಟ್ ಇಟ್ಟು ಬರೆದು ಕಳುಹಿಸಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ :- ಇದು ಏನೆಂದರೆ ಮಾನ್ಯ ಮುಖ್ಯಮಂತ್ರಿಗಳೂ ಸಹ ಇಲ್ಲಿಯೇ ಇದ್ದಾರೆ. ಇದು ಪಂಚಾಯತ್ ಬೇಸ್ಡ್ ಆಕ್ಟಿವಿಟೀಸ್, ಇದು ಪಾರದರ್ಶಕವಾಗಿ ಆ ಮಟ್ಟದಲ್ಲಿ ನಡೆಯಬೇಕು. ಅಂದರೆ ಈ ಕಾರ್ಯಕ್ರಮದ ಅಡಿಯಲ್ಲಿ 5 ಕೇಜಿ ಆಗಲಿ 50 ಕೆಜಿ ಆಗಲಿ ಅಥವಾ 500 ಕ್ವಿಂಟಾಲ್ ಆಗಲಿ ಅದನ್ನು ಕೊಡುವುದಕ್ಕಿಂತ ಮುಂಚೆ ಅದಕ್ಕೆ ಒಂದು ಮಿತಿ ಇದೆ. ಕೊಡುವುದಕ್ಕಿಂತ ಮುಂಚೆ ಪಂಚಾಯತಿ ಬಾಕಿ ಏನು ಇದೆ ಅದು ಎಲ್ಲಾ ಆ ರೈತ ತುಂಬಬೇಕು ಮತ್ತು ಡಿಪಾಸಿಟ್ ಹಣ ಕೊಡಬೇಕು. ಇವತ್ತು ಕರ್ನಾಟಕದಲ್ಲಿ 7 ಲಕ್ಷ ಜನ ಈ ಅರ್ಜಿಯನ್ನು ಕೊಟ್ಟಿದ್ದಾರೆ. ಹಾಗೆಯೇ 3 ಕೋಟಿ ರೂಪಾಯಿಗಳನ್ನು ಅವರು ಬಾಕಿ ಮತ್ತು ಡಿಪಾಸಿಟ್ ಕೊಟ್ಟಿದ್ದಾರೆ. ಇದು ಸಣ್ಣ ಮಾತು ಅಲ್ಲ. ಇಷ್ಟರಮಟ್ಟಿಗೆ ಸಾಮಾನ್ಯ ಜನರಿಂದ ಯಾವ ಒಂದು ಕಾರ್ಯಕ್ರಮಕ್ಕೆ ಸಹಕಾರ ಸಿಕ್ಕಿದಾಗ ನಾವು ಅವರ ಕಡೆಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಈಗ ಎರಡು ಲಕ್ಷ ಜನ ಅರ್ಜಿದಾರರು ನಿಮ್ಮ ಜಿಲ್ಲೆಯಲ್ಲಿ ಕೂಡ ಇದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಅಪ್ಲಿಕೇಂಟ್ಸ್ ಜಾಸ್ತಿ ಇದ್ದಾರೆ. ಮತ್ತು ಅವರಿಗೆ 2 ಲಕ್ಷ ಟನ್ ಕಾಳು ಬೇಕಾಗುತ್ತದೆ. ಇಂಥ ಒಂದು ಸುಂದರವಾದಂಥ ಕಾರ್ಯಕ್ರಮ ಇದ್ದಾಗ ಅವರಿಗೆ 2 ಲಕ್ಷ ಟನ್ ಕಾಳು ಕೊಟ್ಟರೆ ಅವರು 6 ಲಕ್ಷದ ಕೆಲಸ ಮಾಡಿ ತೋರಿಸುತ್ತಾರೆ. ಇದರ ಬಗ್ಗೆ ನಮ್ಮ ಅನುಭವ ಇದೆ. ತುಮಕೂರು ಜಿಲ್ಲೆಯಲ್ಲಿ ಹೋಗಿ ನೋಡಿ. ಅಲ್ಲಿ 10 ಸಾವಿರ ರೂಪಾಯಿ ಅವನು ಕೊಟ್ಟರೆ 30 ಸಾವಿರ ರೂಪಾಯಿಗಳ ಕೆಲಸ ಮಡುತ್ತಾರೆ. ಏಕೆಂದರೆ, ರೈತ ಅಷ್ಟೊಂದು ಸಹಾಯ ಬಂದರೆ ಯಾವ ಕಾಲಕ್ಕೆ ಅದು ಸಿಗಬೇಕು? ಏಕೆಂದರೆ ಅದಕ್ಕೇ ಹೇಳುತ್ತಿದ್ದೇನೆ. ಅದಕ್ಕೇ ಹೇಳುತ್ತಿರುವುದು, ಜಲ ರಕ್ಷಣೆ ಅಡಿಯಲ್ಲಿ ಇದರ ವೈಶಿಷ್ಟ್ಯ ಎಂದರೆ ಸರ್ಕಾರದಿಂದ ಹಣ ಕೊಡುವುದರಲ್ಲಿ ಕಾಳು ಮಾತ್ರ ನಾವು ಕೊಡುತ್ತೇವೆ. ಹಣ ಅವರದ್ದು. ಈಗ ಎಸ್‌ಜೆಆರ್‌ವೈ ಬಗ್ಗೆ ನಾನು ಹೇಳಿದೆ. ಆದರೆ, ಎಸ್‌ಜೆಆರ್‌ವೈ ಪ್ರಾಪರ್‌ನಲ್ಲಿ ಕಾಳೂ ಕೊಡುತ್ತೇವೆ, ಹಣವನ್ನೂ ಕೊಡುತ್ತೇವೆ. ಅದು ಕೇಂದ್ರದ್ದಾಗಲಿ ಅಥವಾ ರಾಜ್ಯಾದ್ದಾಗಲಿ, ಯಾವುದೇ ಆಗಲಿ. ಮತ್ತೆ ಅಡಿಷನಲ್ ಪ್ಲಾನ್ ಪಂಚಾಯತಿ ಮಟ್ಟದಲ್ಲಿ ಮಾಡಿದಾಗ ನಾವು ಹಣ ಕೊಡುವುದಿಲ್ಲ, ಅವರೇ ಹಣ ಜೋಡಿಸುತ್ತಾರೆ. ಅದೇ 200 ಕೋಟಿ ರೂಪಾಯಿ. ಈ ಕಾರ್ಯಕ್ರಮದಲ್ಲಿ ಕೂಡ ನಾವು ಹಣ ಕೊಡುವುದಿಲ್ಲ. ರೈತರೇ ಮುಂಚೆ ಬಂದು ಕಾರ್ಯಕ್ರಮಕ್ಕೆ ಹಣ ಕೊಡುವುದಾದರೆ ಇದು ವ್ಯಾಪಕವಾಗಿ ಮೂವ್‌ಮೆಂಟ್ ತರಹ ಇಡೀ ಕರ್ನಾಟಕದಲ್ಲಿ ಮಾಡಲಿಕ್ಕೆ ಸಾಧ್ಯವಿದೆ. ಕರ್ನಾಟಕದಲ್ಲಿ ಮಾಡಿ ತೋರಿಸಿದರೆ ಇಡೀ ದೇಶದಲ್ಲಿ ಇದು ಹಬ್ಬುತ್ತದೆ. ಇವತ್ತು ಕೇಂದ್ರ ಸರ್ಕಾರದ ಹರಿಯಾಲಿ ಕಾರ್ಯಕ್ರಮ. ಈ ಕಾರ್ಯಕ್ರಮ ಕರ್ನಾಟಕದ ನಮ್ಮ ಜಲ ರಕ್ಷಣೆ. ಏನೆಂದರೆ, ಹೊಸ ಹೊಸ ಹೆಸರುಗಳನ್ನು ಜೋಡಿಸುವುದನ್ನು ನಾವು ಕಲೆತಿದ್ದೇವೆ. ನಮ್ಮ ಕರ್ನಾಟಕದ ಜಲ ರಕ್ಷಣೆ, ಇವತ್ತು ಕೇಂದ್ರ ಸರ್ಕಾರದ ಹರಿಯಾಲ್. ಸುದೈವದಿಂದ ಹರಿಯಾಲಿ ಕಾರ್ಯಕ್ರಮ ಅಥವಾ ಜಲ ರಕ್ಷಣೆ ಕಾರ್ಯಕ್ರಮ ಒಳ್ಳೆಯದು. ನಾನೇಕೆ ಹೇಳುತ್ತಿದ್ದೇನೆಂದರೆ, ಚರ್ಚೆಗೆ ಹೋದಾಗ, ನಾವು ಇಂಥದ್ದು ಮಾಡುತ್ತಿದ್ದೆವು ಎಂದು ಹೇಳಿದರೆ, ನೀವು ಮಾಡಿದರೆ, ಇದು ಕರ್ನಾಟಕದಲ್ಲಿ ಹುಟ್ಟಿದ ಕಾರ್ಯಕ್ರಮ ದಯವಿಟ್ಟು ಹೇಳಲಿಕ್ಕೆ ಮರೆಯಬೇಡಿ ಎಂದೂ ಕೂಡ ಹೇಳಿದೆ. ಅದು ಮರೆತು ಹೋಗುತ್ತದೆ. ಹೆಸರು ಮುಖ್ಯವಲ್ಲ. ಜಲ ರಕ್ಷಣೆ ಕಾರ್ಯಕ್ರಮ, ಹರಿಯಾಲ್ ಕಾರ್ಯಕ್ರಮ ಒಂದೇ. ಇದನ್ನು ತಾವು ತಿಳಿದುಕೊಳ್ಳಬೇಕು. ಇದೆಲ್ಲಾ ಕಾರ್ಯಕ್ರಮಗಳನ್ನು ನಾವು ಜೋಡಿಸಿದರೆ ಒಂದೊಂದು

ಗ್ರಾಮ ಪಂಚಾಯತಿಯಲ್ಲಿ 15 ಲಕ್ಷದ ಡೆವಲ್‌ಪ್‌ಮೆಂಟ್ ಈ ವರ್ಷ ಮಾಡಬಹುದು. ಹೋದ ವರ್ಷ ಕರ್ನಾಟಕದಲ್ಲಿ ನಾವು ಸರಾಸರಿ 10 ಲಕ್ಷದ ಡೆವಲಪ್‌ಮೆಂಟ್ ಅನ್ನು 2002-03 ರಲ್ಲಿ ಮಾಡಿದ್ದೇವೆ. ಈ ವರ್ಷ ನಮ್ಮ ಅನುಭವ ಕೂಡ ಜಾಸ್ತಿಯಾಗಿರುವುದರಿಂದ 15 ಲಕ್ಷ ಇದ್ದು, ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯ. ಸಿಂಧ್ಯಾರವರೇ ಈ ಪರಿಸ್ಥಿತಿ ಕರ್ನಾಟಕದಲ್ಲಿ ಯಾವ ಕಾಲಕ್ಕೂ ಇದ್ದಿಲ್ಲವೆಂದು ನಾನು ರಾಜಕೀಯವಾಗಿ ಅಲ್ಲ, ಧೈರ್ಯವಾಗಿ ಹೇಳಬಲ್ಲೆ. 15 ಲಕ್ಷ ರೂಪಾಯಿ ಬಂದರೆ ಈ ಗೌರ್ನಮೆಂಟ್ ಕೊಡುವುದು ಸ್ಟಾಟ್ಯುಟರಿ ಗ್ರಾಂಟ್ 5 ಲಕ್ಷ ರೂಪಾಯಿ ಮತ್ತೆ ಫೈನಾನ್ಸ್ ಕಮಿಷನ್‌ನಿಂದ 1 ಲಕ್ಷ ರೂಪಾಯಿ, ಒಂದೊಂದು ಗ್ರಾಮ ಪಂಚಾಯಿತಿಗೆ ಹೇಳುತ್ತಿದ್ದೇನೆ, ಮತ್ತೆ ವಾಟರ್ ಸಪ್ಲೈ ಮೇನ್‌ಟನೆನ್ಸ್‌ಗೋಸ್ಕರ 50 ಸಾವಿರ ರೂಪಾಯಿ ಖರ್ಚಾಗುತ್ತದೆ. ದುಡ್ಡಿದೆ. ಮತ್ತೆ ದೇರ್ ಒನ್ ರಿಸೋರ್ಸಸ್, ಅವರದೇ ಹಣ 1 ಲಕ್ಷದ 50 ಸಾವಿರ ರೂಪಾಯಿ ಇದೆ. ಎಸ್‌ಜಿಎಸ್‌ಆರ್‌ವೈ ಅಡಿಯಲ್ಲಿ ಇಷ್ಟು ಹೊತ್ತು ನಾನು ಹೇಳಿದೆ, ಆ ಪ್ರೋಗ್ರಾಂ ಅಡಿಯಲ್ಲಿ ಒಂದೊಂದು ಗ್ರಾಮ ಪಂಚಾಯಿತಿಗೆ 7 ಲಕ್ಷ ರೂಪಾಯಿ ಬರುತ್ತದೆ. ಇದನ್ನು ಸೇರಿಸಿದರೆ 15 ಲಕ್ಷ ರೂಪಾಯಿನ ಕಾರ್ಯಕ್ರಮ ಇದು. ಇದನ್ನು ನಾವು ಅವರ ಕಡೆಯಿಂದ ಸರಿಯಾದ ರೀತಿಯಿಂದ ಮಾಡಿಸಿದರೆ ಅದು ಬಹಳಷ್ಟು ಸಮಸ್ಯೆಗಳಾಗುತ್ತದೆ. ನಾನು ಇದರಲ್ಲಿ ಮಧ್ಯೆ ಪ್ರವೇಶಿಸಿ ಒಂದೆರಡು ಮಾತು ಕೇಳಿದಾಗ, ನಾನು ಹೇಳಿದೆ, ನನ್ನ ದೃಷ್ಟಿಯಲ್ಲಿ, ಇಂಥವೆಲ್ಲಾ ಕಾರ್ಯಕ್ರಮಗಳನ್ನು ನಾವು ಜೋಡಿಸಿದರೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಡಿದರೆ ಆಗ ಅಲ್ಲಿ ಕಾಳು ಅಭಾವ ಅನಿಸಲಿಕ್ಕಿಲ್ಲ ಮತ್ತು ಇದು ಟ್ರಾನ್ಸ್‌ಪರೆಂಟ್ ಆಗಿ ನಡೆಯುತ್ತದೆ. ಎಲ್ಲರಿಗೂ ಗೊತ್ತಿರಬೇಕಲ್ಲಾ. ಈ ರೀತಿ ಮಾಡಿದರೆ ಎಲ್ಲಿ ಖರ್ಚಾಗಿದೆ, ಯಾವ ಕೆಲಸಕ್ಕೆ ಎಂಬುದು ಗೊತ್ತಿರಬೇಕಲ್ಲಾ. ಇದನ್ನು ನಾವು ಹೇಳುವುದಕ್ಕಿಂತ ಅದಕ್ಕೆ ಮುಂಚೆ ನಾನು ಹೇಳಬಹುದು. ಇಂಥ ಕೆಲಸಕ್ಕೆ ಎಷ್ಟು ಖರ್ಚು ಮಾಡಲಿಕ್ಕೆ ಸಾಧ್ಯ? ಬರಗಾಲದ ಕೆಲಸಕ್ಕೆಂದರೆ ಕೂಲಿ ಕೊಡುವ ಕೆಲಸಕ್ಕೆ, ಲ್ಯಾಂಡ್ ಇಂಪ್ರೂವ್ ಮಾಡುವ ಕೆಲಸಕ್ಕೆ ಎಷ್ಟು ಕೊಡಬಹುದು? 400 ಕೋಟಿ ರೂಪಾಯಿ ಎಸ್‌ಜಿಆರ್‌ವೈ ಎಂದು ನಾನು ಹೇಳಿದೆ. ಈಗಾಗಲೇ ನಾನು ತಿಳಿಸಿದ್ದೇನೆ. ನಾವು ಮಾತನಾಡಿದ ಪ್ರಕಾರ, ಅದರಲ್ಲಿ 40 ಪರ್ಸೆಂಟ್ ಏನಿದೆ ಇದಕ್ಕಾಗಿ ನೀವು ತೆಗೆದಿಡಬೇಕೆಂದು ಹೇಳಿದ್ದೇನೆ. ಎಲ್ಲೋ ಒಂದು ಟಾರ್ ರಸ್ತೆ ಮಾಡುತ್ತಾರೆ, ಅದರಲ್ಲಿ 40 ಪರ್ಸೆಂಟ್. 40 ಪರ್ಸೆಂಟ್ ಎಂದರೆ 150 ಕೋಟಿ ರೂಪಾಯಿಗಳಾಗುತ್ತದೆ. ತಾವು ಗಮನಿಸಬೇಕು. ಈ 400 ಕೋಟಿ ರೂಪಾಯಿಗಳಲ್ಲಿ ಈ ಸಾಯಿಲ್ ರೀ-ಜನರೇಷನ್‌ಗೆ, ಇಂಪ್ಲಾಯ್‌ಮೆಂಟ್ ಕೆಲಸಕ್ಕೆ, 150 ಕೋಟಿ ರೂ. ಎಸ್‌ಜೆಆರ್‌ವೈನಿಂದ ಈ ವರ್ಷ ಅವರು ಖರ್ಚು ಮಾಡಿದ್ದಾರೆ. ಇನ್ನು ಅವರು ಅನ್ಯುವಲ್ ಪ್ಲಾನ್ ತಯಾರು ಮಾಡುವುದರಲ್ಲಿದ್ದಾರೆ. ಹೋದ ವರ್ಷ ಏನಾಯಿತೆಂದು ನಾನು ಹೇಳಿದೆ. ಈ ವರ್ಷ ಅನ್ಯುವಲ್ ಪ್ಲಾನ್ ತಯಾರು ಮಾಡುವಾಗ ಇದರಲ್ಲಿ 150 ಕೋಟಿ ರೂ. ಇದೆ. ಇನ್ನೂ ಯಾವ್ಯಾವ ಕಾರ್ಯಕ್ರಮದಲ್ಲಿ ಇದಕ್ಕಾಗಿ ನಾವು ಹಣ ಜೋಡಿಸಬಹುದು. ಇದು ಮುಖ್ಯವಾಗಿ ಹರಿಯಾಲ್ ಕಾರ್ಯಕ್ರಮವೇನಿದೆ, ಈ ಹಣ ಏನು ಈ ವರ್ಷ ಬರುತ್ತದೆ, ಈ ಹರಿಯಾಲ್ ಕಾರ್ಯಕ್ರಮ ಅವರು ಮಾಡಿದ್ದೂ ಹೀಗೇನೇ. Drought prone Area programme; Desert Development Programme; westernghat Development programme; waste Land Development programme. ಈ ಪ್ರೋಗ್ರಾಂನ್ನೆಲ್ಲಾ ಜೋಡಿಸಿ, ಕೇಂದ್ರ ಸರ್ಕಾರ ಒಂದು ಹೊಸ ಕಾರ್ಯಕ್ರಮ

ಹೇಳಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಅದರಲ್ಲಿ ಎಷ್ಟು ಖರ್ಚಾಗಿದೆ? ಈ ವರ್ಷ ಎಷ್ಟು ಬರಬಹುದು? 62 ಕೋಟಿ ರೂಪಾಯಿ ಬರುತ್ತದೆಂದು ಹೇಳಿ ನಾವು ಲೆಕ್ಕ ಮಾಡಿದ್ದೇವೆ. ನಮ್ಮ ಎಸ್‌ಜಿಆರ್‌ವೈ 40 ಪರ್ಸೆಂಟ್, 150 ಕೋಟಿ ರೂಪಾಯಿ ಅಲ್ಲದೆ, 62 ಕೋಟಿ ರೂಪಾಯಿ ಹರಿಯಾಲೆ ಕಾರ್ಯಕ್ರಮದ ಕೆಳಗಡೆ ಬರುತ್ತದೆ. ಮತ್ತೆ ವರ್ಲ್ಡ್‌ಬ್ಯಾಂಕ್ ಸ್ವಜಲಧಾರಾ ಪ್ರಾಜೆಕ್ಟ್ ಎಂದಿದೆ, ನೀವು ಪಂಚಾಯಿತಿಗಳಿಗೆ ಇನ್‌ವಾಲ್ವ್ ಮಾಡಿದರೆ ಮಾತ್ರ ನಾವು ಈ ಕಾರ್ಯಕ್ರಮಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ನಮಗೆ ಆಪ್‌ಷನ್ ಇಲ್ಲ. ವರ್ಲ್ಡ್‌ಬ್ಯಾಂಕ್ ಸ್ವಜಲಧಾರಾ ಪ್ರಾಜೆಕ್ಟ್‌ನಲ್ಲಿ 30 ಕೋಟಿ ರೂಪಾಯಿ ಇದೆ. ವರ್ಲ್ಡ್‌ಬ್ಯಾಂಕ್ ಏಡೆಡ್ ಜಲಸಂವರ್ಧನಾ ಪ್ರಾಜೆಕ್ಟ್ ಇದೆಲ್ಲದರ ಮಾಹಿತಿ ಇದೆ. ಅದರಲ್ಲಿ 70 ಕೋಟಿ ರೂಪಾಯಿ ಇದೆ. ಅಂದರೆ ಏನಾಯಿತು, ಎಸ್‌ಜೆಆರ್‌ವೈನ 150 ಕೋಟಿ ರೂಪಾಯಿ, ಹರಿಯಾಣದ 62 ಕೋಟಿ ರೂಪಾಯಿ, ವರ್ಲ್ಡ್‌ಬ್ಯಾಂಕ್ ಸ್ವಜಲಧಾರಾ ಪ್ರಾಜೆಕ್ಟ್‌ನ 30 ಕೋಟಿ ರೂಪಾಯಿ, ವರ್ಲ್ಡ್‌ಬ್ಯಾಂಕ್ ಏಡೆಡ್ ಜಲಸಂವರ್ಧನಾ ಪ್ರಾಜೆಕ್ಟ್‌ನ 70 ಕೋಟಿ ರೂಪಾಯಿ ಎಂದರೆ 300 ಕೋಟಿ ರೂಪಾಯಿಗಳ ಕಾರ್ಯಕ್ರಮದಲ್ಲಿ ಇದನ್ನು ಮಾಡಲಿಕ್ಕೆ ಸಾಧ್ಯ. ಬಹಿರಂಗವಾಗಿ ನಾವು ಹೇಳಿ ಇದನ್ನು ಪಾರದರ್ಶಕವಾಗಿ ಮಾಡುವುದೆಂದರೆ ನಾವು ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಒಂದು ದೊಡ್ಡ ಬೋರ್ಡ್ ಹಾಕಬೇಕು. ದಯವಿಟ್ಟು ಹಾಸ್ಯ ಮಾಡಬೇಡಿ. ಬೋರ್ಡ್ ಹಾಕುವ ಬಗ್ಗೆ ನಾನು ಹೇಳಿ ಹೇಳಿ ಸಾಕಾಗಿದೆ. ಮಾಡಿಲ್ಲ. ನಾನು ತೀರ್ಮಾನಕ್ಕೆ ಬಂದಿದ್ದೇನೆ. ಅದನ್ನು ನಾನು ಹೇಳುತ್ತೇನೆ. ದೊಡ್ಡ ಬೋರ್ಡ್ ಎಂದರೆ, ಅದಕ್ಕೆ 5–10 ಲಕ್ಷ ರೂ. ಖರ್ಚಾಗಬಹುದು. ಆಗಲಿ. ಸಿಮೆಂಟ್‌ನ ಪಕ್ಕಾ ಬೋರ್ಡ್. ಅದಕ್ಕೆ ಯಾರೂ ಮುಟ್ಟಲಿಕ್ಕಾಗಬಾರದು. ಅದಕ್ಕೆ ಅಪಾಯ ಮಾಡಲಿಕ್ಕಾಗಬಾರದು. ಅಂಥದ್ದು, ನಾವೇನು ಅನುದಾನ ಕೊಡುತ್ತೇವೆ, ಆ ಖರ್ಚಿನಲ್ಲಿ ಒಂದು 5 ಕೋಟಿ ರೂಪಾಯಿಗಳನ್ನು ಗ್ರಾಮ ಪಂಚಾಯಿತಿಗೆ ಬೋರ್ಡ್ ಮಾಲಿಕ್ಕೆ ಕೊಡುವುದು. ಅದು ದೊಡ್ಡ ಮಾತಲ್ಲ. ಆ ಬಗ್ಗೆ ಈಗಾಗಲೇ ನಾವು ಆರ್ಡರ್ ಪಾಸ್ ಮಾಡಿದ್ದೇವೆ. ಬೋರ್ಡ್ ಹಾಕಿಸಿ, ಅದರಲ್ಲಿ ಎಲ್ಲಾ ವಿವರಗಳನ್ನೂ ಹಾಕುವ ಬಗ್ಗೆ ಫಾರ್ಮಾಟ್ ಕಳುಹಿಸುತ್ತಿದ್ದೇವೆ. ಎಲ್ಲವನ್ನೂ ಅವರಿಗೇ ಬಿಡುವುದು. ಎಸ್‌ಜೆಆರ್‌ವೈ ಕಾರ್ಯಕ್ರಮ ಇಷ್ಟು, ನಿಮ್ಮ ಗ್ರಾಮ ಪಂಚಾಯಿತಿ ಕಾರ್ಯಕ್ರಮಕ್ಕೆ ಇಷ್ಟು, ಬೇರೆ ಬೇರೆ ಸರ್ಕಾರೇತರ ಕಾರ್ಯಕ್ರಮದಡಿಯಲ್ಲಿ ನಿಮ್ಮ ಪಂಚಾಯಿತಿಯಲ್ಲಿ ಖರ್ಚು ಮಾಡುವುದು ಎಷ್ಟು ಎಂದು ನಾವೆಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ಯಾವ ಕಾರ್ಯಕ್ರಮದ ಅಡಿಯಲ್ಲಿ ನಾವು ಖಚು ಮಾಡಿದ್ದೇವೆ, ಪಂಚಾಯಿತಿಯಲ್ಲಿ ಖರ್ಚು ಮಾಡಬೇಕು, ಪಂಚಾಯಿತಿ ಭೂಮಿ ಬಿಟ್ಟು, ಆಕಾಶಕ್ಕೆ ಹೋಗುವುದಕ್ಕೆ ಬರುವುದಿಲ್ಲ. ಡೆವಲಪ್‌ಮೆಂಟ್‌ನಲ್ಲಿ ಡೀ–ಸೆಂಟ್ರಲೈಜ್ ಡೆವಲಪ್‌ಮೆಂಟ್ ಮಾಡಲಿಕ್ಕೆ ಹೊರಟಾಗ, ನಾವು ಇದಕ್ಕೆ ಇಷ್ಟೊಂದು ಆದ್ಯತೆ ಕೊಡುತ್ತಿರುವಾಗ, ಕೇಂದ್ರ ಸರ್ಕಾರಕ್ಕೆ ನಾವು ಸೆಂಟ್ರಲ್ ಸ್ಕೀಮ್ಸ್ ಅನ್ನು ಡೀ–ಸೆಂಟ್ರಲೈಜ್ ಮಾಡಿ ಎಂದು ಧೈರ್ಯವಾಗಿ ಹೇಳುತ್ತಿದ್ದೇವೆ. ಸೆಂಟ್ರಲ್ ಸ್ಕೀಮ್ಸ್ ಅನ್ನು ಅಲ್ಲಿ ಕುಳಿತು ಮಾಡುವುದಲ್ಲ, ನಿಮ್ಮ ಕಡೆ ಅಷ್ಟು ಹಣ ಇದ್ದರೆ ಕೊಡಿ ಎಂದು ಹೇಳುತ್ತಿದ್ದೇವೆ. ಈ ಕಾರ್ಯಕ್ರಮಗಳು ಇನ್ನು ಮುಂದೆ ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಮತ್ತು ಅದು ಸರ್ಕಾರದ ಅಭಿಪ್ರಾಯವಾಗಲೆಂದು ನಾನು ಹಾರೈಸುತ್ತೇನೆ. ಬೋರ್ಡ್ ಹಾಕಿದರೆ ಯಾರಾದರೂ ಗ್ರಾಮಕ್ಕೆ ಹೋದರೆ ಗ್ರಾಮದ ಚಾವಡಿ ಎದುರುಗಡೆ ನಾವು ನೋಡಲಿಕ್ಕಾಗಬೇಕು. ಇಂಥದ್ದು ಹೊಸ ವಿಚಾರವಲ್ಲ. ಬಿಜಾಪುರದಲ್ಲಿ ಬಹಳ ಯಶಸ್ವಿಯಾಗಿ ಮಾಡಿದ್ದಾರೆ. ಬಿಜಾಪುರದಲ್ಲಿ ಒಂದು ಇದೆ. ಅವರಿಗೆ

ಇಂಗ್ಲೆಂಡ್‌ನಿಂದ ಕೂಡ ಸಹಾಯ ಬರುತ್ತದೆ. ಅವರು ಬಹಳ ಚೆನ್ನಾಗಿ ಮಾಡಿದ್ದಾರೆ. ಹೋದ ಸಲ ನನ್ನನ್ನು ಕರೆದುಕೊಂಡು ಹೋಗಿ ತೋರಿಸಿದರು. ದೊಡ್ಡ ಬೋರ್ಡ್ ಹಾಕಿದ್ದಾರೆ. ಆ ಬೋರ್ಡಿನಲ್ಲಿ ಜಲ ರಕ್ಷಣೆ ಕಾರ್ಯಕ್ರಮಕ್ಕೆ ಯಾವ ಸರ್ವೆ ನಂಬರ್ ಆ ಭೂಮಿ ಯಾರದು? ಆ ಭೂಮಿಯಲ್ಲಿ ಏನು ಕೆಲಸ ಮಾಡಿದ್ದಾರೆ? ಎಸ್ಟಿಮೇಟ್ ಏನಾಗಿದೆ? ಅಲ್ಲಿ ಏನು ಕೆಲಸ ನಡೆಯುತ್ತಿದೆ ಇದೆಲ್ಲ ಬೋರ್ಡ್‌ನಲ್ಲಿರಬೇಕು. ಯಾರು ಹೋದರೂ ಅಲ್ಲಿ ಹೋಗಿ ನೋಡಬಹುದು. ಶೆಟ್ಟರ್‌ರವರೇ? ದಯವಿಟ್ಟು ಇದಕ್ಕೆ ಸ್ವಲ್ಪ ಗಂಭೀರವಾಗಿ ಗಮನಹರಿಸಿ.

ಅಧ್ಯಕ್ಷರು :– ಇನ್ನೂ ಎಷ್ಟು ಸಮಯ ಬೇಕು?

ಶ್ರೀ ಎಂ.ವೈ. ಘೋರ್ಪಡೆ :– ಇದನ್ನು ನೀವು ಮಾಡಿದರೆ ಮಾತ್ರ ಇದೆಲ್ಲಾ ಅಭಿವೃದ್ಧಿ ಕೆಲಸಗಳಿಗೆ ಪಾರದರ್ಶಕವಾಗಿ ಮಾಡಲಿಕ್ಕೆ ಸಾಧ್ಯವಿದೆ.

ಅಧ್ಯಕ್ಷರು :– ಘೋರ್ಪಡೆಯವರೆ, ತಮಗೆ ಇನ್ನೂ ಎಷ್ಟು ಸಮಯ ಬೇಕು?

ಶ್ರೀ ಎಂ.ವೈ. ಘೋರ್ಪಡೆ :– ಏಕೆಂದರೆ, ಖರ್ಗೆಯವರು ಬಹಳ ಸುದೀರ್ಘವಾಗಿ ಹೇಳಿದ್ದಾರೆ. ನಾನೂ ಅವರ ಜೊತೆ ಹೆಲಿಕಾಪ್ಟರ್‌ನಲ್ಲಿ ಹೋಗಿದ್ದೆ.

ಅಧ್ಯಕ್ಷರು :– ತಮಗೆ ಇನ್ನೂ ಎಷ್ಟು ಸಮಯ ಬೇಕು?

1.40 ಪಿ.ಎಂ.

ಶ್ರೀ ಎಂ.ವೈ. ಘೋರ್ಪಡೆ :– ನನಗಿನ್ನು ಎರಡು ನಿಮಿಷ ಅವಕಾಶ ಕೊಡಿ, ನೀವು ಕಾರಿನಲ್ಲಿ ಹೋಗದೆ ಹೆಲಿಕ್ಯಾಪ್ಟರ್‌ನಲ್ಲಿ ಹೋದಿರಿ ಎಂದು ಹೇಳಿದಿರಿ ಹೆಲಿಕ್ಯಾಫ್ಟರ್‌ನಲ್ಲಿ ಹೋದರೆ ಕೆಳಗೆ ಏನಾಗುತ್ತಿದೆ. It was a great education for me. ಏಕೆಂದರೆ ಭೂಮಿ ಯಾವ ತರಹ ಇದೆ,

ಗೊಂದಲ

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಗ್ರಾಮೀಣಾಭಿವೃದ್ಧಿ ವಿಷಯ ಬಂದಾಗ ಮಾತನಾಡಬಹುದಾಗಿತ್ತು, ಬರಗಾಲದ ಬಗ್ಗೆ ಆಗಿರುವ ಅನ್ಯಾಯದ ಬಗ್ಗೆ ನಾವು ಕೇಳುತ್ತಿದ್ದೇವೆ.

ಅಧ್ಯಕ್ಷರು :– ಆಯಿತು ಎರಡು ನಿಮಿಷದಲ್ಲಿ ಮುಗಿಸುತ್ತಾರೆ ಬಿಡಿ. ಎರಡು ಗಂಟೆ ನಲವತ್ತು ನಿಮಿಷ ಶಾಂತಿಯಿಂದ ಇದ್ದೀರಿ ಇನ್ನೊಂದೆರಡು ನಿಮಿಷ ಸುಮ್ಮನಿರಿ. ಅವರು ಮುಗಿಸಿಬಿಡುತ್ತಾರೆ.

ಶ್ರೀ ಬಿ.ಆರ್. ನೀಲಕಂಠಪ್ಪ :– ಬರಗಾಲದ್ದು ಹೇಳುತ್ತಾ ಇದ್ದಾರಲ್ಲಾ ಅವರೇ ಹೇಳುತ್ತಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಬರಗಾಲದ್ದು ಮೊದಲು ಹೇಳಲಿ ನಂತರ ಬೇಕಾದರೆ ಗ್ರಾಮೀಣಾಭಿವೃದ್ಧಿ ವಿಷಯ ಬಂದಾಗ ಹೇಳಲಿ. ಜಲ ರಕ್ಷಣೆ ಆಮೇಲೆ ಹೇಳಲಿ. ಜಲ ರಕ್ಷಣೆ ಕೇವಲ ರಕ್ಷಣೆಯಾಗಿದೆಯೇ ಹೊರತು ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಿಲ್ಲ.

ಶ್ರೀ ಎಂ.ವೈ. ಘೋರ್ಪಡೆ :– ನಮ್ಮ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆಗಲೇ ಒಂದು ಮಾತು ಹೇಳಿದರು. ಕೇಂದ್ರ ಸರ್ಕಾರ ಮಾಡಿರುವ ಒಳ್ಳೆಯ ಕೆಲಸದ ಬಗ್ಗೆ ಸಾಕಷ್ಟು ಹೇಳಿದ್ದೇವೆ ಒಳ್ಳೆಯ ಕೆಲಸ ಮಾಡಿದ್ದನ್ನು ಒಳ್ಳೆಯದೆಂದು ಹೇಳುವುದಕ್ಕೆ ನಮಗೆ ಯಾವ ಸಂಕೋಚವೂ ಇಲ್ಲ. ಟೀಕೆ ಮಾಡದಿದ್ದರೆ ಯಾರಿಗೂ ಸಮಾಧಾನವಿಲ್ಲ, ಇವರಲ್ಲಿ ಟೀಕೆ ಮಾಡುವ ಒಂದು ಸಂಪ್ರದಾಯ ಬೆಳೆದಿದೆ. ನಮ್ಮ ವಾದ ಇಷ್ಟೇ ನಾನು ಡೆಪ್ಯೂಟಿ ಪ್ರೈಂಮಿನಿಸ್ಟರ್‌ಗೆ ಹಾಗೂ

ಎಲ್ಲರಿಗೂ ಹೇಳಿದ್ದೇನೆ, ನಾವು ಹೋದ ವರ್ಷ ಎಂಟು ಲಕ್ಷ ಟನ್ ಖಚು ಮಾಡಿ ತೋರಿಸಿದ್ದೇವೆ, ಪದೇ ಪದೇ ಯೂಟಿಲೈಜೇಷನ್ ಸರ್ಟಿಫಿಕೇಟ್ ಬಗ್ಗೆ ಹೇಳುತ್ತಾರೆ. ಇಪ್ಪತ್ತು ಸಾವಿರ ಕೊಡುತ್ತೇವೆ ಅದನ್ನು ಖರ್ಚು ಮಾಡಿಕೊಮಡು ಬನ್ನಿ, ಆಮೇಲೆ ಇಪ್ಪತ್ತು ಸಾವಿರ ಕೊಡುತ್ತೇವೆ ಎಂದು ಇದು ಖಂಡಿತವಾಗಿ ಸರಿಯಾದಂಥ ಪದ್ಧತಿಯಲ್ಲ. ನಾನು ಹೇಳಿದೆ, 8 ಲಕ್ಷ ಟನ್ ಖಚು ಮಾಡಿದ್ದೇವೆಂದ ಮೇಲೆ ಅದೇ ಆಧಾರದ ಮೇಲೆ ಕೊಡುವುದಾದರೆ ಕೂಡ ತಿಂಗಳಿಗೆ 75 ಲಕ್ಷ ಆದರೂ ಬರಬೇಕು, ಅದರ ಜೊತೆಗೆ ಬರಗಾಲ ಬಂದಾಗ ಸುಪ್ರಿಂ ಕೋರ್ಟಿನವರು ಒಂದು ಮಾತನ್ನು ಹೇಳಿದ್ದಾರೆ. ಏಪ್ರಿಲ್, ಮೇ, ಜೂನ್, ಈ ಮೂರು ತಿಂಗಳಿನಲ್ಲಿ ಎಷ್ಟು ಎಸ್‌ಜೆಆರ್‌ವೈಗಳಿಗೆ ಕೊಡುತ್ತೀರಿ ಅದು ಕನಿಷ್ಠ ಡಬಲ್ ಮಾಡಬೇಕೆಂದು ಹೇಳಿದ್ದಾರೆ. ಆ ಆಧಾರದ ಮೇಲೆ ಮೂರು ಲಕ್ಷ ಟನ್ ಕೊಡಿ ನಂತರ ಯಾರಾದರೂ ಬಂದು ನೋಡಿ, ಈ ವರ್ಷಕ್ಕೆ ಎಷ್ಟು ನಮೆ ಬೇಕಾಗುತ್ತದೆ ಎಂದು ಈ ಮೂರು ಲಕ್ಷ ಟನ್ ಅದು ನನಗೆ ಅನ್ನಿಸುತ್ತದೆ ಅದು ಅಲಾಟ್‌ಮೆಂಟ್, ಅವರು ಅಲಾಟ್‌ಮೆಂಟ್ ಕೊಟ್ಟ ತಕ್ಷಣ ಇಲ್ಲಿಗೆ ಕಾಳು ಬಂದು ಬೀಳುವುದಿಲ್ಲ, ಅದನ್ನು ತರಿಸಬೇಕಾದರೆ, ಅಲ್ಲಿಂದ ಗೋದಾಮುನಿಂದ ತರಬೇಕಾದರೆ ಬಹಳ ಕಷ್ಟವಾಗುತ್ತದೆ. ಅಲಾಟ್‌ಮೆಂಟ್ ಮಾಡಿ ಎಂದು ಹೇಳಿದ್ದು ಬಹಳ ನ್ಯಾಯವಾದಂಥ ಬೇಡಿಕೆ, ನಾನು ರಾಜಕೀಯ ಮಾತನಾಡಲಿಕ್ಕೆ ಹೋಗುವುದಿಲ್ಲ, ಆದರೆ ಇದನ್ನು ನಾವು ಹೇಳುವುದಕ್ಕಾಗುವುದಿಲ್ಲ. ಅವರದೊಂದು ಲೆಕ್ಕ ಇದೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಾಗ, ಇಷ್ಟು ಲೆಕ್ಕದಲ್ಲಿ ಕೊಡಬೇಕು, ಅದೇ ಲೆಕ್ಕ ಆಂಧ್ರಕ್ಕೆ ಅನುಸರಿಸಿದರೆ ಅವರಿಗೆ 43 ಲಕ್ಷ ಟನ್ ನಮಗೆ 7 ಲಕ್ಷ ಟನ್ ಖಂಡಿತವಾಗಿ ಬರುತ್ತಿರಲಿಲ್ಲ. ಬಡತನದ ಆಧಾರದ ಮೇಲೆ ಕೊಡುವುದಾದರೆ ಆಂಧ್ರದ ಬಡತನ ನಮಗಿಂತಲೂ 5 ರಷ್ಟು ಅಂತೂ ಖಂಡಿತವಾಗಿಲ್ಲ ಆದಕಾರಣ ಅದಕ್ಕಾಗಿ ನಾನು ಹೇಳಿದೆ. ನಮಗೆ ಅರ್ಥವಾಗುತ್ತದೆ ಗಮನದಲ್ಲಿಟ್ಟುಕೊಂಡು ತಕ್ಷಣ ಮೂರು ಲಕ್ಷ ಟನ್ ಕೊಡಿ ನಮ್ಮ "ಹರಿಯಾಲಿ" ಎಂದರೆ ಜಲರಕ್ಷಣೆ ಕಾರ್ಯಕ್ರಮಕ್ಕೆ ಸತತವಾದಂಥ ನೇರವಾದಂಥ ಸಾಕಷ್ಟು ಸಹಾಯ ಅಲ್ಲಿಂದ ಬರಲಿ ಎನ್ನುವ ನಮ್ಮ ವಾದವನ್ನು ಅವರ ಮುಂದೆ ಇಟ್ಟಿದ್ದೇವೆ, ವಿರೋಧ ಪಕ್ಷ ಎಲ್ಲರೂ ಕೂಡ ಈ ವಾದಕ್ಕೆ ಸಂಪೂರ್ಣವಾಗಿ ಸಮರ್ಥನೆ ಮಾಡುತ್ತಾರೆಂದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :– ಸನ್ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ಲಾರಿಫಿಕೇಷನ್.

ಶ್ರೀ ಶಿವಾನಂದ ಎಸ್ ಪಾಟೀಲ್ :– ಅಧ್ಯಕ್ಷರೆ, ನನ್ನದೊಂದು ತಿದ್ದುಪಡಿ ಮೂವ್ ಮಾಡಿದ ಮೇಲೆ ನಂತರ ನಾವೂ ಕೂಡ ಚರ್ಚೆಯಲ್ಲಿ ಭಾಗವಹಿಸಬಹುದು.

ಶ್ರೀ ಕರಡಿ ಸಂಗಣ್ಣ :– ತೋಟಗಾರಿಕೆ ಬೆಳೆಗಳ ಮೇಲೆ ಮಾನ್ಯ ಗೃಹ ಸಚಿವರು ಏನೂ ಹೇಳಿಕೆ ಮಾಡಲೇ ಇಲ್ಲ. ಅದರ ತೀವ್ರತೆಯನ್ನು ರಾಜ್ಯ ಸರ್ಕಾರ ತಿಳಿದುಕೊಂಡಿದೆಯೇ ಇಲ್ಲವೋ ಎಂಬ ಬಗ್ಗೆ ಕ್ಲಾರಿಫೈ ಮಾಡಿ ಇಲ್ಲಿ ಹೇಳಬೇಕಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ತೆಂಗಿನಮರದ ಬಗ್ಗೆ ನಾವು ಇಲ್ಲಿ ಪ್ರಸ್ತಾಪಿಸಿದ್ದೇವೆ,

Mr. Speaker :- I have allowed Mr. Shettar to ask any clarification ನಾನು ಮಾನ್ಯ ಶೆಟ್ಟರ್ ಅವರಿಗೆ ಪರ್ಮಿಷನ್ ಕೊಟ್ಟಿದ್ದೇನೆ, ಮಾನ್ಯ ಕೃಷ್ಣಮೂರ್ತಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಅವರು ವಿರೋಧ ಪಕ್ಷದ ನಾಯಕರು ಆಗಿರುವುದರಿಂದ ಅವರಿಗೆ ಫಸ್ಟ್ ಚಾನ್ಸ್ ಕೊಡಬೇಕು, ನಾನು ಅವರಿಗೆ ಕೊಟ್ಟಿದ್ದೇನೆ, ಮಾನ್ಯ ಶೆಟ್ಟರ್‌ರವರೇ, ತಾವು ಹೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಏನು ಅನ್ಯಾಯ ಆಗಿದೆ ಎಂದು ಅವರು ವರದಿಯನ್ನು ತರಿಸಿಕೊಂಡು ನೋಡುವುದು ಬೇಡವೇ?

ಅಧ್ಯಕ್ಷರು :– ನೋಡಿ ಇವರದ್ದು ಆದ ಮೇಲೆ ಸೋಮಶೇಖರ್, ನಂತರ ಸಿಂಧ್ಯಾರವರು ನಂತರ ಚನ್ನಿಗಪ್ಪನವರು, ಇವರೆಲ್ಲರದ್ದೂ ಆದ ಮೇಲೆ ನಂತರ ನೀವು ಕೇಳಿ. ನನ್ನ ಅಭ್ಯಂತರವಿಲ್ಲ ತಮಗೂ ಅವಕಾಶ ಕೊಡುತ್ತೇನೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಶಿವಾನಂದ ಎಸ್ ಪಾಟೀಲ್ :– ನನ್ನ ಅಮೆಂಡ್‌ಮೆಂಟ್ ಮೂವ್ ಆಗಲಿ.

ಶ್ರೀ ಕಾಗೋಡು ತಿಮ್ಮಪ್ಪ :– ಮೂವ್ ಮಾಡಿದಾದ ಮೇಲೆ ಅವರು ಮಾತನಾಡಿದ್ದಾರೆ. ಅದಕ್ಕೆ ಉತ್ತರ ಕೊಟ್ಟಿದ್ದಾರೆ, ಇದರಲ್ಲಿ ಏನು ಪ್ರಶ್ನೆ?

ಶ್ರೀ ಡಿ.ಬಿ. ಚಂದ್ರೇಗೌಡ :– ಏನು clarification? No. Not in rule 159. It is a motion.

ಶ್ರೀ ಆರಗ ಜ್ಞಾನೇಂದ್ರ :– ನೀವು ಹೇಳಿದ್ದೆಲ್ಲಾ ಕೇಳಿಕೊಂಡು ಹಾಗೇಯೇ ಹೋಗಿ ಬಿಡಬೇಕು.

ಶ್ರೀ ಶಿವಾನಂದ ಎಸ್ ಪಾಟೀಲ್ :– ನನ್ನದೊಂದು ಅಮೆಂಡ್‌ಮೆಂಟ್ ಮೋಷನ್ ಇದೆ.

Sri D.B. Chandregowda :- You can move that.

ಗೊಂದಲ

ಶ್ರೀ ಕೆ.ಎಂ. ಕೃಷ್ಣಮೂತಿ:– ತೆಂಗಿನ ಬೆಳೆ ಏನಾಗಿದೆ, ಅಡಿಕೆ ಬೆಳೆ ಏನಾಗಿದೆ ಅದರ ಬಗ್ಗೆ ಏನೂ ಹೇಳುತ್ತಿಲ್ಲ. ಕೇವಲ ಬರಗಾಲಕ್ಕೆ ಮಾಡಿರುವುದು, ಕೇಂದ್ರ ಸರ್ಕಾರ ಅಕ್ಕಿ ಕೊಟ್ಟಿರುವುದು; ರೈತರಿಗೆ ಕಾಮಗಾರಿಯಲ್ಲಿ ಆಗಿರುವ ಅನ್ಯಾಯವನ್ನು ಯಾರೂ ಕೇಳುತ್ತಿಲ್ಲ.

ಅಧ್ಯಕ್ಷರು :– ಶೆಟ್ಟರ್ ಅವರೇ, We will take up at 3 o' clock once again.

ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಬೆಳೆ ಹಾನಿಯಾಗಿರುವುದರ ಬಗ್ಗೆ ಅವರೇನೂ ಘೋಷಣೆ ಮಾಡಲಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :– ನನ್ನದೊಂದು ಅಮೆಂಡ್‌ಮೆಂಟ್ ಇದೆ ಮೂವ್ ಮಾಡುತ್ತೇನೆ.

ಅಧ್ಯಕ್ಷರು :– ಆಯಿತು ಇಲ್ಲಿ ಒಂದು ಅಮೆಂಡ್‌ಮೆಂಟ್ ಇದೆ ಸ್ವಲ್ಪ ತಾಳಿ.. ರೂಲ್ ಪರ್ಮಿಟ್ ಮಾಡುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಅಮೆಂಡ್‌ಮೆಂಟ್ ಮೂವ್ ಮಾಡುವುದಕ್ಕೆ ಪ್ರಾವಿಷನ್ ಇರುವುದರಿಂದಲೇ, ನಾನು ಇದನ್ನು ಮೂವ್ ಮಾಡಿರುವುದು.

ಅಧ್ಯಕ್ಷರು :– ಆಯಿತು ತಾವು ತಿದ್ದುಪಡಿಗೆ ಮುವ್ ಮಾಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಅಧ್ಯಕ್ಷರೆ, ಈಗಾಗಲೇ ಬರಗಾಲದ ಚರ್ಚೆಯ ಹಿನ್ನೆಲೆಯಲಿಲ್ಲ ನಾನು ಮಾತನಾಡಿ ಮುಗಿಸಿದ್ದೇನೆ, ಆ ಸಂದರ್ಭದಲ್ಲಿಯೇ ಬರಗಾಲದ ಕಾಮಗಾರಿಗೆ ಸರ್ಕಾರ ಕೈಗೊಂಡಿರತಕ್ಕ ಕಾಮಗಾರಿಗಳು ಒಂದು ದೀರ್ಘಾವದಿ ಪರಿಹಾರವನ್ನು ಸೂಚಿಸದೇ ಇರುವುದರಿಂದ, ರಾಜ್ಯದಲ್ಲಿ ಈ ಬರಗಾಲ ಸತತವಾಗಿ ಮೂರು ವರ್ಷಗಳಿಂದ ಆವರಿಸಿರುವುದರಿಂದ ನಾನು ಒಂದು ತಿದ್ದುಪಡಿಯನ್ನು ಮಂಡಿಸಿದ್ದೇನೆ, ಆ ತಿದ್ದುಪಡಿಗೆ ಪ್ರಾಯಶಃ ಇಡೀ ಸದನ ಒಪ್ಪಿಗೆ

ನೀಡಿದರೆ ಪ್ರಾಯಶಃ ಒಂದು ಶಾಶ್ವತವಾಗಿರತಕ್ಕಂಥ ಬರಗಾಲಕ್ಕೆ ನಿವಾರಣೆ ಮಡಲಿಕ್ಕೆ ಒಂದು ದಿಕ್ಕನ್ನು ನಾವು ಸೂಚಿಸಿದ ಹಾಗೆ ಆಗುತ್ತದೆಂದು ಈ ಸದನದ ಸದಸ್ಯರಿಗೆ ನಾನು ವಿನಂತಿಯನ್ನು ಮಾಡಿಕೊಂಡು ಈ ತಿದ್ದುಪಡಿಯನ್ನು ಮಂಡಿಸಲಿಕ್ಕೆ ನಾನು ತಮ್ಮಲ್ಲಿ ಅವಕಾಶವನ್ನು ಕೋರುತ್ತಿದ್ದೇನೆ.

3. ವಿಷಯ:- ನಿಯಮ 159ರ ಪ್ರಸ್ತಾವನೆಗೆ ತಿದ್ದುಪಡಿ ಮಂಡನೆ

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) :- ಮಾನ್ಯ ಅಧ್ಯಕ್ಷರೆ, ನಿಯಮ 159ರ ಪ್ರಸ್ತಾವನೆಯ ಮೂಲಕ ಸಾರ್ವಜನಿಕ ಹಿತದೃಷ್ಟಿಯ ವಿಷಯಕ್ಕೆ ನೀಡಿರುವ ಪ್ರಸ್ತಾವಕ್ಕೆ ನಾನು ಈ ಕೆಳಕಂಡಂತೆ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಬರಗಾಲವು ಮರುಕಳಿಸುತ್ತಿರುವುದರಿಂದ, ಈಗಾಗಲೇ ಕೈಗೊಂಡಿರುವ ಬರಗಾಲ ಕಾಮಗಾರಿಗಳು ಶಾಶ್ವತ ಪರಿಹಾರದ ದಿಕ್ಕನ್ನು ತೋರಿಸದೇ ಇರುವುದರಿಂದ, ಈಗಾಗಲೇ ಆಯವ್ಯಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆಗೆ ವಿನಿಯೋಗಿಸಿದೆ ಹಣವನ್ನು ದ್ವಿಗುಣಗೊಳಿಸಿ ಹಗೂ ಈ ವರ್ಷ ಕೂಡ ರೈತರ ಬಡ್ಡಿಯನ್ನು ಮನ್ನಾ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸುವುದು.

ತಿದ್ದುಪಡಿಯನ್ನು ಮಂಡಿಸಲಾಯಿತು

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಅದನ್ನು ಸಭೆ ಒಪ್ಪಿಕೊಳ್ಳಬೇಕು, ರೈತರಿಗಾಗುವ ಅನ್ಯಾಯವನ್ನು ಸರಿಪಡಿಸುವುದಕ್ಕೋಸ್ಕರ ಇವತ್ತು ಮಾನ್ಯ ಶಿವಾನಂದ ಪಾಟೀಲ್‌ರವರು ಕೇಳಿದ್ದಾರೆ, ಹೀಗಾಗಿ ಅದು ರಾಜ್ಯಕ್ಕೆ ಅನ್ವಯಿಸುವಂಥ ಕಾರ್ಯಕ್ರಮವಾಗಬೇಕು.

ಅಧ್ಯಕ್ಷರು :- ಸ್ವಲ್ಪ ತಡೀರಿ, ತಿದ್ದುಪಡಿ ಮಂಡಿಸಲಾಗಿದೆ ನಾವು ಈಗ ಅದನ್ನು ಅಡ್ಮಿಟ್ ಮಾಡಬೇಕೊ, ಅಥವಾ ಬೇಡವೇ ಎನ್ನುವುದಕ್ಕೆ ನಮ್ಮ ಕಾನೂನಿನ ಪ್ರಕಾರ ಮತಕ್ಕೆ ಹಾಕುತ್ತೇವೆ.

ತಿದ್ದುಪಡಿ ಪ್ರಸ್ತಾಪವನ್ನು ಮತಕ್ಕೆ ಹಾಕುವುದು

ಅಧ್ಯಕ್ಷರು :- ಪ್ರಸ್ತಾಪ ಏನೆಂದರೆ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಬರಗಾಲವು ಮರುಕಳಿಸುತ್ತಿರುವುದರಿಂದ ಈಗಾಗಲೇ ಕೈಗೊಂಡಿರುವ ಬರಗಾಲ ಕಾಮಗಾರಿಗಳು ಶಾಶ್ವತ ಪರಿಹಾರದ ದಿಕ್ಕನ್ನು ತೋರಿಸದೇ ಇರುವುದರಿಂದ; ಈಗಾಗಲೇ ಆಯವ್ಯಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆಗೆ ವಿನಿಯೋಗಿಸಿದ ಹಣವನ್ನು ದ್ವಿಗುಣಗೊಳಿಸಿ ಹಾಗೂ ಈ ವರ್ಷ ಕೂಡಾ ರೈತರ ಬಡ್ಡಿಯನ್ನು ಮನ್ನಾ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸುವುದು."

ತಿದ್ದುಪಡಿ ಪ್ರಸ್ತಾಪ ತಿರಸ್ಕರಿಸಲ್ಪಟ್ಟಿತು.

ಗೊಂದಲ

ಅಧ್ಯಕ್ಷರು :- ನೋ, ಅಲ್‌ರೈಟ್ ಡಿವಿಜನ್ ಬೇಕೆ? ಹೇಳಿ, ಧ್ವನಿಮತದಲ್ಲಿ ತಿದ್ದುಪಡಿ ಪ್ರಸ್ತಾವ ತಿರಸ್ಕೃತವಾಗಿದೆ...

ಅಧ್ಯಕ್ಷರು :- ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು. ತಿದ್ದುಪಡಿ ಪ್ರಸ್ತಾವ ಧ್ವನಿಮತದ ಮೂಲಕ ತಿರಸ್ಕೃತವಾಗಿದೆ, ಈ ವಿಷಯ ಇಲ್ಲಿಗೆ ಮುಕ್ತಾಯವಾಗಯಿತು ಬಿಡಿ.

ಶ್ರೀ ಎ. ರಾಮದಾಸ್ :- ಮಾನ್ಯ ಅಧ್ಯಕ್ಷರೇ, ನಾವು ಇದನ್ನು ಡಿಮ್ಯಾಂಡ್ ಮಾಡುತ್ತಿದ್ದೇವೆ, ಇದನ್ನು ದಯಮಾಡಿ ವೋಟಿಂಗ್ ಪ್ರಾವಿಜನ್ ಮಾಡಿಕೊಡಬೇಕು.